
# ಅಪರಂಜಿ

ತಿಳಿನಗೆಯ ಕಾರಂಜಿ

ಡಿಸೆಂಬರ್ 2017


ನನ್ನ ಚಿಕ್ಕಂದಿನಲ್ಲೇ ನನ್ನ ತಂದೆ ತಾಯಿ ಬೇರೆ ಆಗಿಬಿಟ್ರು!

# ಅಪರಂಜಿ

ತಿಳಿನಗೆಯ ಕಾರಂಜಿ



ಸಂಪುಟ 35
ಸಂಚಿಕೆ – 3
ಡಿಸೆಂಬರ್ – 2017

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಉಲ್ಲಾಸ್ ರಾಯಸಂ
ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | ***ಪ್ರಕಾಶ್*** | 2 |
| ನಮ್ಮ ನಿಮ್ಮಲ್ಲಿ | ***ಶಿವಕುಮಾರ್*** | 3 |
| ಮುಕ್ಕಟಿರ ಮುತ್ತಣ್ಣ.... | ***ವತ್ಸಲ*** | 5 |
| ಹೆಡ್ ಹಂಟರ್ಸ್ | ***ಪ್ರಕಾಶ್*** | 10 |
| ನ್ಯೂಟನ್ನಿನ ನಿಯಮವೂ... | ***ಗಾಯತ್ರಿ ಮೂರ್ತಿ*** | 12 |
| ತುಂತುರು | ***ದಂನಆ*** | 15 |
| ನಮ್ಮ ರಾಹುನ ನಮಗೆ.... | ***ಪಾಲಹಳ್ಳಿ ವಿಶ್ವನಾಥ್*** | 16 |
| ಸೂತ್ರಗಳ ಸುಸೂತ್ರತೆಗಳು | ***ಎನ್. ರಾಮನಾಥ್*** | 18 |
| ಸ್ಪೇರ್ ಪಾರ್ಟ್ಸ್ ಕ್ಲಿನಿಕ್ | ***ಸಿ. ಆರ್. ಸತ್ಯ*** | 22 |
| ವೈ(ಅ)ಜ್ಞಾನಿಕ...... | ***ಆನಂದ*** | 24 |
| ವಿಜ್ಞಾನಿಗಳ ಬದುಕಿನಲ್ಲಿ... | ***ಬೇಲೂರು ರಾಮಮೂರ್ತಿ*** | 26 |
| ವಿಜ್ಞಾನದ ಹಿಂದೆ..... | ***ರೇಖಾ ಹೆಗಡೆ ಬಾಳೇಸರ*** | 28 |
| ವಿಜ್ಞಾನದತ್ತ ಓರನೋಟ | ***ಶರತ್ ಕಲ್ಕೋಡ್*** | 30 |
| ವಿಜ್ಞಾನಕ್ಕೆ ಒಂದು..... | ***ಎಂ. ಎಸ್. ನರಸಿಂಹಮೂರ್ತಿ*** | 32 |
| ದೀಡ್‌ಶಾಣ್ಯರೂ....... | ***ನಾಗೇಶ್ ಹೆಗಡೆ*** | 35 |
| ಪಂಚ್ ಪದ್ಯಗಳು | ***ಎಚ್. ಡುಂಡಿರಾಜ್*** | 39 |
| ವ್ಯಂಗ್ಯ ಮೆಲುಕು | ***ಪ್ರಕಾಶ್ ಶೆಟ್ಟಿ*** | 40 |

**ಮುಖಪುಟ ವ್ಯಂಗ್ಯಚಿತ್ರ – ಇಂಟರ್ನೆಟ್‌ನಿಂದ**

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

*ಮುದ್ರಣ: ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



''ಗಡುವು ಮುಗಿಯಿತು; ಗುಂಡಿ ಉಳಿಯಿತು''

*● ಆಹಾ ! ಶೀರ್ಷಿಕೆ ಎಂದರೆ ಹೀಗಿರಬೇಕು !!*

★★★

ನಮ್ಮದು ಸಾಧನಾ ಪರ್ವ – ಮಾನ್ಯ ಮುಖ್ಯಮಂತ್ರಿಗಳು

*● ಬರೀ 'ಸಾ' ಏಕೆ ??*

★★★

ಮಲ್ಯ, ಲಲಿತ ಹಸ್ತಾಂತರಕ್ಕೆ ಮನವಿ – ಸುದ್ದಿ

*● ಅರಣ್ಯ ರೋಧನ !!*

★★★

ಟಿಪ್ಪು ಜಯಂತಿ; ಕಟ್ಟೆಚ್ಚರ – ಸುದ್ದಿ

*● ಮೈಸೂರು ಹುಲಿ ನಕ್ಕಿತಂತೆ !!*

★★★

ಕುಮಾರವ್ಯಾಸನ ಬದುಕು, ಕಾವ್ಯ ದರ್ಶನ ದೊಡ್ಡದು – ಪತ್ರಿಕೆ

*● ಕಲಿಯುಗ ದ್ವಾಪರವಾಗುವುದೇ ?!*

★★★

'ನಗರದಲ್ಲಿ ಮುಂದುವರಿದ ಲೋಡ್ ಶೆಡ್ಡಿಂಗ್' – ಸುದ್ದಿ

*● ಇದನ್ನ ಕತ್ತಲಲ್ಲಿ ಹೇಗೆ ಓದುವುದು ?!*

★★★

'ರಾಜ್ಯಶಾಸ್ತ್ರ ವಿಭಾಗದ ಪಿ.ಹೆಚ್.ಡಿ. ಪ್ರಶ್ನೆಪರೀಕ್ಷೆಯಲ್ಲಿ ನಕಲು'
ಹೋಗಲಿ ಬಿಡಿ, ಹೇಗೂ ರಾಜ್ಯಶಾಸ್ತ್ರ ತಾನೆ?!

★★★

ಪ್ಯಾರಡೈಸ್ ದಾಖಲೆಯಲ್ಲಿ 714 ಭಾರತೀಯರ ಹೂಡಿಕೆ ರಟ್ಟು – ಪತ್ರಿಕೆ

*● ಇದನ್ನ ನರಕ ದಾಖಲೆ ಎಂದು ಈಗ ಕರೆಯಬಹುದು !!*

★★★

## ನಮ್ಮ ನಿಮ್ಮಲ್ಲಿ

*ಮೊಟ್ಟಮೊದಲಿಗೆ ಅಪರಂಜಿಯ ಮುಡಿಗೆ ಗರಿಯನ್ನೇರಿಸುವಂತಹ ಸುದ್ದಿಯೊಂದನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸುವೆ. ನಮ್ಮ ಉಪ ಸಂಪಾದಕರಾದ* **ಶ್ರೀ ಬೇಲೂರು ರಾಮಮೂರ್ತಿ***ಯವರನ್ನು ಲಕ್ಕಸಂದ್ರ ವಾರ್ಡ್‌ನ ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಡ್ ಮಟ್ಟದ* **ಮೊದಲ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರನ್ನಾಗಿ** *ಆಯ್ಕೆ ಮಾಡಿರುವ ಸುದ್ದಿ ತಿಳಿದು ಅಪರಂಜಿ ಬಳಗದ ಸಂತಸ ಉಕ್ಕಿ ಹರಿಯುವಂತಾಗಿದೆ. ನವೆಂಬರ್ ಮೂವತ್ತರಂದು ನಡೆಯುವ ಈ ಸಮ್ಮೇಳನದಲ್ಲಿ ಕವಿಗೋಷ್ಠಿ, ಹಾಸ್ಯ ಗೋಷ್ಠಿ ಇವೇ ಮೊದಲಾಗಿ ಅನೇಕ ಸಾಹಿತ್ಯಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ನಮ್ಮವರೇ ಆದ ರಾಮನಾಥ್ ಅವರ ನಗೆ ಭಾಷಣವೂ ಇರುತ್ತದೆ. ಬೇಲೂರು ರಾಮಮೂರ್ತಿ ದಂಪತಿಗಳಿಗೆ ಅಪರಂಜಿ ಬಳಗದ ಪರವಾಗಿ ಹಾರ್ದಿಕ ಅಭಿನಂದನೆಗಳು.*

*ಇನ್ನೊಂದು ಸಿಹಿಸುದ್ದಿಯೆಂದರೆ ನಮ್ಮ ಕೊರವಂಜಿ ಅಪರಂಜಿ ಟ್ರಸ್ಟ್‌ಗೆ ಟ್ರಸ್ಟಿಯಾಗಿ* **ಶ್ರೀ ಉಲ್ಲಾಸ್ ದಾಯಸಂ** *ಅವರು ಸೇರ್ಪಡೆಯಾಗಿದ್ದಾರೆ. ಬೀಚಿ ವಿದ್ಯಾ ಕೇಂದ್ರ ಟ್ರಸ್ಟ್‌ನ ಮುಖ್ಯಸ್ಥರಾದ ಶ್ರೀ ಉಲ್ಲಾಸ್ ಖ್ಯಾತ ನಗೆ ಸಾಹಿತಿ ಬೀಚಿಯವರ ಮೊಮ್ಮಕ್ಕಳು. ನಮ್ಮ ಹೊಸ ಟ್ರಸ್ಟಿಗೆ ಅಪರಂಜಿ ಬಳಗದ ಆದರದ ಸ್ವಾಗತ.*

**ಈ** ತಿಂಗಳ ಸಂಚಿಕೆಯನ್ನು ವಿಜ್ಞಾನ ವಿಶೇಷಾಂಕವನ್ನಾಗಿ ಹೊರತರುತ್ತಿದ್ದೇವೆ. ತರ್ಕಬದ್ಧ ಚಿಂತನೆ ವಿಜ್ಞಾನದ ಮೂಲಮಂತ್ರ. ತರ್ಕವನ್ನು ತಲೆಕೆಳಗಾಗಿಸಿ ನಗೆಹೊಮ್ಮಿಸುವುದು ಹಾಸ್ಯದ ಜೀವಾಳ. ಇವೆರಡಕ್ಕೂ ಎಲ್ಲಿನ ಸಂಬಂಧವಯ್ಯಾ ಎಂದು ನೀವು ಕೇಳುವ ಮುಂಚೆ ನಿಮಗೊಂದು ವಿಷಯ ತಿಳಿಸಿಬಿಡುತ್ತೇನೆ. ತರ್ಕವನ್ನು ತಲೆಕೆಳಗಾಗಿಸಬೇಕಾದರೆ ತರ್ಕದ ಬಗ್ಗೆ ಚೆನ್ನಾಗಿ ತಿಳಿದಿರುವವರಿಗೇ ಸಾಧ್ಯ. ಹಾಗಾಗಿ ವಿಜ್ಞಾನಿ ಮತ್ತು ನಗೆಗಾರ ಇಬ್ಬರಿಗೂ ತರ್ಕ ಅತ್ಯಗತ್ಯ. ಈ ಸತ್ಯವನ್ನು ಮನಗಂಡು ನಾವು ಈ ಡಿಸೆಂಬರ್ ಸಂಚಿಕೆಯನ್ನು ವಿಜ್ಞಾನ ವಿಶೇಷಾಂಕವಾಗಿ ಹೊರ ತರುತ್ತಿದ್ದೇವೆ. ಈ ಪ್ರಯತ್ನಕ್ಕೆ ನಮ್ಮ ಬರಹಗಾರ ಬಳಗದ ಅನೇಕ ಲೇಖಕರು ಬಹು ಉತ್ಸಾಹದಿಂದ ಲೇಖನಗಳನ್ನಿತ್ತು ಸಹಕರಿಸಿದ್ದಾರೆ. ಉದಾಹರಣಾರ್ಥವಾಗಿ ಹಲವು ಬರಹಗಳ ಪರಿಚಯ ಇಲ್ಲಿ ನೀಡಬಯಸುವೆ. ಮೊದಲಿಗೆ ಗಾಯತ್ರಿ ಮೂರ್ತಿ ಯವರ ಕೈಗೆ ಸಿಕ್ಕಿರುವ ವೈಜ್ಞಾನಿಕ ನಿಯಮಗಳ ಹರಹು ಬಹು ವಿಸ್ತಾರ. ನ್ಯೂಟನ್ನನ

ನಿಯಮಗಳಾಗಲೀ, ಗುರುತ್ವಾಕರ್ಷಣೆಯಾಗಲೀ, ಗಾಯತ್ರಿಯವರ ತಿರುಚುವಿಕೆಯಿಂದಷ್ಟೇ ಅಲ್ಲ, ಚಿಂತನೆಯ ಸೃಜನಶೀಲತೆಯಲ್ಲಿ, ಇವರ ಬರಹ ಎ 1 ಎಂದು ತಿಳಿಸಬಯಸುವೆ. ಖ್ಯಾತ ವಿಜ್ಞಾನ ಬರಹಗಾರ ಶ್ರೀ ನಾಗೇಶ ಹೆಗ್ಗಡೆಯವರ ಇಗ್ನೋಬಲ್ ಪ್ರಶಸ್ತಿಯ ಬಗೆಗಿನ ಲೇಖನ ಬಹು ಉತ್ತಮ ಮಟ್ಟದ್ದು. ಇಂತಹ ಲೇಖನ ಅಪರಂಜಿಯ ಸಂಚಿಕೆಯಲ್ಲಿ ಪ್ರಕಟವಾಗುತ್ತಿರುವುದು ಪತ್ರಿಕೆಗೊಂದು ಹೆಗ್ಗಳಿಕೆ. ಸಿ.ಆರ್. ಸತ್ಯ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಬಗ್ಗೆ ಮುಂದೆ ಭವಿಷ್ಯದಲ್ಲಿ ವೈದ್ಯರೊಂದಿಗೆ ನಡೆಯಬಹುದಾದ ಸಮಾಲೋಚನೆಯನ್ನು ತಮ್ಮದೇ ಛಾಪು ಹಾಕಿ ನಿಮ್ಮ ಮುಂದಿಟ್ಟಿದ್ದಾರೆ. ಶರತ್ ಕಲ್ಕೋಡ್ ಅವರ ಅವೈಜ್ಞಾನಿಕ ಟೇಕ್ ಲಾಡುವಿನಲ್ಲಿನ ಲವಂಗದಂತೆ ಸಂಚಿಕೆಗೆ ಮೆರಗು ನೀಡುತ್ತಿದೆ. ರೇಖಾ ಹೆಗ್ಗಡೆಯವರು ತಮ್ಮ ಜೀವಶಾಸ್ತ್ರದ ಪ್ರಾಕ್ಟಿಕಲ್ ಕ್ಲಾಸಿನ ನೆನಪುಗಳನ್ನು ನಿಮ್ಮೊಂದಿಗೆ ಹಂಚಿಕೊಂಡಿದ್ದಾರೆ. ತುಂತುರು ಖ್ಯಾತಿಯ ಆನಂದ ಅವರು ವಿಜ್ಞಾನದ ಬಗ್ಗೆ ರಚಿಸಿರುವ ಚುಟುಕು ಪ್ಯಾರಾಗಳು ಚಿನಕುರುಳಿ ಪಟಾಕಿಯಂತೆ ಚಟಪಟಗುಟ್ಟಿಸುವ ನಗೆಯನ್ನು ಹೊಮ್ಮಿಸುತ್ತವೆ. ಇವರ ರೆಗ್ಯುಲರ್ ಕಾಲಂ ಈ ಬಾರಿ ವಿಜ್ಞಾನ ವಿಷಯಗಳಿಗೆ ಮೀಸಲು. ಇಂಟರ್ನೆಟ್ಟೂ ಸೇರಿದಂತೆ ವಿವಿಧ ಮೂಲಗಳಿಂದ ಆಯ್ದು ಸೇರಿಸಿದ ತುಂತುರು ಈ ಬಾರಿ ಬಹು ಅರ್ಥಗರ್ಭಿತವಾಗಿ ಮೂಡಿಬಂದಿದೆ. ''ನೇಚರ್ ಕಂಪೋಸಸ್ ಸಮ್ ಆಫ್ ಹರ್ ಲವ್ಲಿಯೆಸ್ಟ್ ಪೊಯೆಮ್ಸ್ ಫಾರ್ ದ ಟೆಲಿಸ್ಕೋಪ್ ಎಂಡ್ ಮೈಕ್ರೋಸ್ಕೋಪ್'' ಎಂಬ ಸಾಲನ್ನು ಓದಿದಾಗ ಮೈ ಜುಮ್ಮೆಂದಿತು. ನಾನು ಹಿಂದೊಮ್ಮೆ ಅಬ್ಸರ್ವೇಟರಿಯೊಂದಕ್ಕೆ ಭೇಟಿಕೊಟ್ಟಿದ್ದಾಗ ಟೆಲಿಸ್ಕೋಪಿನಲ್ಲಿ ಕಂಡ ದೃಶ್ಯ ನೆನಪಿಗೆ ಬಂತು. ಟೆಲಿಸ್ಕೋಪನ್ನು ಹೀಲಿಕ್ಸ್ ನೆಬ್ಯುಲಾದ ದಿಕ್ಕಿನಲ್ಲಿ ತಿರುಗಿಸಿ ಫೋಕಸ್ ಮಾಡಿ ವಿಜ್ಞಾನಿ ನನಗೆ ನೋಡಲು ಹೇಳಿದರು. ಬರಿಯ ಕಣ್ಣಿಗೆ ಕೇವಲ ಗಾಢಾಂಧಕಾರವಿದ್ದ ದಿಕ್ಕಿನಲ್ಲಿ ದೂರದರ್ಶಕದ ಮೂಲಕ ನೋಡಿದಾಗ ಬೆಳ್ಳಗೆ ಮಂಜಿನಂತೆ ಹರಡಿದ್ದ ಗೋಳವೊಂದರಲ್ಲಿ ನಾಲ್ಕು ಹೊಳೆಯುತ್ತಿರುವ ನಕ್ಷತ್ರಗಳು ಹುದುಗಿದ್ದವು. ಅಚ್ಚರಿಯ ಸಂಗತಿಯೆಂದರೆ ಆ ನಾಲ್ಕು ನಕ್ಷತ್ರಗಳು ಒಂದು ಚತುರ್ಭುಜದ ನಾಲ್ಕು ಮೂಲೆಗಳಲ್ಲಿ ಇದ್ದಂತೆ ಕಾಣುತ್ತಿತ್ತು. ''ಅದು ಹೇಗೆ ಅಷ್ಟು ನಿಖರವಾಗಿ ಒಂದು ಚತುರ್ಭುಜದ ಮೂಲೆಗಳಲ್ಲಿ ಅವು ಕುಳಿತಿವೆ?'' ಎಂದು ಆ ವಿಜ್ಞಾನಿಯನ್ನು ಕೇಳಿದೆ. ಆತ ನಕ್ಕು, ''ಅವು ಹಾಗೇನೂ ಕುಳಿತಿಲ್ಲ, ಭೂಮಿಯಿಂದ ಈ ಕೋಣದಲ್ಲಿ ನೋಡಿದಾಗ ಹಾಗೆ ಕಾಣುತ್ತೆ ಅಷ್ಟೇ'' ಎಂದು ಹೇಳಿದ. ಅಬ್ಬ ಪ್ರಕೃತಿಯ ವಿಚಿತ್ರವೇ? ಅನ್ನಿಸಿತು.

ಈ ವಿಶೇಷಾಂಕಕ್ಕೆ ಲೇಖನಗಳನ್ನು ನೀಡಿದ ಎಲ್ಲ ಬರಹಗಾರರಿಗೂ ಅಪರಂಜಿ ಆಭಾರಿ.

ನಮ್ಮ ಶಾಸ್ತ್ರಗ್ರಂಥಗಳು ವಿಜ್ಞಾನವನ್ನು ಅಪರಾ ವಿದ್ಯೆ ಎಂದು ಹೆಸರಿಸಿ, ಮೂಲಭೂತ ಸತ್ಯವಾದ ಬ್ರಹ್ಮನ್ ಮಾತ್ರ ಪರಮ ಸತ್ಯ ಎಂದು ಹೇಳುತ್ತವೆ. ಹಾಸ್ಯ ಸಾಹಿತ್ಯದ ಸೃಷ್ಟಿಕಾರರು ವಿಜ್ಞಾನದ ತರ್ಕಬದ್ಧತೆಯಿಂದ ಸ್ವಲ್ಪ ಹಿಂದೆ ಸರಿದು ಸ್ವಾಭಾವಿಕವಾದ ಸಂತಸವನ್ನು ತರುವ, ಮನದಲ್ಲಿ ಮುದವನ್ನು ಮೂಡಿಸುವ ಅಂಶದ ಬಗ್ಗೆ ನಿರಂತರ ಶೋಧನೆ ನಡೆಸುತ್ತಿರುತ್ತಾರೆ. ಹಾಸ್ಯಲೇಖನವೊಂದನ್ನು ಓದಿ ಓದುಗ ಮನತುಂಬಿ ನಕ್ಕಾಗ ಅಂತಹ ನಿಷ್ಕಳಂಕ ನಗು ಬ್ರಹ್ಮಸ್ಪರ್ಶದ ಒಂದು ದ್ಯೋತಕವಂತೆ. ಈ ಪವಿತ್ರ ಕಾರ್ಯದಲ್ಲಿ ಭಾಗಿಯಾಗಿರುವುದೇ ತನ್ನ ಸೌಭಾಗ್ಯ ಎಂದು ಅಪರಂಜಿ ನಂಬಿದ್ದಾಳೆ.

**ಶಿವಕುಮಾರ್**

ವಿಜ್ಞಾನ ವಿಶೇಷ

# ಮುಕ್ಕಟಿರ ಮುತ್ತಣ್ಣ ಪ್ರಸಂಗ



- ವತ್ಸನ

ಆ ಭಾನುವಾರ ಬೆಳಗ್ಗೆ ನಮ್ಮ ಫ್ಲಾಟಿನ ಹಜಾರದಲ್ಲಿ ನಾವು ಮೂವರು ಕುಳಿತಿದ್ದೆವು. ಶರಲೇಖ ತನ್ನ ಎಂದಿನ ಆರಾಮ ಕುರ್ಚಿಯಲ್ಲಿ ಮೈ ಚಾಚಿದ್ದ. ನಾನು ಕಿಟಕಿಯ ಬಳಿಯ ಸೋಫಾದ ಮೇಲೆ ಒರಗಿದ್ದೆ. ಪೊನ್ನಪ್ಪ ನಮ್ಮಿಬ್ಬರಿಗೆ ಇದಿರಾಗಿ ಇದ್ದ ಬೆತ್ತದ ಕುರ್ಚಿಯನ್ನು ಆರಿಸಿ ಅದರಲ್ಲಿ ಆಸೀನನಾಗಿದ್ದ. ಶರಲೇಖ ಅರೆಕಣ್ಣು ಮುಚ್ಚಿ ತಾನು ಬಂದ ಉದ್ದೇಶವನ್ನು ಪೊನ್ನಪ್ಪ ತಿಳಿಸುವುದನ್ನೇ ಕಾಯುತ್ತಿದ್ದ.

ಪೊನ್ನಪ್ಪ ನನ್ನ ಹೈಸ್ಕೂಲ್ ಸಹಪಾಠಿ. ನಾನು ಮುಂದೆ ಮೆಡಿಕಲ್ ಕಾಲೇಜು ಸೇರಿ ಡಾಕ್ಟರಾಗುತ್ತಿದ್ದಾಗ ಪೊನ್ನಪ್ಪ ಪದವೀಧರನಾಗಿ ಅನಂತರ ತನ್ನ ಪಿತ್ರಾರ್ಜಿತ ಕಾಫಿತೋಟದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಮಡಿಕೇರಿ ಹತ್ತಿರದ ಪ್ಲಾಂಟೇಷನ್‌ಗೆ ತೆರಳಿದ್ದ. ಕಳೆದ ಹಲವಾರು ವರ್ಷಗಳಿಂದ ಅವ ವರ್ಷಕ್ಕೊಮ್ಮೆ ಮಗಳನ್ನು ನೋಡಲು ಬೆಂಗಳೂರಿಗೆ ಬಂದಾಗಲೆಲ್ಲಾ ನನ್ನನ್ನು ತಪ್ಪದೇ ಭೇಟಿಯಾಗುತ್ತಿದ್ದ. ಶರಲೇಖನ ಸಾಹಸಗಾಥೆಗಳನ್ನು ಕೇಳುವುದರಲ್ಲಿ ಅವನಿಗೆ ಇನ್ನಿಲ್ಲದ ಉತ್ಸಾಹ. ಈ ವಾರ್ಷಿಕ ಭೇಟಿಗಳಿಂದಾಗಿ ನಮ್ಮ ಸ್ನೇಹ ಬಾಡದೇ, ತನ್ನ ಹೊಸತನವನ್ನು ಕಾಪಾಡಿಕೊಂಡು ಬಂದಿತ್ತು. ನಿನ್ನೆ ಬೆಳಗ್ಗೆ ಪೊನ್ನಪ್ಪ ಅನಿರೀಕ್ಷಿತವಾಗಿ ಬೆಂಗಳೂರಿಗೆ ಬಂದು ಇಂದು ನಮ್ಮನ್ನು ನೋಡಲು ಕಾತರ ವ್ಯಕ್ತಪಡಿಸಿದ್ದನ್ನು ಕಂಡು ನನಗೆ ಸ್ವಲ್ಪ ಆಶ್ಚರ್ಯವೇ ಆಯಿತೆನ್ನಿ. ಆದರೂ ಗೆಳೆತನದ ವಿಶ್ವಾಸದಿಂದ ಅವನನ್ನು ಬರಮಾಡಿಕೊಂಡು, ನಾವೆಲ್ಲರೂ ಬೆಳಗಿನ ಉಪಹಾರ ಮುಗಿಸಿದ ನಂತರ ಇಲ್ಲಿ ಕುಳಿತಿದ್ದೆವು.

ಪೊನ್ನಪ್ಪ ಪ್ರಾರಂಭಿಸಿದ.

''ನಿಮಗೆ ತಿಳಿದಿರುವಂತೆ ನಮ್ಮ ಮುಕ್ಕಟಿರ ಕಾಫಿ ತೋಟ ನಮ್ಮ ಪ್ರದೇಶದಲ್ಲೆಲ್ಲಾ ಬಹು ಹೆಸರುವಾಸಿ. ನಮ್ಮ ತಂದೆ ತೋಟವನ್ನು ನನಗೆ ವಹಿಸಿಕೊಟ್ಟಾಗಿನಿಂದ ನಾನು ಅದನ್ನು ಬಹಳ ಮುತುವರ್ಜಿಯಿಂದ ನೋಡಿಕೊಂಡು ಬಂದಿದ್ದೇನೆ. ಈಗ ನಮ್ಮ ಪಕ್ಕದ ತೋಟದ ಬೆಳ್ಳಿಯಪ್ಪ ನಮ್ಮ ತೋಟದ ಮೇಲೆ ಹಕ್ಕನ್ನು ಸಾಧಿಸಲು ಪ್ರಯತ್ನಿಸುತ್ತಿದ್ದಾನೆ. ನಮ್ಮ ಹಕ್ಕಿನ ದಾಖಲೆಗಳೆಲ್ಲವೂ ಸರಿಯಾಗಿದೆ ಅಂತ ನಮ್ಮ ಲಾಯರ್ ಹೇಳುತ್ತಿದ್ದಾರೆ. ಆದರೆ ಒಂದೇ ಒಂದು ಕೊರತೆ. ಹತ್ತೊಂಭತ್ತನೆಯ ಶತಮಾನದಲ್ಲಿ ನಮ್ಮ ದೊರೆ ಚಿಕ್ಕವೀರರಾಜೇಂದ್ರರು ನಮ್ಮ ವಂಶದವರಿಗೆ ಈ ನೆಲವನ್ನು ಬಳುವಳಿ ನೀಡುವ ಒಂದು ಸನ್ನದನ್ನು ಕೊಟ್ಟಿದ್ದರಂತೆ. ನಮ್ಮ ವಂಶದ ಎಲ್ಲ ತಲೆಮಾರಿನವರೂ ಆ ಸನ್ನದನ್ನು ಆಗಿನಿಂದ ಬಹು ಜಾಗರೂಕತೆಯಿಂದ ಕಾಪಾಡಿಕೊಂಡು ಬಂದಿದ್ದರೆಂದು ನಮ್ಮ ತಂದೆಯವರೇ ಹೇಳುತ್ತಿದ್ದರು. ನಮ್ಮ ತಂದೆಯವರು ಚಿಕ್ಕವರಾಗಿದ್ದಾಗ ಅವರ ತಂದೆ ಮುತ್ತಣ್ಣ ಆ ಸನ್ನದನ್ನು ಪ್ರತಿವರ್ಷ ತುಲಾಸಂಕ್ರಮಣದ ದಿನ ತಿಜೋರಿಯಿಂದ ಹೊರಕ್ಕೆ ತೆಗೆದು ಬೆಳ್ಳಿಯ ತಟ್ಟೆಯ ಮೇಲಿಟ್ಟು ಪೂಜೆ ಸಲ್ಲಿಸುತ್ತಿದ್ದದನ್ನು ನಮ್ಮ ತಂದೆ ಕಣ್ಣಾರೆ ನೋಡಿದ್ದರಂತೆ. ಆ ತಿಜೋರಿ ಇದ್ದ ಜಾಗ ಮುತ್ತಣ್ಣನವರಿಗೆ ಮಾತ್ರ ತಿಳಿದಿತ್ತಂತೆ. ನಮ್ಮ ತಂದೆಯವರಿಗೆ ಇಪ್ಪತ್ತೊಂದು ವಯಸ್ಸಾದಾಗ ಅವರಿಗೆ ಆ ಜಾಗವನ್ನು

ತಿಳಿಸಿ ಸನ್ನದ್ದನ್ನು ಅವರ ಸುಪರ್ದಿಗೆ ವಹಿಸುವ ಹಂಚಿಕೆ ಇತ್ತಂತೆ. ಆದರೆ ನಮ್ಮ ತಂದೆಯವರು ಹತ್ತು ವರ್ಷದ ಬಾಲಕನಾಗಿದ್ದಾಗಲೇ ಮುತ್ತಣ್ಣ ಹೃದಯಾಘಾತದಿಂದ ಅಕಾಲ ಮರಣ ಹೊಂದಿದ್ದರಿಂದ ಆ ತಿಜೋರಿ ಎಲ್ಲಿದೆಯೆಂಬ ರಹಸ್ಯ ನಮ್ಮ ತಂದೆಯವರಿಗೆ ತಿಳಿಯದಾಯಿತು. ಈಗ ಬೆಳ್ಳಿಯಪ್ಪನ ಕಡೆಯ ಲಾಯರು ಆ ಸನ್ನದ್ದು ತಮ್ಮ ಬಳಿ ಇದೆ ಅದರ ಪ್ರಕಾರ ಈ ನೆಲ ತಮ್ಮದು ಎಂದು ಹೇಳುತ್ತಿದ್ದಾರೆ. ನಮ್ಮ ತಂದೆಗೆ ಈಗ ಎಂಭತ್ತ ಮೂರು ವರ್ಷ. ಜ್ಞಾಪಕ ಶಕ್ತಿ ತೀರ ಕಡಿಮೆಯಾಗಿಬಿಟ್ಟಿದೆ. ಈ ಸಮಸ್ಯೆ ಶುರುವಾದ ಮೇಲೆ ತಿಜೋರಿ ಎಲ್ಲಿರಬಹುದೆಂಬುದನ್ನು ಹುಡುಕಲು ನಾನು ಹರ ಸಾಹಸ ಮಾಡುತ್ತಿದ್ದೇನೆ. ಅಷ್ಟು ದೊಡ್ಡ ಮನೆ. ಎಲ್ಲಿ ಅಂತ ಹುಡುಕುವುದು? ಅಲ್ಲದೇ ತಿಜೋರಿ ಸಿಕ್ಕಿದರೂ ಅದರಲ್ಲಿ ಸನ್ನದ್ದು ಇದೆ ಎಂದು ಯಾವ ಖಾತರಿ? ನನಗಂತೂ ಏನೂ ತೋಚುತ್ತಿಲ್ಲ'' ಎಂದು ಪೊನ್ನಪ್ಪ ಹೇಳಿದ.

''ನಿಮ್ಮ ತಂದೆ ಆ ಪೂಜೆಯನ್ನು ನೋಡಿದ್ದರೆ ಪೂಜೆಯ ನಂತರ ನಿಮ್ಮ ತಾತ ಯಾವ ಕೊಠಡಿಗೆ ಹೋಗುತ್ತಿದ್ದರು ಎಂಬುದು ನೆನಪಿಲ್ಲವೇ?'' ಅಂತ ಶರಲೇಖ ಕೇಳಿದ.

''ಅಯ್ಯೋ ಅದು ಅಷ್ಟು ಸುಲಭ ಅಲ್ಲ. ಪೂಜೆ ಮುಗಿಯುವವರೆಗೂ ನಮ್ಮ ತಂದೆ ಪೂಜಾಗೃಹದಲ್ಲೇ ಕುಳಿತಿರಬೇಕಾಗಿತ್ತು. ನಮ್ಮ ತಾತ ಸನ್ನದ್ದು ಬಚ್ಚಿಟ್ಟು ಪುನಃ ಪೂಜಾಗೃಹಕ್ಕೆ ಹಿಂತಿರುಗಿದ ನಂತರವೇ ನಮ್ಮ ತಂದೆ ತಮ್ಮ ಜಾಗದಿಂದ ಕದಲಬಹುದಾಗಿತ್ತು. ಇದನ್ನ ನಮ್ಮ ತಂದೆಯವರೇ ನನಗೆ ತಿಳಿಸಿದ್ದು'' ಎಂದು ಪೊನ್ನಪ್ಪ ಉತ್ತರಿಸಿದ.

''ಆಯಿತು, ನಾವು ನಿನ್ನೊಂದಿಗೆ ನಾಳೆ ನಿಮ್ಮ ತೋಟಕ್ಕೆ ಬರುತ್ತೇವೆ. ಬೆಳಗ್ಗೆ ಏಳು ಗಂಟೆಗೆ ನಾವು ರೆಡಿ'' ಎಂದು ಶರಲೇಖ ಆಶ್ವಾಸನೆ ಕೊಟ್ಟ ಬಳಿಕ ಪೊನ್ನಪ್ಪನ ಮುಖದಲ್ಲಿ ಸ್ವಲ್ಪ ಗೆಲುವು ಕಾಣಿಸಿತು.

ಮುಕ್ಕಟಿರ ಪ್ಲಾಂಟೇಷನ್ನಿನ ಮಧ್ಯೆ ಇದ್ದ ಭವ್ಯವಾದ ಮೂರು ಉಪ್ಪರಿಗೆ ಮನೆ ಸೇರಿದಾಗ ಸಂಜೆಯಾಗಿತ್ತು. ಮನೆಯ ವರಾಂಡಾದಲ್ಲಿ ಕುಳಿತಿದ್ದ ಹಿರಿಯರನ್ನು ಪೊನ್ನಪ್ಪ ''ನಮ್ಮ ತಂದೆ ಚೆಂಗಪ್ಪ'' ಎನ್ನುತ್ತಾ ನಮಗೆ ಪರಿಚಯಿಸಿದ. ಅವರು ಎದ್ದು ನಿಂತು ನಮ್ಮೆಲ್ಲರ ಕೈ ಕುಲುಕಿದರು. ಅವರು ನಿಂತ ನಿಲುವು, ಕೈಕುಲುಕುವ ದೃಢತೆಯನ್ನು ಗಮನಿಸಿದಾಗ ಅವರು ಎಂಭತ್ತು ದಾಟಿದವರೆಂದು ಖಂಡಿತ ಹೇಳಲಾಗುತ್ತಿರಲಿಲ್ಲ.

ಆ ಸಂಜೆ ಊಟಕ್ಕೆ ಮುಂಚೆ ಪೊನ್ನಪ್ಪ ನಮಗೆ ಮನೆಯನ್ನು ತೋರಿಸಲು ಮುಂದಾದ. ಪ್ರತಿಯೊಂದು ಅಂತಸ್ತಿನಲ್ಲೂ ಹನ್ನೆರಡು ಕೋಣೆಗಳಿದ್ದ ಅರಮನೆ ಅದು. ಒಂದೊಂದು ಕೋಣೆಯಲ್ಲೂ ತೇಗದ ಮರದ ಕಪಾಟುಗಳು. ಮೂರನೆಯ ಅಂತಸ್ತಿನಲ್ಲಿ ಒಂದು ವಿಶಾಲವಾದ ಹಜಾರ. ಅದರ ಪಕ್ಕದಲ್ಲಿ ಒಂದು ಅಂಗಳ. ''ಕಳೆದ ಮೂರು ತಿಂಗಳಲ್ಲಿ ನಾನು ಪ್ರತಿಯೊಂದು ಕೋಣೆಯ ಪ್ರತಿಯೊಂದು ಕಪಾಟನ್ನೂ ಹುಡುಕಿ, ಎಲ್ಲಾದರೂ ಕಳ್ಳ ಬಾಗಿಲಿನ ಹಿಂದೆ ತಿಜೋರಿ ಹುದುಗಿಸಿ ಇಟ್ಟಿರಬಹುದೇ ಎಂದು ಪರೀಕ್ಷಿಸಿ ನೋಡಿದ್ದೇನೆ. ಏನೂ ಪ್ರಯೋಜನವಾಗಲಿಲ್ಲ'' ಎಂದ ಪೊನ್ನಪ್ಪ.

ರಾತ್ರಿ ಊಟ ಮಾಡುವಾಗ ಶರಲೇಖ, ಚೆಂಗಪ್ಪನವರೊಂದಿಗೆ ಮಾತು ಪ್ರಾರಂಭಿಸಿದ. ''ನಿಮ್ಮ ತಂದೆ ಮುತ್ತಣ್ಣ ತುಲಾ ಸಂಕ್ರಮಣದ ದಿನದಂದು ಪೂಜೆ ಮಾಡುತ್ತಿದ್ದದ್ದನ್ನು ನೀವು ನೋಡಿದ್ದೀರಂತೆ. ಅದನ್ನ ಸ್ವಲ್ಪ ವಿವರಿಸ್ತೀರಾ?'' ಎಂದು ಕೇಳಿದ ಶರಲೇಖ.

‘‘ಓಹೋ, ಇವತ್ತಿಗೂ ಕಣ್ಣಿಗೆ ಕಟ್ಟಿದ ಹಾಗಿದೆ ಆ ಹಬ್ಬದ ವೈಭವ. ಆಗ ನನಗೆ ಒಂಭತ್ತು ವಯಸ್ಸು. ಅಕ್ಟೋಬರ್ ತಿಂಗಳಲ್ಲಿ ತುಲಾ ಸಂಕ್ರಮಣದ ದಿನ ಭಾಗಮಂಡಲದಲ್ಲಿ ಕಾವೇರಿ ಹೊಸದಾಗಿ ಉದ್ಭವವಾಗುತ್ತಾಳೆ. ಕೊಡವರಿಗೆ ಕಾವೇರಿ ಆರಾಧ್ಯ ದೇವಿ. ಹಾಗಾಗಿ ಆ ದಿನ ಬೆಳಗ್ಗೆ ನಮ್ಮ ತಂದೆ ಹೊಂಗೆ ಮರದ ರೆಂಬೆಗಳನ್ನು ಕಾಡಿನಿಂದ ಕತ್ತರಿಸಿ ತಂದು ಪ್ರತಿಯೊಂದು ರೆಂಬೆಯ ತುದಿಗೂ ಕಾಳಿಬಳ್ಳಿಯನ್ನು ಸುತ್ತಿ ಕಟ್ಟಿ ಮನೆಯ ಸುತ್ತ ಅವನ್ನು ನೆಡುತ್ತಿದ್ದರು. ಮನೆಯ ಮುಂದೆ ಎರಡು ರೆಂಬೆಗಳು, ದನದ ಕೊಟ್ಟಿಗೆಯಲ್ಲಿ ಒಂದು ಮತ್ತು ಭಾವಿಯ ಪಕ್ಕ ಇನ್ನೊಂದು ರೆಂಬೆ ನೆಡಲಾಗುತ್ತಿತ್ತು. ಮಾರನೆಯ ಬೆಳಗ್ಗೆ ನಮ್ಮ ತಾಯಿ ಪೂವಮ್ಮ ಸ್ನಾನದ ನಂತರ, ಒಂದು ಬೆಳ್ಳಿ ತಟ್ಟೆಯಲ್ಲಿ ಅಕ್ಕಿಯನ್ನು ತುಂಬಿ ಅದರ ಮೇಲೆ ಮೂರು ಅಡಿಕೆ, ಮೂರು ವಿಳ್ಳೆಯದೆಲೆ, ಒಂದು ಕೆಂಪು ವಸ್ತ್ರದಲ್ಲಿ ಸುತ್ತಿಟ್ಟ ಸೌತೆಕಾಯಿ ಇವುಗಳನ್ನಿಟ್ಟು, ಒಂದು ಹಣತೆಯನ್ನು ಹಚ್ಚಿ ತಟ್ಟೆಯಲ್ಲಿ ಇಡುತ್ತಿದ್ದರು. ತಟ್ಟೆಯನ್ನು ದೇವರ ಮನೆಯ ಪೂರ್ವ ದಿಕ್ಕಿನಲ್ಲಿ ಇರಿಸಿದ ನಂತರ ನಮ್ಮ ತಂದೆ ಒಳಗೆ ಹೋಗಿ ತಿಜೋರಿಯಿಂದ ಸನ್ನದ್ದನ್ನು ತಂದು ಈ ತಟ್ಟೆಯಲ್ಲಿಟ್ಟ ನಂತರ ದಂಪತಿಗಳಿಬ್ಬರೂ ಭಕ್ತಿಯಿಂದ ಪೂಜೆ ಮಾಡಿ ತಟ್ಟೆಗೆ ನಮಸ್ಕರಿಸುತ್ತಿದ್ದರು. ಅನಂತರ ಮನೆಯಲ್ಲಿದ್ದ ನಮ್ಮ ಚಿಕ್ಕಮ್ಮ, ನಮ್ಮ ಅಕ್ಕ ಇವರ ಸರದಿ. ಆಮೇಲೆ ನಾನು ಹೋಗಿ ನಮಸ್ಕರಿಸುತ್ತಿದ್ದೆ. ಆಮೇಲೆ ನಮ್ಮ ಅಕ್ಕ ಕೆಲವು ಹಾಡುಗಳನ್ನು ಹಾಡುತ್ತಿರುವಾಗ ನಮ್ಮ ತಂದೆ ಹೋಗಿ ಸನ್ನದ್ದನ್ನು ಅದರ ಗೋಪ್ಯ ಜಾಗದಲ್ಲಿ ಇಟ್ಟು ಬರುತ್ತಿದ್ದರು. ಮಾರನೆಯ ವರ್ಷವೇ ನಮ್ಮ ತಂದೆ ತೀರಿಕೊಂಡಿದ್ದರಿಂದ ಆ ಗೋಪ್ಯ ಜಾಗ ಗೋಪ್ಯವಾಗಿಯೇ ಉಳಿದುಹೋಯಿತು.’’ ಚೆಂಗಪ್ಪನವರ ವೃತ್ತಾಂತ ಬಹು ಸ್ಪಷ್ಟವಾಗಿತ್ತು.

ರಾತ್ರಿ ನಮ್ಮ ಕೊಠಡಿಗೆ ಹೋದ ಮೇಲೆ ‘‘ಪಾಪ, ಸನ್ನದ್ದನ್ನು ಹುಡುಕಲು ಬಹಳಷ್ಟು ಪಾಡು ಪಡುತ್ತಿದ್ದಾರೆ. ಅದಕ್ಕೇನು ಪರಿಹಾರವೇ ಇಲ್ಲವೇನೋ’’ ಅಂತ ನಾನು ಶರಲೇಖನನ್ನು ಕೇಳಿದೆ. ಶರಲೇಖ ‘ಇದೆ’ ಎಂದು ಹೇಳಿ ಮುಂದುವರಿಸಿ, ‘ಸಾಮಾನ್ಯವಾಗಿ ಇದಕ್ಕೆ ಪರಿಹಾರವಿಲ್ಲದಂತೆ ಕಂಡರೂ ವೈಜ್ಞಾನಿಕ ದೃಷ್ಟಿಯಿಂದ ನೋಡಿದರೆ ಪರಿಹಾರ ಸಿಗಬಹುದು. ನಿನಗೆ ಕೇಶವರಾವ್ ನೆನಪಿಲ್ಲವೇ?’ ಅಂತ ಕೇಳಿದ.

‘‘ಓ, ಆ ನೋವಿಕೋವ್ ಕಂಜೆಕ್ಚರ್ ಪ್ರಕರಣ ಬಗ್ಗೆ ಹೇಳುತ್ತಿದ್ದೀಯಾ? ಅದರಲ್ಲೇ ಅಲ್ಲವೇ ಆ ಕೇಶವರಾವ್ 2044ನೇ ಇಸವಿಯಿಂದ 2014ಕ್ಕೆ ಕಾಲಯಾನ ಮಾಡಿ ಬಂದು ನಮ್ಮ ಸಹಾಯ ಕೇಳಿದ್ದು! ಅವನ ಬಗ್ಗೆ ಹೇಳ್ತಾ ಇದ್ದೀಯಾ?’’ ಅಂತ ಕೇಳಿದೆ. (ಅಪರಂಜಿ–ಅಕ್ಟೋಬರ್ 2014)

‘‘ಹೌದು, ಅದೇ ಕೇಶವರಾವ್. ಅವ ಹೋಗುವುದಕ್ಕೆ ಮುಂಚೆ, ನಿಮಗೇನಾದರೂ ಸಹಾಯ ಬೇಕಾದರೆ ಈ ಉಂಗುರವನ್ನು ಕೈಯ್ಯಲ್ಲಿ ಹಿಡಿದು ಬೆಳಗಿನ ಜಾವ ಐದು ಗಂಟೆಗೆ ಸರಿಯಾಗಿ ನಿಮ್ಮ ಹೆಸರು ಹೇಳಿ. ನಾನು ಆ ಸಮಯಕ್ಕೆ ಸರಿಯಾಗಿ ಪ್ರತಿದಿನ ವರ್ಮ್‌ಹೋಲ್ ಸಂಪರ್ಕದಲ್ಲಿರುತ್ತೇನೆ ಅಂತ ಹೇಳಿದ್ದ. ಈಗ ಅವನ ಸಹಾಯ ಕೋರುವ ಸಮಯ ಬಂದಿದೆ’’ ಎಂದ ಶರಲೇಖ.

ಅಂದು ರಾತ್ರಿ ಮಲಗುವ ಮುಂಚೆ ನಾಲ್ಕು ಗಂಟೆಗೇ ಅಲಾರಂ ಇಟ್ಟೆ. ಬೆಳಗಿನ ಜಾವ ಐದಕ್ಕೆ ಶರಲೇಖ ಕೇಶವರಾಯರನ್ನು ಆಹ್ವಾನಿಸಿದ. ನೋಡುತ್ತಿದ್ದಂತೆ ನಮ್ಮ ಮುಂದೆ ಹಾಸಿದ್ದ

ರತ್ನಗಂಬಳಿಯ ಮೇಲೆ ಒಂದು ಕೆಂಪು ಬಣ್ಣದ ಉಂಗುರವೊಂದು ಕಾಣಿಸಿಕೊಂಡಿತು. ಸುಮಾರು ಮೂರು ಅಡಿ ಅಳತೆಯ, ಸೈಕಲ್ ಟಯರಿನಂತಿದ್ದ ಈ ಉಂಗುರ ನಾವು ನೋಡುತ್ತಿದ್ದ ಹಾಗೆಯೇ ಸುಮಾರು ಆರು ಅಡಿಯಷ್ಟು ಮೇಲಕ್ಕೆದ್ದು ನಿಂತಿತು. ಉಂಗುರದ ಕೆಳಗಿನ ಭಾಗದಲ್ಲಿ ತೆಳುವಾದ ಮಂಜಿನಂತಹ ಕಂಭವೊಂದು ಸೃಷ್ಟಿಯಾಗಿತ್ತು. ಒಮ್ಮಲೇ ನರಸಿಂಹ ಕಂಭದಿಂದ ಪ್ರತ್ಯಕ್ಷವಾದಂತೆ ಈ ಮಂಜಿನ ಕಂಭದಿಂದ ಒಬ್ಬ ವ್ಯಕ್ತಿ ಹೊರಕ್ಕೆ ಬಂದ. ಆತ ಹೊರಕ್ಕೆ ಬಂದು ನಿಲ್ಲುಕ್ಕಿಲ್ಲ, ಈ ಕೆಂಪು ಉಂಗುರ ಸರ್ರನೆ ಕೆಳಕ್ಕಿಳಿದು ನೆಲದ ಮಟ್ಟಕ್ಕೆ ಬಂದು ಅನಂತರ ವ್ಯಾಸದಲ್ಲಿ ಕುಗ್ಗಿ ಒಂದು ಸಾಧಾರಣ ಕೈಬೆರಳಿನ ಉಂಗುರದಷ್ಟಾಯಿತು. ಬಂದ ವ್ಯಕ್ತಿ ಬಹಳ ಸಾವಧಾನದಿಂದ ಕೆಳಕ್ಕೆ ಬಗ್ಗಿ ರತ್ನಗಂಬಳಿಯ ಮೇಲೆ ಕೆಂಪಗೆ ಹೊಳೆಯುತ್ತ ಬಿದ್ದಿದ್ದ ಉಂಗುರವನ್ನು ಎತ್ತಿ ತೆಗೆದು ತಮ್ಮ ಎಡಗೈ ತರ್ಜನಿಗೆ ತೊಡಿಸಿಕೊಂಡ.

''ನಮಸ್ಕಾರ ಶರಲೇಖ ಅವರೇ, ಇಷ್ಟು ವರ್ಷಗಳಾದಮೇಲೆ ನನ್ನನ್ನು ಕರೆಸಿದ್ದಕ್ಕೆ ಏನಾದರೂ ಬಲವತ್ತರವಾದ ಕಾರಣವಿರಬೇಕು. ಏನಾಗಬೇಕು ಹೇಳಿ'' ಅಂತ ಕೇಶವರಾವ್ ಸೌಜನ್ಯದಿಂದ ವಿಚಾರಿಸಿದರು.

ಶರಲೇಖ ಮಿತಭಾಷಿ. ''1944ನೇ ಇಸವಿ ಅಕ್ಟೋಬರ್ ಹದಿನೇಳರಂದು ಬೆಳಗ್ಗೆ ನಾವು ಒಂದು ಪೂಜೆಯನ್ನು ವೀಕ್ಷಿಸುವ ಅಗತ್ಯ ಬಂದಿದೆ'' ಎಂದ.

''ಆಯಿತು. ಜಾಗ ಯಾವುದು?''

''ಇದೇ. ಇದೇ ಮನೆಯಲ್ಲೇ ಪೂಜೆ ಆದದ್ದು. ಆದರೆ ಅಲ್ಲಿಗೆ ಹೋದಾಗ ನಾವು ಅಲ್ಲಿರುವವರಿಗೆ ಕಾಣಿಸುತ್ತೇವೆಯೇ?''

''ಕಾಣಿಸಬೇಕಾದರೆ ಮಂಜಿನ ಪರದೆಯಿಂದ ಆಚೆ ಬರಬೇಕು. ಇಲ್ಲವೆಂದರೆ ನಾವು ಅಜ್ಞಾತವಾಗಿರಬಹುದು.''

''ಅದೇ ನಮಗೆ ಬೇಕು. ಅಜ್ಞಾತವಾಗಿಯೇ ನಾವು ಅಲ್ಲಿನ ವಿದ್ಯಮಾನಗಳನ್ನ ವೀಕ್ಷಿಸಬೇಕಾಗಿದೆ.''

ಕೇಶವರಾವ್ ತಮ್ಮ ಕಾಲಯಾನ ಯಂತ್ರವನ್ನು ಚಾಲನೆಗೊಳಿಸಿ ಉಂಗುರದೊಳಗೆ ಕಾಲಿಡಲು ನಮ್ಮನ್ನು ಆಹ್ವಾನಿಸಿದರು. ನಾನು ಅದರೊಳಗೆ ಕಾಲಿಟ್ಟಕೂಡಲೇ ಒಂದು ಅತ್ಯಾಧುನಿಕ ನಿಯಂತ್ರಣ ಪ್ಯಾನೆಲ್ ಕಣ್ಣಿಗೆ ಬಿತ್ತು. ಒಂದು ಸ್ಮಾರ್ಟ್ ಫೋನ್ ಇಪ್ಪತ್ತು ಪಟ್ಟು ದೊಡ್ಡದಾಗಿದ್ದರೆ ಹೇಗೆ ಕಾಣುತ್ತೋ ಹಾಗಿತ್ತು ಆ ಕಂಟ್ರೋಲ್ ಪ್ಯಾನೆಲ್. ನಾವು ಪ್ರಯಾಣಿಸಬೇಕಾದ ಕಾಲಘಟ್ಟದ ತಾರೀಖನ್ನು ಕೇಶವರಾವ್ ಪ್ಯಾನೆಲ್ಲಿನಲ್ಲಿ ಒತ್ತಿದ ತಕ್ಷಣ ಹಲವು ಸೆಕೆಂಡುಗಳು ಕಗ್ಗತ್ತಲೆ ಮೂಡಿತು. ಮತ್ತೆ ಬೆಳಕಾದಾಗ ನಮ್ಮ ಕೊಠಡಿಯಲ್ಲಿ ಬಿಸಿಲು ತುಂಬಿತ್ತು. ನಾವು ಮೂವರೂ ಒಂದು ಪೆಟ್ಟಿಗೆಯ ಮೇಲೆ ನಿಂತಿದ್ದೆವು. ನಮ್ಮ ಕೊಠಡಿಯ ಮಧ್ಯೆ ಮೇಲಿನ ತೊಲೆಯಿಂದ ಒಂದು ತೊಟ್ಟಿಲು ಕಟ್ಟಿತ್ತು. ಒಬ್ಬ ಕೊಡವರ ಹೆಂಗಸು ತೊಟ್ಟಿಲನ್ನು ತೂಗುತ್ತಿದ್ದಳು. ಅದರಲ್ಲಿ ಮಗುವೊಂದು ಮಲಗಿತ್ತು. ''ನಾವು ಅವಳಿಗೆ ಕಾಣಿಸಲ್ಲ, ಆದರೆ ಕೇಳಿಸಬಹುದು. ಮಾತನಾಡದೇ ಮೌನವಾಗಿರಿ'' ಎಂದು ಕೇಶವರಾವ್ ಪಿಸುಗುಟ್ಟಿದರು. ನಾವೆಲ್ಲರೂ ಕೊಠಡಿಯಿಂದ ಹೊರಬಿದ್ದು ಮೆಟ್ಟಲು ಇಳಿದು ಪೂಜಾಗೃಹಕ್ಕೆ ಬಂದೆವು. ಅಲ್ಲಿ ಸಂಭ್ರಮವೋ ಸಂಭ್ರಮ. ಅನೇಕ ಕೊಡವರು ಅಲ್ಲಿ ನೆರೆದಿದ್ದರು.

ಪೂರ್ವದಿಕ್ಕಿನ ಕಿಟಕಿಯಿಂದ ಹೊಮ್ಮುತ್ತಿದ್ದ ಬಿಸಿಲು ದೀಪಗಳ ಹೊಗೆಯ ಮೇಲೆ ಬಿದ್ದು ಬಿಸಿಲುಕೋಲನ್ನು ಸೃಷ್ಟಿಸಿತ್ತು. ಕೊಡವರ ಉಡುಪಿನಲ್ಲಿ ಮುತ್ತಣ್ಣ ಮತ್ತು ಪೂವಮ್ಮ ದಂಪತಿಗಳು ಬಹು ಆಕರ್ಷಕವಾಗಿ ಕಾಣುತ್ತಿದ್ದರು. ಬೆಳ್ಳಿಯ ತಟ್ಟೆಯಲ್ಲಿ ಕೆಂಪುವಸ್ತ್ರದಲ್ಲಿ ಸುತ್ತಿಟ್ಟಿದ್ದ ಫಲ ಸೌತೆಕಾಯಿಯಾಗಿರದೇ ತೆಂಗಿನ ಕಾಯಿ ಆಗಿದ್ದು ಬಿಟ್ಟರೆ ಚೆಂಗಪ್ಪನವರ ನೆನಪು ಚೆನ್ನಾಗಿಯೇ ಇತ್ತು. ಪೂಜೆ ಮುಗಿದ ನಂತರ ಮುತ್ತಣ್ಣ ಸನ್ನದ್ದನ್ನು ಬೆಳ್ಳಿಯ ತಟ್ಟೆಯಿಂದ ಜೋಪಾನವಾಗಿ ತೆಗೆದು ದೇವರ ಮನೆಯಿಂದ ಆಚೆ ಹೊರಟರು. ನಾವು ಅವರನ್ನು ಹಿಂಬಾಲಿಸಿದೆವು. ಅವರು ನೇರವಾಗಿ ಮನೆಯ ಹಿಂಬಾಗಿಲಿನಿಂದ ಆಚೆಗೆ ಹೊರಟು ದನದ ಕೊಟ್ಟಿಗೆ ಪಕ್ಕದಲ್ಲಿದ್ದ ಭತ್ತದ ಕಣಜದ ಬಾಗಿಲನ್ನು ತೆಗೆದು ಒಳಕ್ಕೆ ನಡೆದರು. ನಾವು ಒಳಕ್ಕೆ ಹೋದಾಗ ಮುತ್ತಣ್ಣ ಅಲ್ಲಿದ್ದ ಅಟ್ಟವನ್ನು ಹತ್ತಿ ಬಲ ಗೋಡೆಯಲ್ಲಿ ಹುದುಗಿದ್ದ ತಿಜೋರಿಯನ್ನು ತೆಗೆಯುತ್ತಿದ್ದರು. ಅವರು ಕೆಳಗೆ ಬಂದಮೇಲೆ ಶರಲೇಖ ಕೇಶವರಾಯರಿಗೆ ನಾವು ಹಿಂತಿರುಗಬಹುದೆಂದು ಸೂಚಿಸಿದ. ಯಂತ್ರ ಚಾಲನೆಗೊಂಡು ಕಗ್ಗತ್ತಲು ಕವಿಯಿತು. ಕ್ಷಣಾರ್ಧದಲ್ಲಿ ನಾವು ಪುನಃ ನಮ್ಮ ಕೊಠಡಿಯಲ್ಲಿದ್ದೆವು. ಪೆಟ್ಟಿಗೆ, ತೊಟ್ಟಿಲು ಕೊಡವಗಿತ್ತಿ ಎಲ್ಲಾ ಮಾಯವಾಗಿದ್ದವು.

ಮಾರನೆಯ ಬೆಳಗ್ಗೆ ತಿಂಡಿ ತಿನ್ನುತ್ತಿದ್ದಾಗ ಶರಲೇಖ, ''ತಿಜೋರಿ ಇರುವ ಜಾಗ ಸಿಕ್ಕಿದರೆ ಅದನ್ನು ತೆರೆಯುವ ಕೀಲಿಗೆ ಏನು ಮಾಡುವಿರಿ?'' ಅಂತ ಪೊನ್ನಪ್ಪನನ್ನು ಕೇಳಿದ.

''ನಮ್ಮ ವಂಶದಲ್ಲಿ ಅನೂಚಾನವಾಗಿ ಈ ಭಾರಿ ಬೀಗದಕೈ ಗೊಂಚಲು ಬಂದಿದೆ. ಇದರಲ್ಲಿನ ಅನೇಕ ಕೀಲಿಗಳನ್ನು ನಾವು ಬಳಸಿಯೇ ಇಲ್ಲ. ಯಾವುದಾದರೊಂದು ಕೀಲಿ ಆ ತಿಜೋರಿಯದ್ದಾಗಿರಬಹುದು. ಅಷ್ಟರ ಮೇಲೆ ತಿಜೋರಿಗೆ ಬೇರೆ ಒಂದು ಕೀಲಿ ಮಾಡಿಸಿದರಾಯಿತು. ಆದರೆ ತಿಜೋರಿ ಸಿಗಬೇಕಲ್ಲಾ'' ಅಂತ ಹತಾಶನಾಗಿ ನುಡಿದ. ಉಪಹಾರದ ನಂತರ ಶರಲೇಖ ಪೊನ್ನಪ್ಪನನ್ನು ಕರೆದುಕೊಂಡು ಮನೆಯಾಚೆ ಹೊರಟ. ನಾನು ಚೆಂಗಪ್ಪನರೊಡನೆ ಲೋಕಾಭಿರಾಮವಾಗಿ ಮಾತನಾಡುತ್ತಾ ಕುಳಿತಿದ್ದೆ. ಹತ್ತಿರದಲ್ಲೇ ದೇವಕಿ ಕುಳಿತು ನಿಟ್ಟಿಂಗ್ ಹಾಕುತ್ತಿದ್ದರು.

ಒಮ್ಮೆಲೇ ಪೊನ್ನಪ್ಪ ಓಡಿ ಬರುತ್ತಿರುವುದು ಕಾಣಿಸಿತು. ಅವನ ಮುಖದಲ್ಲಿ ಸಂತಸ ತುಂಬಿ ಉಕ್ಕುತ್ತಿತ್ತು. ''ಬಂದ ಕೆಲಸ ಮುಗಿಯಿತು. ಇನ್ನು ಬೆಂಗಳೂರಿಗೆ ಹೊರಡುವ'' ಎಂದುಕೊಳ್ಳುತ್ತಾ ನಾನು ಹತ್ತಿರದಲ್ಲಿದ್ದ ಕಾಫಿಯ ಲೋಟವನ್ನು ಕೈಗೆತ್ತಿದೆ. ಮುಕ್ಕಟಿರ ಕಾಫಿ ಬಹು ರುಚಿಯಾಗಿತ್ತು.

❑

---

**ಕಾರಣ**

**ನರ್ಸಿಂಗ್ ಹೋಂ ಸ್ಥಾಪಿಸಿದ್ದ ವೈದ್ಯರು ಸ್ವಲ್ಪ ಸಮಯದ ನಂತರ 'ರಿನೋವೇಷನ್‌ಗಾಗಿ ಮುಚ್ಚಲಾಗಿದೆ' ಎಂದು ಫಲಕ ಹಾಕಿದರು.**

**ರಿನೋವೇಷನ್ ಯಾಕೆ? ಎಂದು ಕೇಳಿದ್ದಕ್ಕೆ ವಾಸ್ತು ಸರಿಯಾಗಿಲ್ಲ. 'ಆಪರೇಷನ್ ಥಿಯೇಟರ್ ಈಶಾನ್ಯ ಮೂಲೆಯಲಿ ಮತ್ತು ಲ್ಯಾಬ್ ದಕ್ಷಿಣಕ್ಕೆ ಇರಬೇಕಂತೆ ಎಂದು ನಮ್ಮ ವಾಸ್ತು ತಜ್ಞರು ಹೇಳಿದ್ದಾರೆ. ಅದಕ್ಕೇ ರಿಪೇರಿ' ಎಂಬ ಉತ್ತರ ಬಂತು.**

# ಹೆಡ್ ಹಂಟರ್ಸ್

- ಪ್ರಕಾಶ್

ರಾತ್ರಿ ಸುಮಾರು ಒಂಭತ್ತು ಆಗಿದ್ದಿರಬಹುದು. ಆ ದೊಡ್ಡ ತೋಟದ ಮನೆಯ ವಿಶಾಲವಾದ ಹಜಾರದಿಂದ ಸಂಗೀತ ವಾದ್ಯಗಳ ಮಂಜುಳ ಗಾನ ಹೊರಹೊಮ್ಮುತ್ತಿತ್ತು. ಮನೆ ಊರಾಚೆ ಇದ್ದುದರಿಂದ ಸಂಗೀತದ ಸಂಭ್ರಮ ಬಹು ದೂರದವರೆಗೂ ಕೇಳಿಸುತ್ತಿತ್ತು. ಹಜಾರದಲ್ಲಿ ನಡೆಯುತ್ತಿದ್ದ ಸಮಾರಂಭದಲ್ಲಿ ಪಾರ್ಟಿ ಪ್ರಾಣಿಗಳು ಕರೋಕೆ ಹಾಡು ಮತ್ತು ನೃತ್ಯಗಳಲ್ಲಿ ಮಗ್ನರಾಗಿದ್ದರು.

ತೋಟದ ಹೊರಗಿನ ಗೇಟಿನಲ್ಲಿ ವಾಚ್‌ಮನ್ ತನ್ನ ಮೊಬೈಲಿನಲ್ಲಿ ಯಾರೊಂದಿಗೋ ವಾಟ್ಸಪ್‌ನಲ್ಲಿ ಸಂಭಾಷಣೆ ನಡೆಸುತ್ತಿದ್ದ. ಅಕಸ್ಮಾತ್ ಅವ ತಲೆಯೆತ್ತಿ ನೋಡಿದಾಗ ಅವನ ಮುಂದೆ ಸಂಭಾವಿತರಂತೆ ಕಾಣುತ್ತಿದ್ದ ಇಬ್ಬರು ನಿಂತಿದ್ದರು. ಪಾರ್ಟಿಗೆ ಬಂದ ಅತಿಥಿಗಳೇ ಇರಬೇಕೆಂದು ನಿರ್ಧರಿಸಿ ವಾಚ್‌ಮನ್ ಅವರನ್ನು ಒಳಗೆ ಆಹ್ವಾನಿಸಿದ. ಇಬ್ಬರೂ ಒಳಕ್ಕೆ ನಡೆದರು.

ಇಬ್ಬರೂ ಮನೆಯೊಳಗೆ ಬಂದಾಗ ಮನೆಯಾತ ''ತಾವು ಯಾರು?'' ಎಂದು ಸೌಜನ್ಯದಿಂದ ಪ್ರಶ್ನಿಸಿದ. ಆತ ತನ್ನ ಎಡಗೈಯಲ್ಲಿ ಪಾನೀಯ ತುಂಬಿದ ಗಾಜಿನ ಲೋಟವೊಂದನ್ನು ಹಿಡಿದಿದ್ದ. ''ನಾವು ಬಹು ದೂರದಿಂದ ಬಂದಿದ್ದೇವೆ. ನಿಮ್ಮ ಮನೆಯಲ್ಲಿನ ಸಂಭ್ರಮ ನೋಡಿ ಇಲ್ಲಿ ಸ್ವಲ್ಪ ಹೊತ್ತು ಇದ್ದು ನಿಮ್ಮಗಳೊಂದಿಗೆ ಸಂಭ್ರಮಿಸೋಣ ಎಂದು ಬಂದೆವು'' ಎಂಬ ಒಬ್ಬಾತ ಉತ್ತರಿಸಿದ. ಇನ್ನೂ ಹಲವು ಜನರು ಅವರ ಸುತ್ತ ಸೇರಿದರು. ಅವರಲ್ಲೊಬ್ಬ ಬಂದ ಅತಿಥಿಗಳಿಗೆ ಪಾನೀಯಗಳನ್ನು ನೀಡಿದ. ಅವರಿಬ್ಬರೂ ಅದರ ರುಚಿ ನೋಡಿ ''ಬಹು ಚೆನ್ನಾಗಿದೆ'' ಎನ್ನುತ್ತಾ ಅದನ್ನು ಚಪ್ಪರಿಸಿ ಕುಡಿದರು.

ಈ ಹಜಾರದಲ್ಲಿದ್ದ ದೊಡ್ಡ ಟಿ.ವಿ.ಯನ್ನು ನೋಡಿ ಬಂದ ಆಗಂತುಕರು ಮೆಚ್ಚುಗೆ ವ್ಯಕ್ತಪಡಿಸಿದರು. ''ಆದರೆ ನಮ್ಮ ಊರಿನಲ್ಲಿ ಇದಕ್ಕಿಂತ ಮಜಬೂತಾಗಿರೋ ಟಿ.ವಿ. ಇದೆ ಅಂತ ಹೇಳಿದ್ರೆ ನಿಮಗೆ ಬೇಜಾರೇನಿಲ್ಲಾ ತಾನೇ?'' ಅಂತ ಒಬ್ಬ ಅಭ್ಯಾಗತ ಕೇಳಿದ. ''ಯಾವುದು ನಿಮ್ಮ ಊರು?'' ಮನೆಯ ಯಜಮಾನ ಕೇಳಿದ. ಬಂದ ಆಗಂತುಕ ಉತ್ತರಿಸುವ ಬದಲು ''ನಾನು ಒಂದು ಚಮತ್ಕಾರ ತೋರಿಸಲೇ?'' ಅಂತ ಕೇಳಿದ. ಸುತ್ತ ಇದ್ದವರೆಲ್ಲಾ ''ಓಹೋ ಆಗಲಿ ಅದಕ್ಕೇನು?'' ಅಂತ ಸಮ್ಮತಿ ಸೂಚಿಸಿದರು. ''ಟಿ.ವಿ. ಆರಿಸಿ ಬಿಡಿ'' ಅಂತ ಆತ ಆಜ್ಞೆಯಿತ್ತ. ಯಜಮಾನ ಟಿ.ವಿ. ಆರಿಸಿದ. ಅರೆ, ಆರಿಸಿದ ಟಿ.ವಿ. ತಾನಾಗಿಯೇ ಆನ್ ಆಗಿ ಕ್ರಿಕೆಟ್ ಮ್ಯಾಚೊಂದು ಮೂಡಿಬಂತು. ''ಮುಂದಿನ ಬಾಲನ್ನ ಸಿಕ್ಸರ್ ಹೊಡೀತಾನೆ'' ಅಂದ ಆಗಂತುಕ. ಮುಂದಿನ ಬಾಲ್ ಸ್ಟೇಡಿಯಂನ ಅಂಚನ್ನು ಮುಟ್ಟಿತು. ''ನೀವು ಈ ವಿದ್ಯೆಯನ್ನ ಹೇಗೆ ಕಲಿತಿರಿ? ಮನೋರಂಜನೆ ಮತ್ತು ಕರೆಂಟ್ ಉಳಿತಾಯ ಎರಡೂ ಹಕ್ಕಿಗಳನ್ನ ಒಂದೇ ಕಲ್ಲಿನಲ್ಲಿ....'' ಅನ್ನುತ್ತಾ ಯಜಮಾನ ನಕ್ಕ. ''ಅಂದಹಾಗೆ ನಿಮ್ಮ ಊರು ಯಾವುದು ಎಂಬ ಪ್ರಶ್ನೆಗೆ ನೀವು ಇನ್ನೂ ಉತ್ತರಿಸಿಲ್ಲ'' ಅಂತಲೂ ಸೇರಿಸಿದ. ''ನಾವು ನೇಪಾಲದ ಹತ್ತಿರ ಇರೋ

ಊರಿನೋರು. ಪ್ರಪಂಚ ಪರ್ಯಟನೆಗೆ ಹೊರಟಿದ್ದೀವಿ. ನಿಮಗಾರಿಗಾದರೂ ನೇಪಾಲಿ ಭಾಷೆ ಬರುತ್ತೇನು?'' ಅಂತ ಅವ ನೇಪಾಲೀ ಭಾಷೆಯಲ್ಲೇ ಕೇಳಿದ. ಅಲ್ಲಿ ಇದ್ದವರೆಲ್ಲರಿಗೂ ಆಶ್ಚರ್ಯ. ಇವರು ಯಾರೋ ಪ್ರಚಂಡರು ಅಂತ ಮನಸ್ಸಿನಲ್ಲೇ ಅಂದುಕೊಂಡರು. ಬಂದವರು ನಸುನಗುತ್ತಾ ''ಹೌದು, ನಾವು ಪ್ರಚಂಡರು'' ಎಂದರು. ಹತ್ತಿರದಲ್ಲಿದ್ದವ ಒಬ್ಬ ಅಭ್ಯಾಗತರಿಗೆ ''ಇದನ್ನು ತಿನ್ನಿ, ನಮ್ಮ ಸ್ಪೆಷಲ್ ಇದು'' ಎನ್ನುತ್ತಾ ಒಂದು ಸಮೋಸಾ ತುಂಬಿದ ತಟ್ಟೆಯನ್ನು ಅವರ ಮುಂದಿಟ್ಟ. ಅವರು ಅದರ ರುಚಿ ನೋಡಿ, ''ಬಹಳ ಚೆನ್ನಾಗಿದೆ'' ಎನ್ನುತ್ತಾ ಇಡೀ ತಟ್ಟೆಯನ್ನು ಖಾಲಿ ಮಾಡಿದರು.

''ಸರಿ ಹೊತ್ತಾಯ್ತು. ನಾವಿನ್ನು ಹೊರಡುತ್ತೇವೆ'' ಎಂದರು ಯಾತ್ರಿಗಳು. ತೋಟದ ಗೇಟನ್ನು ದಾಟುವಾಗ ವಾಚ್‌ಮನ್ ನಿದ್ದೆ ಹೊಡೀತಿದ್ದ. ಹಾಗೆಯೇ ನಡೆಯುತ್ತಾ ಅವರು ಪಕ್ಕದ ಮೈದಾನಕ್ಕೆ ಹೋದರು. ಅಲ್ಲಿ ಅವರು ಬಂದಿದ್ದ ಸ್ಪೇಸ್ ಷಿಪ್ ನಿಂತಿತ್ತು. ನೋಡುತ್ತಿದ್ದಂತೆ ಅವರು ತಮ್ಮ ನಿಜ ರೂಪ ಧರಿಸಿದರು. ಸಣ್ಣ ಕೈಕಾಲುಗಳು, ದಪ್ಪ ತಲೆ, ತಲೆಯ ಮೇಲೊಂದು ಆ್ಯಂಟೆನಾ. ಅವರು ಸ್ಪೇಸ್‌ಷಿಪ್‌ನ ಬಾಗಿಲು ತೆಗೆದು ಒಳಹೊಕ್ಕರು. ಒಳಗೆ ಕಂಟ್ರೋಲ್ ಪ್ಯಾನೆಲ್ಲಿನ ಹತ್ತಿರ ಅವರ ಸಹಚರರಿಬ್ಬರು ಕುಳಿತಿದ್ದರು. ಅವರಲ್ಲೊಬ್ಬ, ''ಹೇಗಿದೆ ಇಲ್ಲಿ?'' ಅಂತ ಅವರ ಭಾಷೆಯಲ್ಲಿ ಪ್ರಶ್ನಿಸಿದ. ''ಅಯ್ಯೋ ಅವರೆಲ್ಲಾ ನಮಗಿಂತ ಶತಮಾನಗಳಷ್ಟು ಹಿಂದಿದ್ದಾರೆ. ಮನೋಶಾಸ್ತ್ರ ಎನರ್ಜಿ ವೇವ್ಸ್ ಭಾಷಾ ತರ್ಜುಮೆ ಎಲ್ಲದರಲ್ಲೂ ಸೊನ್ನೆ. ನಮ್ಮ ಗ್ರಹದ ಕಾಲ್ ಸೆಂಟರ್ ಕೆಲಸಕ್ಕೆ ತೀರಾ ನಾಲಾಯಕ್ಕು, ನಾವು ಬೇರೆ ಯಾವುದಾದರೂ ಗ್ರಹದಲ್ಲಿ ಜನರನ್ನ ಹುಡುಕಬೇಕಾಗುತ್ತೆ'' ಎಂದು ನಗುತ್ತಾ ಹೇಳಿದ. ಇನ್ನೊಬ್ಬ ''ಆದರೆ ಅವರು ಕೊಟ್ಟ ಸಮೋಸಾ ಬಲು ಚೆನ್ನಾಗಿತ್ತು. ಅದರ ಕೋಡ್ ಅನ್ನು ಇಲ್ಲಿ ಭದ್ರ ಮಾಡಿದ್ದೇನೆ. ಊರು ತಲುಪಿದ ನಂತರ ಅದನ್ನು ಇನ್ನೂ ಚೆನ್ನಾಗಿ ಮಾಡಬಹುದು'' ಅಂತ ಹೇಳಿದ. ಸ್ಪೇಸ್‌ಷಿಪ್ ನಿಧಾನವಾಗಿ ಮೇಲಕ್ಕೆದ್ದು, ಆಂಡ್ರೋಮಿಡಾದತ್ತ ಹೊರಟಿತು.

❑



ವಿಜ್ಞಾನ ವಿಶೇಷ

# ನ್ಯೂಟನ್ನಿನ ನಿಯಮವೂ ಜಡತ್ವವೂ...

- ಗಾಯತ್ರಿ ಮೂರ್ತಿ

ಕೆಮಿಸ್ಟ್ರಿ ತರಗತಿಯಲ್ಲಿ ಟೀಚರ್ ಆಕ್ಸಿಜನ್ ಕಂಡುಹಿಡಿದ ಬಗ್ಗೆ ಹೇಳುತ್ತ, '1773ರಲ್ಲಿ ಬ್ರಿಟಿಷ್ ವಿಜ್ಞಾನಿ ಜೋಸೆಫ್ ಪ್ರೀಸ್ಟ್ಲೆ ಎಂಬಾತ ಆಕ್ಸಿಜನ್ ಕಂಡುಹಿಡಿದ' ಎಂದಾಗ ಒಬ್ಬ ವಿದ್ಯಾರ್ಥಿ ಎದ್ದು ನಿಂತು, 'ಅಲ್ಲಿಯವರೆಗೆ ಜನರು ಹೇಗೆ ಉಸಿರಾಡುತ್ತಿದ್ದರು?' ಎಂದು ಕೇಳಿದನಂತೆ! ವಿದ್ಯಾರ್ಥಿಯ ಪ್ರಶ್ನೆಗೆ ಮೇಡಂ ಸುಸ್ತು. ಆಮೇಲೆ ಅವನಿಗೆ ಸರಿಯಾದ ಉತ್ತರ ಹೇಳಿರುತ್ತಾರನ್ನಿ.

**ಅಸಿಟೈಲ್‌ಸ್ಯಾಲಿಸಿಲಿಕ್ ಆಸಿಡ್ ನೆನಪಿನಲ್ಲಿಟ್ಟುಕೊಳ್ಳುವುದು ಸುಲಭವಾದಾಗ..!**

ಒಬ್ಬ ರಸಾಯನ ತಜ್ಞನಿಗೆ ತಲೆನೋವು ಬಂತು. ಅವನಿಗೆ ಆಸ್ಪಿರಿನ್ ಕೊಳ್ಳಬೇಕಿತ್ತು. ಒಂದು ಔಷಧಿ ಅಂಗಡಿಗೆ ಹೋಗಿ, 'ನನಗೆ ಅಸಿಟೈಲ್‌ಸ್ಯಾಲಿಸಿಲಿಕ್ ಆಸಿಡ್‌ನ ಒಂದು ಸ್ಟ್ರಿಪ್ ಕೊಡಿ' ಎಂದು ಕೇಳಿದ. ಮೊದಲು ಚಕಿತನಾದ ಕೆಮಿಸ್ಟ್, 'ಆಸ್ಪಿರಿನ್ ಕೊಡ್ಲಾ ಸಾರ್' ಎಂದು ಕೇಳಿದ. 'ಹುಂ, ಅದೇ ಹೆಸರು ಮರೆತು ಹೋಗಿತ್ತು' ಎಂದು ನುಡಿದ ರಸಾಯನ ತಜ್ಞ. ಆ ಮಾತ್ರೆಯ ರಸಾಯನಿಕ ಹೆಸರು ಜ್ಞಾಪಕ ಇಟ್ಟುಕೊಳ್ಳಬಲ್ಲ ತಜ್ಞನಿಗೆ ಸರಳವಾದ ಬ್ರಾಂಡ್ ಹೆಸರು ಮರೆತು ಹೋಗಿತ್ತು!

ನ್ಯೂಟನ್‌ನ ಚಲನೆಯ ಮೊದಲ ನಿಯಮ ಜಡತ್ವ ಎಂಬ ಪರಿಕಲ್ಪನೆಯನ್ನು ಪರಿಚಯಿಸುತ್ತದೆ. ಇದರ ಪ್ರಕಾರ, ವಿಶ್ರಾಂತ ಸ್ಥಿತಿಯಲ್ಲಿರುವ ಯಾವುದೇ ಜಡವಸ್ತು ಬಾಹ್ಯ ಪ್ರೇರಣೆಯಿಲ್ಲದೆ ತಂತಾನೇ ಚಲಿಸಲಾರದು. ಆಹಾ, ಇದು ಜಡವಸ್ತುಗಳಿಗೆ ಮಾತ್ರವೇ ಅನ್ವಯಿಸುತ್ತದೆಯೇ? ಮನುಷ್ಯರಿಗೆ ಅನ್ವಯಿಸುವುದಿಲ್ಲವೇ? ಏಕಾಗಬಾರದು ನೋಡೋಣ ಬನ್ನಿ:

**ದೃಶ್ಯ-1:** ರಾಯರು ಬೆಳಗ್ಗಿಂದ ವೃತ್ತಪತ್ರಿಕೆಯಲ್ಲೇ ಮಗ್ನರಾಗಿದ್ದಾರೆ. ಹೆಂಡತಿಗೆ ಅದನ್ನು ನೋಡಿ ರೋಸಿ ಹೋಗಿದೆ. ಅಂದು ನೀರು ಬರುವ ದಿನ. ಹಾಗೆ ನೋಡಿದರೆ, ಮೂರುದಿನಗಳಿಂದ ನೀರು ಬಿಟ್ಟಿರಲಿಲ್ಲ. ಬೆಳಗ್ಗೆಯೇ ಹೆಂಡತಿ ಈ ಬಗ್ಗೆ ಎಚ್ಚರಿಸಿದ್ದರೂ ರಾಯರಿಗೆ ನೀರು ತುಂಬುವ ಬಗ್ಗೆ ಗಮನವಿಲ್ಲ. ಹೆಂಡತಿ ಬಂದು ಗಂಡನ ಕೈಯಿಂದ ವೃತ್ತಪತ್ರಿಕೆ ಕಿತ್ತುಕೊಂಡು, 'ಬೆಳಗಿಂದ ಒಂದೇ ಸಮನೆ ನೀರು ತುಂಬಿ ಎಂದು ಬಡ್ಕೊಂಡೆ, ಆದ್ರೂ ನಿಮಗೆ ಪೇಪರ್ ಮೇಲೆ ಗಮನವೇ ಹೊರತು ನೀರು ನಿಂತು ಹೋದ್ರೆ ಗತಿ ಏನು ಅಂತ ಯೋಚ್ನೆನೇ ಇಲ್ಲ, ನಾನೊಬ್ಳಿದೀನಲ್ಲ, ದುಡಿದು ಸಾಯೋಕೇ. ಏನ್ರೀ, ಹಾಗೆ ನೋಡ್ತಿದೀರಾ? ಏಳಿ ಮೇಲೆ, ಮೊದಲು ನೀರು ತುಂಬಿ. ಇಲ್ಲಾಂದ್ರೆ, ಒಂದು ಬಕೆಟ್ ನೀರು ತಂದು ತಲೆಮೇಲೆ ಸುರೀತೀನಿ' ಎಂದು ಹೆಂಡತಿಯ ಬಾಹ್ಯ ಬಲದ ಪ್ರೇರಣೆ ಉಂಟಾದ ಮೇಲೇ ನಮ್ಮ ರಾಯರು ಮೇಲೆದ್ದು ನೀರು ತುಂಬಿದ್ದು.

**ದೃಶ್ಯ-2:** ತಾಯಿ ಮಗನ ಕೋಣೆಗೆ ಬಂದು ನೋಡುತ್ತಾಳೆ!!! ಬೆಳಿಗ್ಗೆ 11 ಗಂಟೆಯಲ್ಲೂ ಮಗ ಬಿಸಿಲು ಮುಖದ ಮೇಲೆ ಬೀಳದಂತೆ ಮುಸುಕು ಬಿಗಿಯಾಗಿ ಜಡಿದು ಮಲಗಿದ್ದಾನೆ! ಅವಳಿಗೆ

ಕೋಪ ನೆತ್ತಿಗೇರಿದೆ. ಕೂಡಲೇ ಮುಸುಕೆಳೆದು, 'ಸೂರ್ಯ ನೆತ್ತಿಮೇಲೆ ಬರ್ತಿದಾನೆ ಇನ್ನೂ ಬಿದ್ಕೊಂಡಿದೀಯಲ್ಲೋ, ನಾಚಿಕೆಯಾಗಲ್ವಾ ನಿಂಗೆ? ಏಳು ಮೇಲೆ. ರಾತ್ರಿಯೆಲ್ಲ ವಿಡಿಯೋ ಗೇಮ್ಸ್ ಆಡ್ತಿರೋದು, ಬೆಳಗ್ಗೆ ಎಷ್ಟು ಹೊತ್ತಾದ್ರೂ ಏಳೋ ಹಾಗಿಲ್ಲ. ಪರೀಕ್ಷೆ ಇನ್ನು ಎರಡು ತಿಂಗಳಿದೇಂತ ನಿನಗೆ ಜ್ಞಾನವೇ ಇಲ್ಲ. ಏಳು ಮೇಲೆ' ಎಂದು ಸುಪ್ರಭಾತ ಹಾಡಿದ ಮೇಲೇ ಮಗರಾಯ ನಿಧಾನವಾಗಿ ಆಕಳಿಸುತ್ತಾ ಮೇಲೇಳುತ್ತಾನೆ.

ಇದು ಒಂದು ತರಹ ಜಡತ್ವವಲ್ಲವೇ? ನ್ಯೂಟನ್ನನ ನಿಯಮವೂ ಇದನ್ನೇ ಹೇಳೋದು. ಬಾಹ್ಯ ಬಲದ ಪ್ರೇರಣೆಯಿಲ್ಲದೆ ಹೋದರೆ, ತಂತಾನೇ ಯಾವ ವಸ್ತುವೂ ಚಲಿಸುವುದಿಲ್ಲ ಅಥವಾ ಸಮವೇಗದ ಚಲನೆಯಲ್ಲಿರುವ ವಸ್ತು ತನ್ನ ಸ್ಥಿತಿ ಬದಲಾಯಿಸುವುದಿಲ್ಲ ಎಂದು.

ಮೊದಲು ಹೇಳಿದ ಎರಡು ಪ್ರಸಂಗಗಳೂ ನಿಯಮದ ಮೊದಲ ಭಾಗಕ್ಕೆ ಸಂಬಂಧಿಸಿದ್ದು. ಇನ್ನು ಚಲನೆಯ ಮೊದಲನೆಯ ನಿಯಮದ ಮುಂದುವರೆದ ಭಾಗವನ್ನು ಮನುಷ್ಯರಿಗೆ ಇದನ್ನು ಅಳವಡಿಸಿದಾಗ ಒಂದು ಸಣ್ಣ ಉದಾಹರಣೆ:

**ದೃಶ್ಯ-3:** ಅಂದು ಭಾನುವಾರ. ಹೆಂಡತಿ ಮೊದಲೇ ಸಿನಿಮಾ ನೋಡಬೇಕೆಂದು ಪ್ಲಾನ್ ಮಾಡಿದ್ದಾಳೆ. ಗಂಡನಿಗೋ ಅದರಲ್ಲಿ ಆಸಕ್ತಿಯಿಲ್ಲ. ಅವನಿಗೆ ಮರದ ಸಾಮಾನುಗಳ ರಿಪೇರಿ ಕೆಲಸ ಮಾಡುವುದೆಂದರೆ ಅಚ್ಚುಮೆಚ್ಚು. ಮಧ್ಯಾಹ್ನವಾದರೂ ಊಟಕ್ಕೇಳದೆ ಅವನು ಒಂದೇ ಸಮನೆ ಒಂದಾದ ಮೇಲೆ ಒಂದರಂತೆ ಕುರ್ಚಿ, ಮೇಜು, ಕಬೋರ್ಡ್‌ಗಳ ರಿಪೇರಿ ಮಾಡುತ್ತಿದ್ದಾನೆ. ಹೆಂಡತಿ ಬಂದವಳೇ, 'ನಾನೂ ನೋಡ್ತಿದೀನಿ, ಒಂದೇ ಸಮ ಲಟಲಟಾಂತ ಸುತ್ತಿಯಿಂದ ಹೊಡೆದ ಶಬ್ದ ಕೇಳಿಕೇಳಿ ತಲೆ ಚಿಟ್ಟು ಹಿಡೀತು. ಏಳ್ರೀ ಮೇಲೆ. ಊಟ ಮಾಡಿ ರೆಸ್ಟ್ ತೊಗೊಳಿ. ಫಸ್ಟ್ ಶೋಗಾದರೂ ಸಿನಿಮಾಗೆ ಹೋಗೋಣ' ಎಂದು ಸುತ್ತಿಗೆಯನ್ನು ಕೈಯಿಂದ ಕಿತ್ತುಕೊಳ್ಳುತ್ತಾಳೆ. ಗಂಡ ವಿಧಿಯಿಲ್ಲದೆ ಕೆಲಸ ನಿಲ್ಲಿಸಬೇಕಾಗತ್ತೆ.

ನೋಡಿದಿರಾ? ಯೋಚಿಸಿದರೆ ದಿನನಿತ್ಯ ಇಂತಹ ಹಲವಾರು ಪ್ರಸಂಗಗಳು ನೆನಪಿಗೆ ಬರಬಹುದಲ್ಲವೇ?

ಗುರುತ್ವಾಕರ್ಷಣೆಯ ಬಗ್ಗೆ ಕೇಳಿದೀರಾ ಅಲ್ವಾ? ಆ ಬಲದ ಆಧಾರದಿಂದಲೇ ಅಲ್ಲವೇ ಭೂಮಿಯ ಮೇಲೆ ನಮ್ಮ ತೂಕ ನಿರ್ಧಾರ ಆಗುವುದು? ಅಷ್ಟೇ ಅಲ್ಲ, ಚಂದ್ರನಲ್ಲಿ ಗುರುತ್ವ ಬಲವು ಭೂಮಿಯ ಗುರುತ್ವಾಕರ್ಷಣೆಯ 1/6 ರಷ್ಟಿರುತ್ತದೆ. ಅಂದರೆ ಅರ್ಥ ಏನು? ಭೂಮಿಯ ಮೇಲೆ 96 ಕೆ.ಜಿ. ತೂಕದ ವ್ಯಕ್ತಿ ಚಂದ್ರನ ಮೇಲೆ ಕೇವಲ 16 ಕೆ.ಜಿ. ತೂಕವಿರುತ್ತಾನೆ. ಆಹಾ, ತೂಕ ಕಳೆದುಕೊಳ್ಳುವ ಎಂತಹ ಸದವಕಾಶ ಅಲ್ಲವೇ? ಚಂದ್ರನ ಮೇಲೆ ಹೋದರೆ ಆಯಿತು, ತೂಕದ ಸಮಸ್ಯೆ ಖತಮ್!!! ಚಂದ್ರನ ಮೇಲೇನಾದ್ರೂ ಮನುಷ್ಯ ಕಾಲೋನಿ ಸ್ಥಾಪಿಸಿ, ಅಲ್ಲಿಗೆ ಜನರನ್ನು ಕೊಂಡೊಯ್ದರೆ, ಯಾರಿಗೆ ಕೆಲಸ ಇದ್ದರೂ, ತೂಕ ಕಡಿಮೆ ಮಾಡುವ ಆಮಿಷ ತೋರಿಸಿ ಜನರಿಂದ ಸಾವಿರಾರು ರೂಪಾಯಿಗಳ ಸುಲಿಗೆ ಮಾಡುವ ವ್ಯಾಪಾರಿಗಳಿಗೆ ಮಾತ್ರ ಅಲ್ಲಿ ಕೆಲಸವಿಲ್ಲಾಂತೀನಿ. ಏಕೆಂದರೆ, ಜನರೆಲ್ಲ ತಮ್ಮ ತೂಕದ ಬಗ್ಗೆ ಬಹಳ ಸಂತುಷ್ಟರಾಗಿರುತ್ತಾರಲ್ಲ ಇನ್ನು ಅದನ್ನು ಕಳೆದುಕೊಳ್ಳುವುದೇಕೆ?

ಭೌತ ವಿಜ್ಞಾನದ ಪಕ್ಕಾ ಅಭಿಮಾನಿಯೊಬ್ಬ ವಧೂ ಪರೀಕ್ಷೆಗೆ ಹೋದನಂತೆ. 'ಹುಡುಗಿ ತುಂಬಾ ಸಣ್ಣ, ಅವನೋ ದಢೂತಿ ಆಸಾಮಿ. ಆದ್ದರಿಂದ ಅವನು ಹುಡುಗಿ ಗುರುತ್ವಾಕರ್ಷಣೆ

ಕಡಿಮೆ, ನನಗೆ ಅವಳು ಬೇಡ' ಅಂದನಂತೆ. ವಿಷಯ ತಿಳಿದ ಚಾಲಾಕಿ ಹುಡುಗಿ, 'ಇನ್ನೆರಡು ತಿಂಗಳು ಬಿಟ್ಟು ಬನ್ನಿ' ಮಾತನಾಡೋಣ ಎಂದಳಂತೆ. ಎರಡು ತಿಂಗಳ ಸತತ ಪ್ರಯತ್ನದಿಂದ ಹತ್ತು ಕಿಲೋ ತೂಕ ಹೆಚ್ಚಿಸಿಕೊಂಡು ಗುರುತ್ವಾಕರ್ಷಣೆ ಹೆಚ್ಚು ಮಾಡಿಕೊಂಡಳಂತೆ. ಆಸಾಮಿ ಮತ್ತೆ ಬಂದಾಗ, 'ಗುರುತ್ವಾಕರ್ಷಣೆ ಸಾಕಾ?' ಎಂದು ಸವಾಲೆಸೆದಳಂತೆ. ನಂತರ ಅವರ ಮದುವೆಯಾಯಿತೆನ್ನಿ.

ಹೈಸೆನ್‌ಬರ್ಗ್ ಅನಿಶ್ಚಿಯತೆಯ ತತ್ವವಂತೂ ಪಕ್ಕಾ ಸೂಕ್ಷ್ಮಾತಿಸೂಕ್ಷ್ಮ ಕಣಗಳಿಗೆ ಅನ್ವಯಿಸುತ್ತೆ. ಅತಿ ಸೂಕ್ಷ್ಮ ಕಣಗಳಿಗೆ ಅನ್ವಯಿಸುವ ಅವನ ತತ್ವ ಏನೇ ಇರಲಿ, ಅದನ್ನೇ ನಮ್ಮ ಜೀವನಕ್ಕೆ ತಮಾಷೆಯಾಗಿ ಅನ್ವಯಿಸಲು ಸಾಧ್ಯವಿಲ್ಲವೇ? ಏಕಾಗದು? ಅಲ್ಲ, ನಮ್ಮ ಬದುಕೇ ಬಲು ಅನಿಶ್ಚಿತ. ಇಂದು ಇಂದಿಗೆ ಮಾತ್ರ. ನಾಳೆ ಏನಾಗುವುದೋ ಬಲ್ಲವರಾರು?

ಇರಲಿ, ನಮ್ಮ ನಿತ್ಯ ಜೀವನದಲ್ಲೂ ಈ ಅನಿಶ್ಚಿಯತೆ ತತ್ವ ಹೇಗೆ ಅನ್ವಯವಾಗತ್ತೆ ನೋಡೋಣ: ಈ ನನ್ನ ಲೇಖನ (ಹಾಸ್ಯ) ಸಂಪಾದಕರಿಗೆ ಇಷ್ಟವಾಗುತ್ತದೋ ಇಲ್ಲವೋ? ಅವರದನ್ನು ಪ್ರಕಟಿಸುತ್ತಾರೋ ಇಲ್ಲವೋ? ಪ್ರಕಟಿಸಲೂಬಹುದು, ಇಲ್ಲದೆಯೂ ಇರಬಹುದು ಅಲ್ಲವೇ? ನೀವು ಪ್ರಯಾಣಕ್ಕಾಗಿ ರೈಲು ಟಿಕೀಟು ಖರೀದಿಸಿ ರೈಲು ಬೆಳಗ್ಗೆ ಏಳು ಗಂಟೆಗೇ ಬರುವುದೆಂದು, ಮನೆಯಿಂದ ಗಡಿಬಿಡಿಯಾಗಿ 6.30ರ ಹೊತ್ತಿಗೇ ರೈಲು ನಿಲ್ದಾಣ ತಲುಪಿ, ಧನ್ಯಾಗುತ್ತೀರ. ರೈಲು ಸರಿಯಾದ ಸಮಯಕ್ಕೆ ಬರುತ್ತದೋ ಇಲ್ಲವೋ? ಬರಬಹುದು, ಬರದೆಯೂ (ಸಮಯಕ್ಕೆ ಸರಿಯಾಗಿ) ಇರಬಹುದು ಅಲ್ಲವೇ? ಬಂದ ಮೇಲೇ ತಾನೇ ಅದು ನಿಶ್ಚಿತ, ಅಲ್ಲಿಯವರೆಗೆ ಅನಿಶ್ಚಿತ ಅಲ್ಲವೇ? ವಿದ್ಯಾರ್ಥಿ(ನಿ) ಪರೀಕ್ಷೆ ಮುಗಿದಿದೆ. ಅವನು(ಳು) ಪರೀಕ್ಷೆಯಲ್ಲಿ ಉತ್ತೀರ್ಣವಾಗಲೂಬಹುದು, ಆಗದೆಯೂ ಇರಬಹುದು, ಮೊದಲ ದರ್ಜೆಯಲ್ಲಿ ಪಾಸಾಗಲೂಬಹುದು, ಇಲ್ಲವೇ ಸಾಧಾರಣ ದರ್ಜೆಯಲ್ಲಿ ಪಾಸಾಗಬಹುದು, ರ್‍ಯಾಂಕ್ ಬರಲೂಬಹುದು, ಇಲ್ಲದೆಯೂ ಇರಬಹುದು. ಫಲಿತಾಂಶ ಬರುವವರೆಗೆ ಎಲ್ಲವೂ ಅನಿಶ್ಚಿತ ಅಲ್ಲವೇ? ಇಂತಹ ಹಲವಾರು ಸನ್ನಿವೇಶಗಳು ನಮ್ಮ ನಿತ್ಯ ಜೀವನದ ಅಂಶವಲ್ಲವೇ?

ಮೇಲೆ ಹೇಳಿರುವುದು ಹೈಸೆನ್‌ಬರ್ಗ್‌ನ ತತ್ವ ಈ ರೀತಿ ಖಂಡಿತ ಅಲ್ಲ, ಎಲ್ಲ ಸಂದರ್ಭಗಳಿಗೂ ಅನ್ವಯವಾಗದ ಒಂದು ತತ್ವವನ್ನು ಹೇಗೆ ಅಪಭ್ರಂಶವಾಗಿ ಅರ್ಥೈಸಬಹುದು ಎಂಬುದಕ್ಕೆ ಉದಾಹರಣೆಗಳು ಮಾತ್ರ.

❑

---


**ಭಾರ ಯಾವುದಯ್ಯ**

ಅವನು ಶಾಲೆಯಲ್ಲಿ ಕಲಿಯುತ್ತಿದ್ದಾಗ ಒಂದು ದಿನ ವಿದ್ಯಾ ಇಲಾಖೆಯಿಂದ ಬಂದ ಹಿರಿಯರು ಅವನ ಮುಂದೆ ನಿಂತು ಎದ್ದು ನಿಲ್ಲು ಎಂದು ಹೇಳಿ ಒಂದು ಟನ್ ಹತ್ತಿ ಹೆಚ್ಚು ತೂಗುತ್ತದೆಯೋ ಅಥವಾ ಒಂದು ಟನ್ ಕಲ್ಲು ಹೆಚ್ಚು ತೂಗುತ್ತದೆಯೋ ಎಂದು ಕೇಳಿದರು. ಕಲ್ಲು ಭಾರ ಹತ್ತಿ ಹಗುರ (ಎರಡೂ ಸಹ ಒಂದು ಟನ್ ಎನ್ನುವುದನ್ನು ಮರೆತು) ಎಂದು ತಿಳಿದಿದ್ದ ಅವನು ಕಬ್ಬಿಣ ಸರ್ ಅಂದ.

ಈಗ ಅವನು ಕನಕಪುರದ ಹತ್ತಿರ ಎಲ್ಲೋ ಕಲ್ಲು ಗಣಿಗಾರಿಕೆ ಮಾಡುತ್ತಿದ್ದಾನಂತೆ

# ವೈಜ್ಞಾನಿಕ ತುಂತುರು

- ದಂನಆ



- ಡಿಎನ್ಎ ಎಂಬುದು ವಿಶ್ವದ ಮೊದಲ 3ಡಿ ಕ್ಸೆರಾಕ್ಸ್ ಯಂತ್ರ.
- ವೈಜ್ಞಾನಿಕ ಕತೆಗಳನ್ನು ಹೀಗೆಳೆಯುವ ಮಂದಿಯೇ ಹವಾಮಾನ ವರದಿಯನ್ನು ನಂಬುವುದು ಕುತೂಹಲಕರವಲ್ಲವೆ?
- ಎ ಬಯೊಫಿಸಿಸಿಸ್ಟ್ ಟಾಕ್ಸ್ ಫಿಸಿಕ್ಸ್ ಟು ದಿ ಬಯಾಲಿಜಿಸ್ಟ್ಸ್ ಅಂಡ್ ಬಯಾಲಜಿ ಟು ದಿ ಫಿಸಿಸಿಸ್ಟ್ ಬಟ್ ವೆನ್ ಹಿ ಮೀಟ್ಸ್ ಅನದರ್ ಬಯೊಫಿಸಿಸಿಸ್ಟ್ ದೆ ಜಸ್ಟ್ ಡಿಸ್ಕಸ್ ವಿಮೆನ್.
- ವಿಜ್ಞಾನ: ಯಾರಿಗೂ ಗೊತ್ತಿಲ್ಲದ ವಿಷಯವನ್ನು ಎಲ್ಲರಿಗೂ ಗೊತ್ತಾಗುವಂತೆ ಹೇಳುವುದು. ಕಾವ್ಯ ಇದರ ತದ್ವಿರುದ್ಧ.
- ಹಸಿರಾಗಿದ್ದರೆ ಅದು ಸಸ್ಯಶಾಸ್ತ್ರ, ಕೊಳೆತ ವಾಸನೆ ಆಗಿದ್ದರೆ ಅದು ಕೆಮಿಸ್ಟ್ರಿ, ಅದು ಕೆಲಸ ಮಾಡದಿದ್ದರೆ ಭೌತಶಾಸ್ತ್ರ.
- ಬಡ್ಡಿ ವ್ಯಾಪಾರಿಯ ಆತ್ಮ ಇಟ್ಟುಕೊಂಡು ವಿಜ್ಞಾನ ಎಂಬ ದೇಗುಲವನ್ನು ಪ್ರವೇಶಿಸಬಾರದು.
- ರಿಸರ್ಚ್ ಈಸ್ ವಾಟ್ ಐ ಆಮ್ ಡೂಯಿಂಗ್ ವೆನ್ ಐ ಡುನಾಟ್ ನೊ ವಾಟ್ ಐ ಆಮ್ ಡುಯಿಂಗ್.
- ಹೇಗೆ ನಿಘಂಟು ಸಾಹಿತ್ಯವಾಗುವುದಿಲ್ಲವೊ ಹಾಗೆಯೇ ವಾಸ್ತವಾಂಶಗಳೇ ವಿಜ್ಞಾನ ಅಲ್ಲ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ವಿಜ್ಞಾನ ತಿಳುವಳಿಕೆಗೆ ಮಿತಿ ಹೇರಬಹುದು. ಆದರೆ ಕಲ್ಪನೆಗಳಿಗೆ ಮಿತಿ ಹೇರಬಾರದು.
- ವಿಜ್ಞಾನ ಎಂದರೆ ಹೊಸ ವಿಷಯಗಳನ್ನರಿಯುವುದಷ್ಟೇ ಅಲ್ಲ, ಅವುಗಳ ಬಗ್ಗೆ ಹೊಸದಾಗಿ ಯೋಚನೆ ಮಾಡುವಂತಹುದು.
- ಇಫ್ ವಿ ನೊ ವಾಟ್ ಇಟ್ ವಾಸ್ ವಿ ವರ್ ಡುಯಿಂಗ್ ಇಟ್ ವುಡ್ ನಾಟ್ ಬಿ ಕಾಲಡ್ ರಿಸರ್ಚ್, ವುಡ್ ಇಟ್?
- ಸರಿಯಾದ ಉತ್ತರಗಳನ್ನು ಕೊಡುವವನು ವಿಜ್ಞಾನಿ ಅಲ್ಲ; ಸರಿಯಾದ ಪ್ರಶ್ನೆಗಳನ್ನು ಕೇಳುವವನು.
- ನೇಚರ್ ಕಂಪೋಸಸ್ ಸಮ್ ಆಫ್ ಹರ್ ಲವ್ಲೀಯಸ್ಟ್ ಪೊಯಮ್ಸ್ ಫಾರ್ ದಿ ಟೆಲೆಸ್ಕೋಪ್ ಅಂಡ್ ಮೈಕ್ರೊಸ್ಕೋಪ್.
- ವಿಜ್ಞಾನದ ವೈಶಿಷ್ಟ್ಯ: ಅಸಂಬದ್ಧ ಪ್ರಶ್ನೆ ಕೇಳಿ ಅದಕ್ಕೆ ಸಮಂಜಸ ಉತ್ತರ ಹುಡುಕತೊಡಗುವುದು.
- ಇಂದಿನ ವಿಜ್ಞಾನವೇ ನಾಳಿನ ತಂತ್ರಜ್ಞಾನ.
- ಬಿ ಎ ಸೈನ್ಸ್ ಗರ್ಲ್ ಆರ್ ಗೈ, ಆಲ್ವೇಸ್ ಆಸ್ಕ್ ವಾಟ್ ಅಂಡ್ ವೈ.

❑

**ವಿಜ್ಞಾನ ವಿಶೇಷ**

# ನಮ್ಮ ರಾಹುನ ನಮಗೆ ಕೊಟ್ಬಿಡಿ

**- ಪಾಲಹಳ್ಳಿ ವಿಶ್ವನಾಥ್**

ಹರಿದ್ವಾರದಲ್ಲಿ ಒಂದು ಬಹಳ ಗುಪ್ತ ಸಭೆ ನಡೆಯುತ್ತಿದೆ. ಹಲವಾರು ರಾಜ್ಯಗಳ ಮುಖಂಡರು ಮತ್ತು ವಿವಿಧ ಕ್ಷೇತ್ರಗಳ ತಜ್ಞರೂ ಬಂದಿದ್ದಾರೆ. ಸಭಾಧ್ಯಕ್ಷರು ವಿಷಯವನ್ನು ಮಂಡಿಸಿದರು. ''ನಾವು ಅನಾದಿ ಕಾಲದಿಂದಲೂ ಗ್ರಹಣಕ್ಕೆ ರಾಹುಕೇತುಗಳು ಕಾರಣ ಎಂದು ತಿಳಿದಿದ್ದೇವೆ ಮತ್ತು ಹೇಳಿಕೊಂಡು ಬಂದಿದ್ದೇವೆ. ಸೂರ್ಯನನ್ನು ರಾಹು ನುಂಗಿದಾಗ ಸೂರ್ಯಗ್ರಹಣವಾಗುತ್ತದೆ. ಆದರೆ ಈಗ ರಾಹು ನಮ್ಮ ಜೊತೆ ಇಲ್ಲ... ಹಾಗಲ್ಲ ಅರ್ಥ. ರಾಹು ಕಾಣೆಯಾಗಿದ್ದಾನೆ. ಪ್ರಜೆಗಳು ಗಾಬರಿಯಾಗುತ್ತಾರೆಂದು ನಾವು ಇದಕ್ಕೆ ಪ್ರಚಾರ ಕೊಟ್ಟಿಲ್ಲ.''

''ರಾಹು ಇಲ್ಲದಿರುವುದು ನಿಮಗೆ ಹೇಗೆ ತಿಳಿಯಿತು?''

''ಹಲವಾರು ವರ್ಷಗಳಿಂದ ಬಿಸಿಲು ಹೆಚ್ಚಾಗುತ್ತಿದೆ. ನಮ್ಮ ಭಾರತದಲ್ಲಿ ಸೂರ್ಯಗ್ರಹಣವೇ ನಡೆದಿಲ್ಲ. ಸೂರ್ಯನನ್ನು ಹಿಡಿಯುವರೇ ಇಲ್ಲವಲ್ಲ!''

''ಹೌದಲ್ಲವೆ'' ಎಂದು ಹಲವಾರು ಸಭಿಕರು ದನಿ ಕೂಡಿಸಿದರು.

''ಅಪಘಾತಗಳೂ ಹೆಚ್ಚಾಗಿವೆ ಅಲ್ಲವೆ?''

''ಹೌದು, ರಾಹು ನಮ್ಮಲ್ಲಿ ಇಲ್ಲದೆ ದೂರದಲ್ಲಿ ಎಲ್ಲೋ ಇರುವುದರಿಂದ ರಾಹುಕಾಲದ ಸಮಯವೇ ಬದಲಾಗಿಬಿಟ್ಟಿದೆ. ಜನ ಇನ್ನೂ ಹಳೆಯ ರಾಹುಕಾಲದ ಪ್ರಕಾರವೇ ಜೀವನ ನಡೆಸುತ್ತಿದ್ದಾರೆ. ನಿಜವಾದ ರಹುಕಾಲದಲ್ಲೆಲ್ಲ ಪ್ರಯಾಣ ಮಾಡ್ತಿದ್ದರೆ ಅಪಘಾತ ಆಗ್ದೇ ಏನಾಗುತ್ತೆ. ಅದಲ್ಲದೆ ಪುಣ್ಯಕ್ಷೇತ್ರ ಕಾಶಿಯಲ್ಲಿನ ನವಗ್ರಹಗಳಲ್ಲಿ ಒಂದು ನಾಪತ್ತೆಯಾಗಿದ್ದು ಅದು ನಮಗೆ ತಿಳಿದ ತಕ್ಷಣ ಭಕ್ತಾದಿಗಳಿಗೆ ಅನುಮಾನ ಬರದಿರಲೆಂದು ಒಂದು ಹೊಸ ವಿಗ್ರಹವನ್ನು ಇರಿಸಿದ್ದೇವೆ...''

''ಸ್ವಾಮಿ ಅಧ್ಯಕ್ಷರೇ? ನಮ್ಮ ಸಂಸ್ಕೃತಿಯಲ್ಲಿ ಸಂಖ್ಯೆ 9 ಬಹಳ ಮಹಾ ಸಂಖ್ಯೆ! ಈಗ ರಾಹುವಿಲ್ಲದಿದ್ದರೆ ಎಂಟೇ ಗ್ರಹಗಳಾಗಿಬಿಡುತ್ತವೆ. ಸಂಖ್ಯೆ 8ಕ್ಕೆ ಲಕ್ಷಣವೇ ಇಲ್ಲ. ಒಂದು ಸೊನ್ನೆಯ ಮೇಲೆ ಮತ್ತೊಂದು ಸೊನ್ನೆಯ ಸವಾರಿ ಅಷ್ಟೇ...''

''ಅದಿರಲಿ, ಈಗ ಮುಖ್ಯ ವಿಚಾರಕ್ಕೆ ಬರೋಣ. ರಾಹುವಿನ ಬಗ್ಗೆ ಯೋಚಿಸೋಣ. ಗೂಢಚಾರರ ವರದಿಯ ಪ್ರಕಾರ ರಾಹು ಪೋಲೆಂಡ್ ಎಂಬ ದೇಶದಲ್ಲಿ ಕೋಪರ್ನಿಕಸ್ ಎಂಬ ಮಾಂತ್ರಿಕನ ನೆಲಮಾಳಿಗೆಯಲ್ಲಿ ಬಂದಿಯಾಗಿದ್ದಾನೆ. ರಾಹುಗೆ ಸ್ವಲ್ಪ ಹುಷಾರಿರಬೇಕು ಅಂತ ಗೊತ್ತಿತ್ತು. ಅವನ ಜಾತಕದಲ್ಲಿ ಶನಿ ಕಾಟವಿತ್ತು. ಏನು ಮಾಡೋಣ! ಅಂತೂ ಆ ಮಾಂತ್ರಿಕ ಅವನನ್ನು ಅಪಹರಿಸಿದ. ಅವನಿಗೆ 'ನಮ್ಮ ರಾಹುನ ನಮಗೆ ಕೊಟ್ಬಿಡಿ' ಅಂತ ಅನೇಕ ಬಾರಿ ಹೇಳಿ ಕಳಿಸಿದೆವು. ಅವನು ಕೇಳಿಸಿಕೊಳ್ಳಲೇ ಇಲ್ಲ. ಆದರೆ ಈಗ ಕಡೆಗೂ ಒಪ್ಪಿದಾನೆ.''

''ಆದರೆ ಅವನು ವಾಪಸ್ಸು ಮಾಡಲು ಏನಾದರೂ ಶರತ್ತು ಹಾಕಿದ್ದಾನೆಯೇ?''

‘‘ಮತ್ತೇನು? ಖಗೋಳಕ್ಕೆ ಅವನದ್ದು ಏನೋ ಸಿದ್ಧಾಂತವಿದೆಯಂತೆ. ನಿಮ್ಮ ದೇಶದಲ್ಲಿ ನನ್ನ ಖಗೋಳದ ಮಾದರಿಯನ್ನು ಪುಸ್ತಕಗಳಲ್ಲಿ ಬರೆಸಿ ವಿದ್ಯಾರ್ಥಿಗಳಿಗೆ ಪಾಠ ಮಾಡಬೇಕು ಎಂದು ಹೇಳಿ ಕಳಿಸಿದ್ದಾನೆ.’’

‘‘ಏನಂತೆ ಅವನ ಸಿದ್ಧಾಂತ?’’

‘‘ಸೂರ್ಯ ಚಂದ್ರ ಗ್ರಹಗಳಲ್ಲವಂತೆ! ಭೂಮಿ ಗ್ರಹವಂತೆ!’’

‘‘ಶಿವ ಶಿವಾ! ಇನ್ನೇನು.’’

‘‘ಭೂಮಿ ಸೂರ್ಯನ್ನ ಸುತ್ತುತ್ತಂತೆ! ಚಂದ್ರ ಭೂಮೀನ ಸುತ್ತುತ್ತಾನಂತೆ! ಹಾಗೇ ಸುತ್ತುತ್ತಿರುವಾಗ, ಚಂದ್ರ, ಭೂಮಿ ಮತ್ತು ಸೂರ್ಯ ಮಧ್ಯ ಬಂದಾಗ ಗ್ರಹಣ ಆಗುತ್ತಂತೆ!’’

‘‘ಇದೇನು ಕಾಗಕ್ಕ ಗುಬ್ಬಕ್ಕ ಕಥೆ ಇದ್ದ ಹಾಗಿದೆ, ಬಿಡಿ, ಅದನ್ನು ಯಾರೂ ನಂಬೋದಿಲ್ಲವಲ್ಲ.’’

‘‘ಹೌದು, ಪುಸ್ತಕದಲ್ಲಿ ಅದರ ಪಾಡಿಗೆ ಆ ವಿಷಯ ಇರುತ್ತೆ ಅಷ್ಟೇ.’’

‘‘ಅದನ್ನು ಆ ಮಾಂತ್ರಿಕನಿಗೆ ತಿಳಿಸೋದು ಬೇಡ... ಇದರಲ್ಲೇನು ಅವನಿಗೆ?’’

‘‘ನಿಮಗೆ ಗೊತ್ತಿಲ್ಲವೇ ಜಂಬ! ಒಣ ಜಂಬ! ನಮ್ಮದೇ ಹೆಚ್ಚು ಅಂತ ತೋರಿಸ್ಕೋಬೇಕಲ್ಲವೇ? ಅಂತೂ ರಾಹುನ ವಾಪಸ್ಸು ಕಳಿಸೋದಕ್ಕೆ ಒಪ್ಪಿಕೊಂಡಿದ್ದಾನೆ.’’

‘‘ಆದರೆ ಈ ಪಶ್ಚಿಮ ರಾಷ್ಟ್ರಗಳು ತರಲೆ ನೋಡಿ! ಆ ಕೋಟ್ಯಾಧೀಶ, ಯಾವುದೋ ಮಧ್ಯದ ದೊರೆ ಅಂತಲ್ಲ...’’

‘‘ಮಧ್ಯಾನೋ, ಕೊನೆಯೋ... ಹೌದು ನಮ್ಮ ಸರ್ಕಾರ ಎಷ್ಟು ಕೇಳಿದರೂ ಕಳಿಸ್ತಾ ಇಲ್ಲ..’’

‘‘ಆ ಭಯವಿಲ್ಲ! ನಮ್ಮ ಸಮಾಚಾರದ ಪ್ರಕಾರ ರಾಹು ಆಗಲೇ ಅರ್ಧ ದಾರಿಯಲ್ಲಿ ಇದ್ದಾನೆ.’’

‘‘ಈಗ ಒಂದು ನಿರ್ಣಯವನ್ನು ಮಂಡಿಸೋಣ.’’

‘‘ಹೌದು! ಪಶ್ಚಿಮದಲ್ಲಿ ಅವರು ಏನು ಬೇಕಾದರೂ ಮಾಡಿಕೊಳ್ಳಲಿ. ನಮ್ಮ ಭಾರತದಲ್ಲಿ ಮಾತ್ರ ಗ್ರಹಣಗಳು ರಾಹುವಿಲ್ಲದೆ ನಡೆಯುವುದಿಲ್ಲ. ಅಂತೂ ರಾಹು ವಾಪಸ್ಸು ಬರುತ್ತಿದ್ದಾನೆ! ಬನ್ನಿ, ಕಾಶಿಗೆ ಹೋಗಿ ಅವನನ್ನು ಸ್ವಾಗತಿಸೋಣ!’’

❑

**ಸಮಯ ಎಷ್ಟು**

**ಪುಟ್ಟ ಮಗು ಅಂಗಳದಲ್ಲ ಅಕ್ಕಿ ಆರಿಸುತ್ತಾ ಕೂತಿದ್ದ ಅಜ್ಜಿಯ ಹತ್ತಿರ ಬಂದು ಅಜ್ಜೀ ನಂಗೆ ಸ್ಕೂಲಗೆ ಟೈಮ್ ಆಗ್ತಾ ಇದೆ. ಅಮ್ಮ ಇನ್ನೂ ಊಟ ಹಾಕಿಲ್ಲ ಅಂದಿತು. ಅದಕ್ಕೆ ಅಜ್ಜಿ ಅಯ್ಯೋ ಇನ್ನೂ ಈಗ ಹನ್ನೊಂದು ಗಂಟೆ. ನಿನ್ನ ಸ್ಕೂಲು ಹನ್ನೆರಡಕ್ಕೆ ಅಲ್ವೇನೋ ಅಂದಿತು. ಏನಿಲ್ಲ ಈಗ ಹನ್ನೆರಡು ಗಂಟೆ ನೋಡು ಗೋಡೆ ಗಡಿಯಾರ ತೋರಿಸುತ್ತಿದೆ ಅಂದ. ಅದಕ್ಕೆ ಅಜ್ಜಿ ಗೋಡೆ ಗಡಿಯಾರ ತಪ್ಪು ತೋರಿಸಬಹುದು. ಆದರೆ ಈ ಗಡಿಯಾರ ಎಂದೂ ತಪ್ಪು ತೋರಿಸುವುದಿಲ್ಲ ಅಂದು ಅಂಗಳದಲ್ಲ ಬಿದ್ದ ಸೂರ್ಯನ ನೆರಳು ತುಳಸೀ ಕಟ್ಟೆ ಸಮೀಪ ಇರುವುದನ್ನು ತೋರಿಸಿದಳು.**

ವಿಜ್ಞಾನ ವಿಶೇಷ

# ಸೂತ್ರಗಳ ಸುಸೂತ್ರತೆಗಳು

**- ಎನ್. ರಾಮನಾಥ್**

ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಗಸು. ಹೊಸ ಸಂಪ್ರದಾಯಕ್ಕೆ ಹಳೆಯ ವಿಜ್ಞಾನದ ನಿಯಮಗಳನ್ನು ಅಳವಡಿಸಿದರೆ ಮತ್ತೂ ಸೊಗಸು. ಮೊದಲಿಗೆ ನ್ಯೂಟನ್ನನ್ನ ನಿಯಮಗಳನ್ನೇ ತೆಗೆದುಕೊಳ್ಳೋಣ:

**ಅಜ್ಞಾನದ ಪಾಳ್ಯದಲ್ಲೂ ವಿಜ್ಞಾನದ ರಂಗು**

**ಮೊದಲನೆಯ ನಿಯಮ:**

**ಅಂದು :** ಈಚ್ ಬಾಡಿ ರಿಮೇನ್ಸ್ ಇನ್ ಇಟ್ಸ್ ಸ್ಟೇಟ್ ಆಫ್ ರೆಸ್ಟ್ ಆರ್ ಆಫ್ ಯೂನಿಫಾರ್ಮ್ ಮೋಷನ್ ಅನ್‌ಲೆಸ್ ಆಕ್ಟೆಡ್ ಅಪಾನ್ ಬೈ ಎನ್ ಎಕ್ಸ್‌ಟರ್ನಲ್ ಫೋರ್ಸ್.

**ಇಂದು :** ಸರ್ಕಾರದಲ್ಲಿರುವ ಪ್ರತಿ ಫೈಲೂ ತನ್ನದೇ ಆದ ನಿಶ್ಚಲ ಸ್ಥಿತಿ ಅಥವಾ ಬಲು ನಿಧಾನಗತಿಯಲ್ಲಿ ಮುಂದುವರೆಯುತ್ತಿರುತ್ತದೆ - ಲಂಚವೆಂಬ ವಿಶೇಷ ಒತ್ತಡವನ್ನು ಅದರ ಮೇಲೆ ಅಳವಡಿಸುವವರೆಗೆ.

**ಎರಡನೆಯ ನಿಯಮ:**

**ಅಂದು :** ದ ಫೋರ್ಸ್ ವಿತ್ ವಿಚ್ ಎ ಬಾಡಿ ಮೂವ್ಸ್ ಈಸ್ ಈಕ್ವಲ್ ಟು ದ ಪ್ರಾಡಕ್ಟ್ ಆಫ್ ಇಟ್ಸ್ ಮಾಸ್ ಅಂಡ್ ದ ಆಕ್ಸಿಲರೇಷನ್ ಅಪ್ಲೈಡ್.

**ಇಂದು :** ಸರ್ಕಾರದ ಕಚೇರಿಯಲ್ಲಿ ಫೈಲುಗಳು/ಬಿಲ್ಲುಗಳು ಸಂಚರಿಸುವ ವೇಗ ಆ ಫೈಲಿನೊಡನೆ ಇರಿಸಿದ ತೂಕ (ಮಾಸ್ ಉರುಫ್ ಲಂಚ) ಮತ್ತು ಹೇರಲಾದ ವಶೀಲಿಯ ತೀವ್ರತೆಯ ಗುಣಲಬ್ಧಕ್ಕೆ ಅನುಗುಣವಾಗಿರುತ್ತದೆ.

**ಮೂರನೆಯ ನಿಯಮ:**

**ಅಂದು :** ಆಕ್ಷನ್ ಅಂಡ್ ರಿಯಾಕ್ಷನ್ ಆರ್ ಈಕ್ವಲ್ ಅಂಡ್ ಆಪೋಸಿಟ್.

**ಇಂದು :** ಫೈಲಿಗೆ ಸಂಬಂಧಿತ ಕ್ರಿಯೆ ಮತ್ತು ಲಂಚದಿಂದುಂಟಾದ ಪ್ರತಿಕ್ರಿಯೆಗಳು ಪರಸ್ಪರ ಸಮವೂ, ಪೂರಕವೂ ಆಗಿರುತ್ತವೆ.

ಶಕ್ತಿಯ ಬಗ್ಗೆ ಒಂದು ನಿಯಮವಿದೆ. ಎನರ್ಜಿ ಕ್ಯಾನ್ ನೈದರ್ ಬಿ ಕ್ರಿಯೇಟೆಡ್ ನಾರ್ ಡೆಸ್ಟ್ರಾಯ್ಡ್; ಇಟ್ ಕ್ಯಾನ್ ಬಿ ಚೇಂಜ್ಡ್ ಫ್ರಂ ಒನ್ ಫಾರ್ಮ್ ಟು ದ ಅದರ್ ಎನ್ನುತ್ತದೆ ಆ ನಿಯಮ.

ಹುಡುಗರು ಸೃಜಿಸಿರುವ ಅದರ ಇಂದಿನ ರೂಪ: ಪ್ರೀತಿ ಉರುಫ್ ಲವ್ ಅನ್ನು ಸೃಷ್ಟಿಸಲಾಗಲಿ, ನಾಶಗೊಳಿಸಲಾಗಲಿ ಸಾಧ್ಯವಿಲ್ಲ; ಅದನ್ನು ಒಂದು ಹುಡುಗಿಯಿಂದ ಇನ್ನೊಂದು ಹುಡುಗಿಗೆ ವರ್ಗಾಯಿಸಬಹುದಷ್ಟೆ!

ನಮ್ಮ ನೆಚ್ಚಿನ ಅ.ರಾ.ಸೇ. ಥಿಯರಿ ಆಫ್ ರಿಲೇಟಿವಿಟಿಗೂ ಒಂದು ವಿಶೇಷವಾದ ಅರ್ಥವನ್ನು ಕಲ್ಪಿಸಿದ್ದರು. ಈ ಈಸ್ ಈಕ್ವಲ್ ಟು ಎಂಸೀ ಸ್ಕೇರ್ಡ್ ಎನ್ನುವುದಕ್ಕೆ ಅವರು ಈ ಎಂದರೆ ಎನರ್ಜಿ, ಆರ್ಥಾತ್ ಶಕ್ತಿ. ಅಂತಹ ಶಕ್ತಿಯು ಎಂ ಇಂಟು ಸಿ ಇಂಟು ಸಿಗೆ ಸಮವಾಗಿರುತ್ತದೆ. ಎನರ್ಜಿ = ಮಸಾಲೆದೋಸೆ (ಎಂ) ಇಂಟು ಕಾಫಿ (ಸಿ) ಇಂಟು ಸಿಗರೇಟ್ (ಸಿ) ಎಂದಿದ್ದರು. ಅಲ್ಲದೆ ಇವೆಲ್ಲವೂ ಇದ್ದರೆ ಸಂಬಂಧಗಳು ಹೆಚ್ಚು ಬೆಳೆಯುವುದರಿಂದ ಇದೇ ಥಿಯರಿ ಆಫ್ ರಿಲೇಟಿವಿಟಿಯ ಸೂಕ್ತ ಅರ್ಥ ಎಂದೂ ಪ್ರತಿಪಾದಿಸಿದ್ದರು.

ನಮಗೆಲ್ಲ ತಿಳಿದಿರುವಂತೆ ಹೆಚ್‌ಟೂ ಪ್ಲಸ್ ಓಟೂ ಈಸ್ ಈಕ್ವಲ್ ಟು ಹೆಚ್‌ಟೂಓ ಎನ್ನುವುದು ನೀರಿನ ಸಮೀಕರಣ. ಮೊನ್ನೆ ರಾಜಕಾರಣಿಯೊಬ್ಬರು ''ಹೆಚ್‌ಟೂ ಪ್ಲಸ್ ಓಟೂ ಈಸೀಕ್ವಲ್ ಟು ಹೆಚ್ ಟೂ ಓಟೂ'' ಎಂದರು. ''ಏನೀ ನೂತನ ಸಮೀಕರಣ?'' ಎಂದೆ.

''ನಮ್ಮದು ಮೊದಲೇ ಒಂದು ಓಟ್ ಬ್ಯಾಂಕ್ ಇರುತ್ತದೆ. ಅದೇ ಓಟೂ. ಅದಕ್ಕೆ ಹೆಚ್‌ಟೂ ಸೇರಿಸಿದರೆ...''

''ಹೆಚ್‌ಟೂ ಎಂದರೆ?'' ಮಧ್ಯದಲ್ಲೇ ಮೂಗು ತೂರಿಸಿದೆ.

''ಹೆಚ್ ಫಾರ್ ಹೆಂಡ; ಹೆಚ್ ಫಾರ್ ಹಣ; ಇವೆರಡನ್ನೂ ಸೇರಿಸಿದರೆ ನಮಗೆ ಹೆಚ್ಚು ಹೆಚ್ಚು ಓಟೂ ಉರುಫ್ ಮತಗಳು'' ಎಂದು ಬೀಗಿದರು.

ಅಜ್ಞಾನದ ಪಾಳ್ಯದಲ್ಲೂ ವಿಜ್ಞಾನದ ರಂಗು ಕಂಡು ದಂಗಾದೆ.


❑

---



ತಡ ಆಗಿದ್ದಕ್ಕೆ ಕ್ಷಮೆ ಇರಲಿ. ನಿಮಗೇ ಗೊತ್ತಲ್ಲಾ ಈ ಬ್ರಹ್ಮಾಂಡ ಯಾವಾಗ್ಲೂ ಎಕ್ಸ್‌ಪ್ಯಾಂಡ್ ಆಗಿರತ್ತೆ ಅಂತ!


## ಸಗಣಿಯಿಂದ ದೀಪೋದಯ–ಜ್ಞಾನೋದಯ





ಗೋಬರ್ ಗ್ಯಾಸ್ ಎಕಾನಮಿ




ಕಲ್ಪನೆ: ಡಾ|| ಸಿ.ವಿ. ವಿಶ್



**ಲ್ಯಾಬ್‌ನಲ್ಲಿ ಸಾಂಗವಾಗಿ ನೆರವೇರುತ್ತಿರುವ ಪೂಜೆ**

ವಿಜ್ಞಾನ ವಿಶೇಷ

# ಸ್ಪೇರ್ ಪಾರ್ಟ್ಸ್ ಕ್ಲಿನಿಕ್

**- ಸಿ.ಆರ್. ಸತ್ಯ**

ಇದು ನಡೆದಿದ್ದು 2025ರ ಇಸವಿಯಲ್ಲಿ. ಆದರೆ ನಾನು ನಿಮಗೆ ಇದನ್ನ ಮುಂಗಡವಾಗಿಯೇ ತಿಳಿಸ್ತಿದ್ದೀನಿ. ಆಗ ನಮ್ಮ ದೇಶದಲ್ಲಿ ಹೈ ಟೆಕ್ನಾಲಜಿ ಎಲ್ಲರಿಗೂ ಲಭ್ಯವಿತ್ತು. ಬೆಂಗಳೂರಿನ ಮಲ್ಲೇಶ್ವರದಲ್ಲೇ (ಈಗ ತರಕಾರಿ ಮಾರ್ಕೆಟ್ ಇರೋ ಕಡೆ). ಡಾ. ಬ್ರಹ್ಮ ಅವರು ಅತ್ಯಾಧುನಿಕ ಸ್ಪೇರ್ ಪಾರ್ಟ್ಸ್ ಕ್ಲಿನಿಕ್ ತೆಗೆದಿದ್ದರು. ಮೊದಲೇ ಅಪಾಯಿಂಟ್ ಮೆಂಟ್ ತೊಗೊಂಡು ನಾನೂ, ನನ್ನ ಹೆಂಡತಿಯೂ ಅಲ್ಲಿಗೆ ಹೋದೆವು. ಡಾಕ್ಟರ್ ಇಬ್ಬರನ್ನೂ ಕೂರಿಸಿದ್ರು. ವೇಟಿಂಗ್ ರೂಮ್‌ನಲ್ಲಿ ಡಾ. ಬ್ರಹ್ಮ, ಎಂ.ಬಿ.ಬಿ.ಎಸ್., ಎಮ್.ಎಸ್., ಫೆಲ್ಲೋ ಎಸ್.ಪಿ.ಎಸ್. ಅಂತ ಬೋರ್ಡ್ ನೋಡಿದೆ. ಅಲ್ಲಿದ್ದ ರಿಸೆಪ್ಷನಿಸ್ಟ್‌ನ 'ಫೆಲ್ಲೋ ಎಸ್.ಪಿ.ಎಸ್. ಅಂದರೆ ಏನು? ಅಂತ ಕೇಳಿದೆ. ಅವಳು 'ಫೆಲ್ಲೋ ಆಫ್ ರಾಯಲ್ ಸೊಸೈಟಿ ಆಫ್ ಸ್ಪೇರ್ ಪಾರ್ಟ್ಸ್ ಸರ್ಜನ್ಸ್ ಅಂತ ವಿವರಣೆ ಕೊಟ್ಟಳು. ಅಷ್ಟರಲ್ಲೇ ಡಾಕ್ಟರ್ ಒಳಗೆ ಕರೆದರು.

**ಈ ಫೆಲ್ಲೋ ಎಸ್.ಪಿ.ಎಸ್. ದೇಹದ ಯಾವುದೇ ಭಾಗವನ್ನು ಬೇಕಾದರೂ ಬದಲಾಯಿಸಿ ಕೊಡುತ್ತಾರೆ.**

'ಏನು ಬೇಕು ಹೇಳಿ' ಅಂದರು. ನನ್ನ ಹೆಂಡತಿ, 'ಡಾಕ್ಟರ್, ನನಗೆ ಈ ಮೂಗು ಬೇಜಾರಾಗ್ತಿದೆ. ಅದರಿಂದ ನಂದು ಗಿಣಿ ಮೂತಿ ಅಂತ ಹುಟ್ಟಿದಾಗಿನಿಂದ ಇಲ್ಲಿಯವರೆಗೆ ಎಲ್ಲರ ಕೈನಲ್ಲೂ ರೇಗಿಸಿಕೊಂಡು ಸಾಕಾಗಿ ಹೋಗಿದೆ. ಬೇರೆ ಹಾಕಿ' ಅಂದಳು. 'ಆಗ್ಲಿ, ನಿಮ್ಮ ಮುಖಕ್ಕೆ ನನ್ನ ಪ್ರಕಾರ ಚೈನೀಸ್ ಅಥವಾ ವಿಯಟ್ನಾಮ್ ಮೂಗು ಒಪ್ಪುತ್ತೆ. ಆದರೆ ಅದು ಸ್ವಲ್ಪ ಬೆಲೆ ಜಾಸ್ತಿ. ಫಿಕ್ಸಿಂಗ್ ಚಾರ್ಜೂ ಜಾಸ್ತಿಯಾಗುತ್ತೆ. ಬಟ್ ವೇಸ್ಟೇಜ್ ಕಮ್ಮಿ ಇರುತ್ತೆ. ನಿಮ್ಮ ಮುಖ ಇನ್ನಷ್ಟು ಚೆನ್ನಾಗಿ ಕಾಣೋದರಲ್ಲಿ ಸಂಶಯವೇನೂ ಇಲ್ಲ. ಇನ್ನೊಂದು ಅನುಕೂಲ ಅಂದರೆ, ಮೂಗು ಚಿಕ್ಕ ಸೈಜ್ ಆಗಿರೋದರಿಂದ ನಿಮಗೆ ನೆಗಡಿ ಬರೋದು ಕಮ್ಮಿ ಆಗಬಹುದು. ಚೈನೀಸ್ ಮಾಡೆಲ್ ಆದರೆ 50,000 ರೂಪಾಯಿ ಪ್ಲಸ್ ಜಿ.ಎಸ್.ಟಿ. ಆಗುತ್ತೆ' ಅಂದರು. ನನ್ನ ಹೆಂಡತಿ 'ಓಕೆ' ಅಂದಳು (ದುಡ್ಡು ಕೊಡೋನು ನಾನೇ ತಾನೇ).

'ಇನ್ನೇನು ಮಾಡಲೀ?' ಅಂತ ಕೇಳಿದರು.

'ಬೇರೆ ಜಡೇನೂ ಫಿಕ್ಸ್ ಮಾಡಿ ಬಿಡಿ ಡಾಕ್ಟರ್. ಕೂದಲೆಲ್ಲಾ ನರೆತುಹೋಗಿ ಉದುರುತ್ತಾನೂ ಇವೆ' ಅಂದಳು. ಅದಕ್ಕೆ ಡಾಕ್ಟರ್, 'ನಿಮಗೆ ಯಾವ ಜಡೆ ಫಿಕ್ಸ್ ಮಾಡಲಿ? ಈಗ ನಮ್ಮಲ್ಲಿ ಶಾರ್ಟ್ ಕಟ್-ಫ್ರೆಂಚ್-ಬ್ರ್ಯಾಂಡ್ ಇದೆ. ಬಾಬ್ ಕಟ್ ಇದೆ. ಪೋನಿ ಟೈಲ್ ಇದೆ. ತಿರುಪತಿ ಕಟ್ ಇದೆ - ಎರಡು ಅಡಿ ಉದ್ದ. ಇವೆಲ್ಲಾ 25,000 ದಿಂದ 45,000 ರೂಪಾಯಿ ರೇಂಜ್‌ನಲ್ಲಿವೆ. ಜಿ.ಎಸ್.ಟಿ. ಎಕ್ಸ್ಟ್ರಾ' ಅಂದರು. ತಿರುಪತಿ ಕಟ್‌ನೇ ಕೊಡಿ ಅಂತ ಹೇಳಿದಳು. ಡಾಕ್ಟರ್ ಸಂತೋಷದಿಂದ ಬರೆದುಕೊಂಡರು. ನನ್ನ ಹೆಂಡತಿ ಕೈಗಳನ್ನೇ ನೋಡ್ತಾ, 'ನಿಮ್ಮ ಉಗುರುಗಳೂ ಔಟ್ ಆಫ್ ಶೇಪ್ ಆಗಿವೆ. ಅವನ್ನೂ ಬದಲಾಯಿಸಿದರೆ ಒಳ್ಳೆಯದು. ಅವುಗಳ ಜೊತೆಗೆ ನಿಮ್ಮ ಬೆರಳುಗಳನ್ನೂ ನೀವು ಬದಲಾಯಿಸಿದರೆ ನಿಮ್ಮ ಕೈಗಳು ಸಿಂಗಪೂರ್

ಏರ್ ಲೈನ್ಸ್ ಏರ್ ಹೋಸ್ಟೆಸ್ಸ್ ಕೈಗಳ ತರಹ ಕಾಣುತ್ತೆ. ಯೋಚನೆ ಮಾಡಿ. ಬೆರಳುಗಳಿಗೆ ತಲಾ 5,000 ರೂಪಾಯಿ ಅಷ್ಟೆ ಹತ್ತು ಬೆರಳುಗಳನ್ನು ಹಾಕಿಸಿಕೊಂಡರೆ ಶೇಕಡ 5 ರಷ್ಟು ರಿಯಾಯಿತಿ ಇದೆ' ಅಂದರು.

'ಆಗಲಿ ಡಾಕ್ಟರ್, ಹಾಕಿಬಿಡಿ. ನಿಮ್ಮ ಕ್ಲಿನಿಕ್‌ಗೂ ಎಷ್ಟು ಸಲ ಅಂತ ಬರೋದಕ್ಕೆ ಆಗುತ್ತೆ' ಅಂತ ಒಪ್ಪಿಗೆ ಕೊಟ್ಲು.

'ಜಿ.ಎಸ್.ಟಿ. ಎಕ್ಸ್‌ಟ್ರಾನೇ?' ಅಂತ ನಾನು ವೀಕಾಗಿ ಕೇಳಿದೆ. ಹೌದು ಅಂದರು.

ಸರಿ, ನನ್ನ ಹೆಂಡತಿ ವ್ಯವಹಾರ ಮುಗೀತು ಅಂತ ಡಾಕ್ಟರ್ ನನ್ನ ಕಡೆ ತಿರುಗಿದರು. 'ಇವರಿಗೇನು ಮಾಡಲಿ?' ಅಂತ ನನ್ನ ಹೆಂಡತೀನ ಕೇಳಿದರು.

ಅವಳು 'ಇವರ ಬೊಜ್ಜು ಹೊಟ್ಟೇನ ಕಿತ್ತು ಹಾಕಿ ಸ್ವಲ್ಪ ಸಣ್ಣ ಹೊಟ್ಟೆ ಹಾಕಿ ಡಾಕ್ಟರ್. ಯಾಕೋ ಅವರನ್ನ ಇತ್ತೀಚೆಗೆ ನೋಡೋಕ್ಕೆ ಆಗ್ತಿಲ್ಲ' ಅಂದಳು.

'ಆಗ್ಲೀಮ್ಮ. ನನ್ನ ಹತ್ತಿರ ಟೈವಾನ್ ಮೇಕ್ 30 ಸೆಂಟಿಮೀಟರ್ ಸೈಜ್ ಹೊಟ್ಟೆ ಇದೆ. ಇವರಿಗೆ ಒಪ್ಪುತ್ತೆ. ಬೆಲೆ ಜಾಸ್ತಿ ಇಲ್ಲಮ್ಮ. ಒಂದೂವರೆ ಲಕ್ಷ ಅಷ್ಟೆ. ಆದರೆ, ಇವರಿಗೆ ಫಿಕ್ಸಿಂಗ್ ಚಾರ್ಜ್ ಜಾಸ್ತಿ ಆಗುತ್ತೆ. ಇನ್-ಪೇಶೆಂಟ್ ಆಗಿ ಹದಿನೈದು ದಿನಾನಾದ್ರೂ ಇರಬೇಕಾಗುತ್ತೆ. ಈ ಚಾರ್ಜು ಇನ್ನೊಂದು ಲಕ್ಷ ರೂಪಾಯಿ ಆಗಬಹುದು' ಅಂದರು. 'ಪರವಾಗಿಲ್ಲ ಡಾಕ್ಟ್ರೇ, ಮಾಡಿಬಿಡಿ ಅಂತ ನನ್ನನ್ನ ಕೇಳದೇನೆ ಒಪ್ಪಿಗೆ ಕೊಟ್ಲು.' ನಂದೂ ಒಂದು ಆಸೆ ಇದೆ ಡಾಕ್ಟರ್. ಹೇಳಬಹುದೇ ಅಂತ ಕೇಳಿದೆ. 'ಹೇಳಿ, ಹೇಳಿ' ಅಂತ ಬರೆದುಕೊಳ್ಳೋಕ್ಕೆ ರೆಡಿ ಆದರು.

'ನನ್ನ ಕಿವಿಗಳು ತೀರಾ ಸಣ್ಣಗಿವೆ. ಕೇಳಿಸೋದೂ ಕಮ್ಮಿ.' ನನ್ನ ಕನ್ನಡಕ ಅವುಗಳ ಮೇಲೆ ಸರಿಯಾಗಿ ಕೂತ್ಕೋತಿಲ್ಲ. ತಲೆ ಕೂದಲೂನೂ ಅವನ್ನ ಮುಚ್ಚಿಕೊಂಡು ಕಷ್ಟ ಕೊಡ್ತಿದೆ ಅಂತ ಹೇಳಿದೆ. ಡಾಕ್ಟರ್, 'ಅಯ್ಯೋ, ಅದಕ್ಕೇನಂತೆ ನನ್ನ ಹತ್ತಿರ ಎಕ್ಸ್.ಎಲ್. ಸೈಜ್ ಕಿವಿಗಳಿವೆ. ಒಳ್ಳೇ ಕ್ವಾಲಿಟಿ ಸಿಲಿಕಾನ್ ರಬ್ಬರ್‌ದು. ಸೊಳ್ಳೆಯೋ ನೊಣವೋ ಕಿವಿ ಮೇಲೆ ಕೂತರೆ, ಆನೆ ಮರಿಯ ಹಾಗೇನೇ ಕಿವಿಗಳನ್ನ ಅಲ್ಲಾಡಿಸಬಹುದು. ಹಾಕ್ಲೇ? ಒಂದು ಕಿವಿಗೆ 25,000 ರೂಪಾಯಿಯಷ್ಟು ಆಗಬಹುದು' ಅಂದರು. 'ಖರ್ಚು ಜಾಸ್ತಿ ಆಯ್ತು ಅನ್ನಿಸುತ್ತೆ ಡಾಕ್ಟರ್. ಸ್ವಲ್ಪ ಕಡಿಮೆ ಮಾಡಿ. ಇವರ ಹಳೇ ಕಿವಿಗಳಿಗೆ ಏನಾದರೂ ಎಕ್ಸ್‌ಚೇಂಜ್ ಅಂತ ಬೆಲೆ ಸಿಗುತ್ತೈ?' ಅಂತ ವಿಚಾರಿಸಿದಳು.

ಡಾಕ್ಟರ್ ನಗುತ್ತಾ, 'ಎಲ್ಲಿ ಸಾಧ್ಯಾಮ್ಮಾ? ಇವರಿಗಿರೋ ಕಿವಿಗಳನ್ನ ತೂಕದ ಮೇಲೂ ಮಾರೋದಕ್ಕೆ ಆಗಲ್ಲ. ಯಾರು ತೊಗೋತಾರೆ ಹೇಳಿ' ಅಂದರು. ನನ್ನ ಹೆಂಡತಿ ಸರಿ ಅಂದಳು.

'ನಿಮಗೆ ಚಾರ್ಜು ಜಾಸ್ತಿ ಆಯಿತು ಅಂತ ಅನ್ನಿಸಿದರೆ, ನೀವು ಮಾತ್ರ ಸ್ಪೆಷಲ್ ವಾರ್ಡ್‌ನಲ್ಲಿ ಇರಿ. ನಿಮ್ಮ ಯಜಮಾನರನ್ನು ಜನರಲ್ ವಾರ್ಡ್‌ಗೆ ಸೇರಿಸಬಹುದು' ಅಂತ ಸಲಹೆ ಕೊಟ್ಟರು. ಅದಕ್ಕೂ ನನ್ನ ಹೆಂಡತಿ ಒಪ್ಪಿಕೊಂಡಳು.

ಸರಿ, ನಮ್ಮ ಬಳಿ ಇದ್ದ ಒಂದು ಕಾರು, ಖಾಲಿ ಸೈಟ್ ಮಾರಿ, ದುಡ್ಡು ಕೂಡಿಸಿಕೊಂಡು, ಮಾರನೇ ವಾರವೇ ಅಡ್ಮಿಟ್ ಆದ್ವಿ. ಆಪರೇಷನ್ ಸಕ್ಸಸ್ ಆಯ್ತೇ ಅನ್ನೋ ಬಗ್ಗೆ ನಾನು ನಿಮಗೆ 2025ರಲ್ಲಿ ತಿಳಿಸ್ತೀನಿ.

❑

**ವಿಜ್ಞಾನ ವಿಶೇಷ**

# ವೈ(ಅ)ಜ್ಞಾನಿಕ ಸಂಶೋಧನೆಗಳು

**- ಆನಂದ**

- ಗುರುತ್ವಾಕರ್ಷಣ ಶಕ್ತಿ ಇಲ್ಲದಿದ್ದರೆ ಹೋಗಿದ್ದರೆ ಡಿಕಾಕ್ಷನ್ ಕಾಫಿ ಕುಡಿಯಲು ಸಾಧ್ಯವಾಗುತ್ತಲೇ ಇರಲಿಲ್ಲ ಎಂಬ ಸಂಗತಿ ನಿಮಗೆ ಗೊತ್ತೆ?

  ಏಕೆಂದರೆ ಬಿಸಿ ನೀರನ್ನು ಫಿಲ್ಟರ್‌ಗೆ ಹಾಕಿದ ಮೇಲೆ ಅದು ತೊಟ್ ತೊಟ್ ಎಂದು ಹನಿ ಹನಿಯಾಗಿ ಕೆಳಗೆ ಬೀಳಲು ಕಾರಣ ಗುರುತ್ವಾಕರ್ಷಣ ಶಕ್ತಿ. ಆ ಶಕ್ತಿಯೇ ಇಲ್ಲದೆ ಹೋಗಿದ್ದರೆ ನಾವೆಲ್ಲಾ ಇನ್‌ಸ್ಟಂಟ್ ಕಾಫಿಯಷ್ಟೇ ಕುಡಿಯಬೇಕಾಗಿ ಬರುತ್ತಿತ್ತು. ಅನೇಕ ಮನೆಗಳಲ್ಲಿ ಮಾಡುವಂತೆ ಪ್ರತಿದಿನ ಕಾಫಿ ಬೀಜ ಹುರಿದು, ಪುಡಿಮಾಡಿ, ಫಿಲ್ಟರ್‌ಗೆ ಹಾಕಿ ಬರುವ ಡಿಕಾಕ್ಷನ್ ಅನ್ನು ಆಗಷ್ಟೇ ಕಾಯಿಸಿದ ಹಾಲಿಗೆ ಬೆರೆಸಿ ಫ್ರೆಶ್ ಕಾಫಿ ಕುಡಿಯುವ ಅಭ್ಯಾಸವೇ ಇರುತ್ತಿರಲಿಲ್ಲ. ಅದರಂತೆ ಅನೇಕ ರಸ್ತೆಬದಿ ಹೊಟೇಲುಗಳಲ್ಲಿ ಮೀಟರ್ ಕಾಫಿ ಅಂದರೆ ಹೀಗೆ ಹದವಾಗಿ ಬೆರೆಸಿದ ಕಾಫಿಯನ್ನು ಒಂದು ಪಾತ್ರೆಯಿಂದ ಇನ್ನೊಂದು ಪಾತ್ರೆಗೆ ಮೇಲಿಂದ ಕೆಳಗೆ ಎತ್ತಿ ಸುರಿದು ಒಂದು ಮೀಟರ್ ಕಾಫಿ ಕೊಡುತ್ತಿದ್ದಾನೆನೋ ಎಂಬ ಭ್ರಮೆ ಮೂಡಿಸುವ ಅದ್ಭುತ ದೃಶ್ಯ ಸಹ ನೋಡಲು ಸಿಗುತ್ತಿರಲಿಲ್ಲ. ಗುರುತ್ವಾಕರ್ಷಣ ಶಕ್ತಿಗೂ ಕಾಫಿಗೂ ಇರುವ ನಂಟು ನಿಮಗೆ ಈ ಮೊದಲು ಗೊತ್ತಿತ್ತೆ?

★★★

- ಶಬ್ದ ತರಂಗವನ್ನು ವಿದ್ಯುತ್ ತರಂಗವನ್ನಾಗಿ ಮಾರ್ಪಡಿಸಲು ಸಾಧ್ಯವಾಗಿದ್ದಕ್ಕೇ ಫೋನ್ ಮೂಲಕ ಮಾತನಾಡಲು ಸಾಧ್ಯವಾಯಿತು. ಅಂದರೆ ಶಬ್ದ ತರಂಗವನ್ನು ವಿದ್ಯುತ್ ತರಂಗವಾಗಿ ಬದಲಾಯಿಸಬಹುದು. ಮೊಬೈಲ್ ಫೋನ್‌ಗಳನ್ನು ಚಾರ್ಜ್ ಮಾಡಲು ಇದೇ ಸೂತ್ರವನ್ನು ಬಳಸಬಾರದೇಕೆ? ಅಂದರೆ ನಾವು ಮಾತನಾಡುವ ಶಬ್ದಗಳು ವಿದ್ಯುತ್ ಆಗಿ ಮಾರ್ಪಾಡಾಗಿ ಮೊಬೈಲ್ ಬ್ಯಾಟರಿಯನ್ನು ನಿರಂತರವಾಗಿ ಚಾರ್ಜ್ ಮಾಡುತ್ತಿರುತ್ತದೆ. ಹಾಗಾದಲ್ಲಿ ಚಾರ್ಜ್ ಮಾಡುವಿಕೆ ಎಷ್ಟು ಸುಲಭವಾಗುತ್ತದೆ ಗಮನಿಸಿ. ಆದರೆ ಕೆಲವರು 24 ಬೈ 7 ಅಲ್ಲದಿದ್ದರೂ ಮಾತನಾಡುತ್ತಲೇ ಇರುವುದರಿಂದ ಬ್ಯಾಟರಿ ಓವರ್ ಚಾರ್ಜ್ ಆಗಿ ಸಿಡಿಯಲೂಬಹುದು. ಆದುದರಿಂದಲೇ ಈ ಸೌಲಭ್ಯ ಸಿಕ್ಕಿಲ್ಲ ಎನ್ನುವುದು ಕೇವಲ ಕುಹಕ.

★★★

- ವಿಜ್ಞಾನಿಗಳು ಸೇಲ್ಸ್ ಮಂದಿಯಷ್ಟು ವರಮಾನ ಗಳಿಸಲು ಅಸಾಧ್ಯ ಎಂಬ ಪ್ರಮೇಯವಿದೆ.

  **ಅದಕ್ಕೆ ಪುರಾವೆ:**

  ಪವರ್ = ಕೆಲಸ/ಸಮಯ

  ನಾಲೆಡ್ಜ್ ಈಸ್ ಪವರ್ ಮತ್ತು ಟೈಂ ಈಸ್ ಮನಿ – ಇದು ಗೊತ್ತಿರಬಹುದು ನಿಮಗೆ.

ಈ ಸೂತ್ರದಂತೆ

ನಾಲೆಡ್ಜ್ = ಕೆಲಸ/ವರಮಾನ

ಆದುದರಿಂದ ವರಮಾನ = ಕೆಲಸ/ನಾಲೆಡ್ಜ್

ಸೊ, ಜ್ಞಾನ ಕಮ್ಮಿ ಇದ್ದಷ್ಟೂ ವರಮಾನ ಜಾಸ್ತಿ.

ಅರ್ಥವಾಯಿತೆ? ಅಥವಾ, ಆದುದರಿಂದಲೇ ನೀವು ವಿಜ್ಞಾನಿಗಳಾಗಲಿಲ್ಲವೆ?

★★★

- ದೆಹಲಿಯಿಂದ ಬಂದವರು ಬೆಂಗಳೂರಿಗೆ ತಂಪಾದ ವಾತಾವರಣಕ್ಕೆ ಮಾರುಹೋಗಿ ಇದು ಸ್ವರ್ಗ ಎಂದು ಭ್ರಮಿಸುತ್ತಾರೆ. ಆದರೆ ಸ್ವರ್ಗದ ಟೆಂಪರೇಚರ್ ಎಷ್ಟು?

  ಒಂದು ಲೆಕ್ಕಾಚಾರದ ಪ್ರಕಾರ 525 ಡಿಗ್ರೀ.

  ಹೇಗೆ ಗೊತ್ತಾಯಿತು ಎಂದಿರಾ?

  **ಬೈಬಲ್‌ನಲ್ಲಿ ಒಂದು ವಾಕ್ಯ ಇದೆ:** *ಇಷ್ಟೇ ಅಲ್ಲದೆ ಕರ್ತನು ತನ್ನ ಜನರ ವ್ರಣವನ್ನು ಕಟ್ಟಿ ಅವರ ಪೆಟ್ಟಿನ ಗಾಯವನ್ನು ವಾಸಿಮಾಡುವ ದಿನದಲ್ಲಿ ಚಂದ್ರನ ಬೆಳಕು ಸೂರ್ಯನ ಬೆಳಕಿನ ಹಾಗೆಯೂ ಮತ್ತು ಸೂರ್ಯನ ಬೆಳಕು ಏಳರಷ್ಟು ಹೆಚ್ಚಾಗಿ ಏಳು ದಿನಗಳ ಬೆಳಕಿನಂತಾಗುವುದು.*

  ಇದರ ಆಧಾರದ ಮೇಲೆ ಸ್ಟೆಫಾನ್-ಬೋಲ್ಟ್ಜ್‌ಮನ್‌ನ ರೇಡಿಯಷನ್‌ಗೆ ಸಂಬಂಧಿಸಿದ 4ನೇ ನಿಯಮ ಅನುಸರಿಸಿ ಲೆಕ್ಕಾಚಾರ ಮಾಡಿದರೆ (ಇದು ನಿಮಗೆ ಹೇಗೂ ಅರ್ಥವಾಗುವುದಿಲ್ಲವಾದ್ದರಿಂದ ಅದನ್ನು ಇಲ್ಲಿ ಕೊಟ್ಟಿಲ್ಲ) ಸ್ವರ್ಗದ ತಾಪಮಾನ 525 ಡಿಗ್ರೀ.

  ಈಗ ಹೇಳಿ ಬೆಂಗಳೂರೇ ವಾಸಿ ಅಲ್ಲವೆ?

★★★

- ಮಲಗುವಾಗ ದಿಂಬು ಉಪಯೋಗಿಸುತ್ತೀರಲ್ಲವೆ?

  ದಿಂಬು ಯಾವುದಾದರೂ ಇರಲಿ ಅದನ್ನು ಹೇಗೆ ಇರಿಸಿಕೊಂಡು ಮಲಗಬೇಕು ಎಂಬುದರ ಬಗ್ಗೆ ಸಂಶೋಧನೆಗಳು ಮಾಡಲಾಗಿವೆ. ಬಲಗಡೆ ತಿರುಗಿ ಮಲಗುವುದಾದರೆ ಒಂದು ಎತ್ತರ, ಎಡಗಡೆ ತಿರುಗಿ ಮಲಗುವುದಾದರೆ ಒಂದು ಹೈಟ್, ಬೆನ್ನಿನ ಮೇಲೆ ಮಲಗುವುದಾದರೆ ಇನ್ನೊಂದು ಎತ್ತರ ಮತ್ತು ಹೊಟ್ಟೆಯ ಮೇಲೆ ಮಲಗುವಾಗ ಇನ್ನೊಂದು ಹೀಗೆ... ಆದರೆ ಬೆಸ್ಟ ದಿಂಬು ಯಾವುದು? ಆತ್ಮಸಾಕ್ಷಿ ಬ್ರಾಂಡ್ ಎನ್ನುತ್ತಾರೆ ಕೆಲವು ಶ್ರೀಶ್ರೀ ಬ್ರಾಂಡ್ ಸಂಶೋಧಕರು. ಆದರೆ ಇದನ್ನು ತಯಾರಿಸಲಾಗದು. ನೀವು ಮಂಚ ಕೊಳ್ಳಬಹುದು ಆದರೆ ನಿದ್ದೆ ಕೊಳ್ಳಲಾಗದು ಎಂಬಂತೆ ಆ 'ಆತ್ಮಸಾಕ್ಷಿ' ದಿಂಬನ್ನು ಸಹ ಪರ್ಚೇಸ್ ಮಾಡಲಾಗದು.

❑

**ವಿಜ್ಞಾನ ವಿಶೇಷ**

# ವಿಜ್ಞಾನಿಗಳ ಬದುಕಿನಲ್ಲಿ ಹಾಸ್ಯ ರಸಾಯನ

**- ಬೇಲೂರು ರಾಮಮೂರ್ತಿ**

ವಿಜ್ಞಾನಿಗಳು ತಮ್ಮ ಅನ್ವೇಷಣೆಯಲ್ಲಿ ತಮ್ಮನ್ನು ತಾವು ನೂರಕ್ಕೆ ನೂರರಷ್ಟು ತೊಡಗಿಸಿಕೊಂಡಿರುತ್ತಾರೆ. ಹೀಗಾಗಿ ಅವರಿಗೆ ದಿನನಿತ್ಯದ ಆಗುಹೋಗುಗಳಲ್ಲಿ ಅಷ್ಟೊಂದು ಲಕ್ಷ್ಯ ಇರುವುದಿಲ್ಲ. ಇದರಿಂದ ಅವರ ಬದುಕಿನಲ್ಲಿ ನಡೆಯುವ ಸಣ್ಣ ಸಣ್ಣ ಘಟನೆಗಳು ಅವು ನಡೆದ ನಂತರವೇ ತಿಳಿದು ಸ್ವತಃ ಅವರೇ ಪೆಚ್ಚಾಗುತ್ತಾರೆ. ಈ ಕೆಳಗಿನ ಕೆಲವು ಸಂಗತಿಗಳನ್ನು ಓದಿದಾಗ ಆ ಸಂದರ್ಭದ ವಿಜ್ಞಾನಿಗಳನ್ನು ನೆನೆಸಿಕೊಂಡು ನಮಗೂ ನಗೆ ಬರದಿರದು.

**ಸಂಗತಿ 1 :** ಒಬ್ಬ ಪ್ರಾಣಿಶಾಸ್ತ್ರದ ಸಂಶೋಧಕ ಒಂದು ದಿನ ಇದ್ದಕ್ಕಿದ್ದಂತೆ ಸರಿರಾತ್ರಿ ಎದ್ದ. ಲ್ಯಾಬೋರೇಟರಿಗೆ ಹೋಗಿ ಒಂದು ಕಪ್ಪೆಯನ್ನು ಹೊರತೆಗೆದ. ಅದನ್ನು ಮೇಜಿನ ಮೇಲಿಟ್ಟ, ಹಾಪ್, ಹಾಪ್ ಎಂದ. ಕಪ್ಪೆ ನಾಲ್ಕಾರು ಬಾರಿ ಕುಪ್ಪಳಿಸಿತು. ಆಗ ಅವನು ಷರಾ ಬರೆದ. ಕಪ್ಪೆಗಳು ತಮ್ಮ ನಾಲ್ಕು ಕಾಲುಗಳಿಂದ ಎರಡೆರಡು ಅಡಿ ಕುಪ್ಪಳಿಸಿದವು. ನಂತರ ಒಂದು ಕಾಲು ಕಿತ್ತ. ಹಾಪ್ ಹಾಪ್ ಎಂದ. ನಂತರ ಷರಾ ಬರೆದ. ಮೂರು ಕಾಲಿನ ಕಪ್ಪೆಗಳು ಒಂದೂವರೆ ಅಡಿ ಜಂಪ್ ಮಾಡುತ್ತವೆ. ಇನ್ನೊಂದು ಕಾಲು ಕಿತ್ತ. ಕಪ್ಪೆ ಒಂದು ಅಡಿ ಜಿಗಿಯಿತು. ಎರಡು ಕಾಲಿನ ಕಪ್ಪೆಗಳು ಒಂದು ಅಡಿ ಜಂಪ್ ಮಾಡುತ್ತವೆ. ಮೂರನೆಯ ಕಾಲು ಕಿತ್ತ. ಕಪ್ಪೆ ಅರ್ಧ ಅಡಿ ಜಿಗಿಯಿತು. ಒಂದೇ ಕಾಲಿನ ಕಪ್ಪೆ ಅರ್ಧ ಅಡಿ ಮಾತ್ರ ಜಿಗಿಯುತ್ತದೆ ಅಂತ ಷರಾ ಬರೆದ. ಈಗ ಉಳಿದ ಇನ್ನೊಂದು ಕಾಲನ್ನು ಕಿತ್ತು ಹಾಪ್ ಅಂದ. ಕಪ್ಪೆ ಅಲ್ಲಾಡಲಿಲ್ಲ. ಆಗ ಷರಾ ಬರೆದ. ಕಪ್ಪೆಯ ಕಾಲುಗಳನ್ನು ಕಿತ್ತರೆ ಅವುಗಳಿಗೆ ಕಿವಿ ಕೇಳಿಸುವುದಿಲ್ಲ.

**ಸಂಗತಿ 2 :** ಒಂದು ಸುಂದರವಾದ ಗಂಡು ಕಪ್ಪೆ ಅಲ್ಲಲ್ಲಿ ಕುಪ್ಪಳಿಸಿಕೊಂಡು ಹಾಯಾಗಿತ್ತು. ಅದಕ್ಕೆ ಒಂದು ದಿನ ಅಶರೀರ ವಾಣಿಯೊಂದು ಕೇಳಿಸಿತು. ಒಂದು ಸುಂದರ ಹುಡುಗಿ ಸಧ್ಯದಲ್ಲಿಯೇ ನಿನ್ನನ್ನು ಭೇಟಿಮಾಡಲಿದ್ದಾಳೆ.... ಕಪ್ಪೆಗೆ ಖುಷಿಯಾಯಿತು. ಹಾಗಾದರೆ ನಾನು ಅವಳನ್ನ ಬಾರ್‌ನಲ್ಲಿಯೇ, ಸಿನಿಮಾದಲ್ಲಿಯೇ, ಮಾಲ್‌ನಲ್ಲಿಯೇ ಭೇಟಿ ಮಾಡಬಹುದೇ ಎಂದು ಕೇಳಿತು. ಅದಕ್ಕೆ ಮತ್ತೆ ಅಶರೀರವಾಣಿ ಮೊಳಗಿತು. ''ನೀನು ಎಲ್ಲಿಯೂ ಹೋಗಬೇಕಾಗಿಲ್ಲ, ಅವಳೇ ಬಂದು ನಿನ್ನನ್ನು ಕರೆದುಕೊಂಡು ಅವಳ ಬಯಾಲಜಿ ಕ್ಲಾಸಿನ ಪ್ರಾಕ್ಟಿಕಲ್ ಸೆಷನ್‌ನಲ್ಲಿ ಭೇಟಿ ಮಾಡುತ್ತಾಳೆ'' ಎಂದಿತು ಅಶರೀರವಾಣಿ.

**ಸಂಗತಿ 3 :** ನಿಮಗೆಲ್ಲಾ ಗೊತ್ತಿರುವ ಹಾಗೆ ಸರ್ ಐಸೈಕ್ ನ್ಯೂಟನ್ ಒಬ್ಬ ಶ್ರೇಷ್ಠ ವಿಜ್ಞಾನಿ. ವಿಜ್ಞಾನಕ್ಕೆ ತನ್ನನ್ನು ತಾನು ಸಮರ್ಪಿಸಿಕೊಂಡು ಸದಾ ಹೊಸ ಆವಿಷ್ಕಾರಗಳನ್ನು ಮಾಡುತ್ತಿದ್ದ. ಮನೆಯಲ್ಲಿಯೂ ಒಂದು ಲ್ಯಾಬೋರಟೆರಿ ಇತ್ತು. ನ್ಯೂಟನ್

ಅಲ್ಲಿದ್ದಾಗ ಯಾರೂ ಅವನನ್ನು ತೊಂದರೆ ಮಾಡುತ್ತಿರಲಿಲ್ಲ. ಅವನ ಮನೆಯಲ್ಲಿ ಮೂರು ಬೆಕ್ಕುಗಳಿದ್ದವು. ಅವು ಎಲ್ಲೆಂದರಲ್ಲಿ ಓಡಾಡಿಕೊಂಡು ಇರುತ್ತಿದ್ದವು. ನ್ಯೂಟನ್ ಸಂಶೋಧನೆಯಲ್ಲಿರುವಾಗ ಬೆಕ್ಕುಗಳು ಬಾಗಿಲು ಕೆರೆಯುತ್ತಿದ್ದವು. ನ್ಯೂಟನ್ ಬಾಗಿಲು ತೆಗೆಯಬೇಕಾಗಿತ್ತು. ಸ್ವಲ್ಪ ಹೊತ್ತಾದಮೇಲೆ ಅವು ಆಚೆ ಹೋಗುತ್ತಿದ್ದವು. ನ್ಯೂಟನ್ ಬಾಗಿಲು ಹಾಕುತ್ತಿದ್ದ. ಮತ್ತೆ ಬಾಗಿಲು ಕೆರೆಯುತ್ತಿದ್ದವು. ಇದರಿಂದ ಅವನ ಪರಿಶೋಧನೆಗೆ ಮತ್ತು ಏಕಾಗ್ರತೆಗೆ ಭಂಗ ಬರುತ್ತಿತ್ತು. ಅದಕ್ಕೆ ನ್ಯೂಟನ್ ಬಡಗಿಯನ್ನು ಕರೆಸಿ, ಪುಟ್ಟದು, ಚಿಕ್ಕದು, ದೊಡ್ಡದು ಅಂತ ಮೂರು ತೂತು ಕೊರೆಯಿಸಿದ. ಪುಟ್ಟ ಬೆಕ್ಕು, ಚಿಕ್ಕ ಬೆಕ್ಕು, ದೊಡ್ಡ ಬೆಕ್ಕು ಈ ರಂಧ್ರಗಳ ಮೂಲಕ ಓಡಾಡಿಕೊಂಡಿರಲಿ ಅಂತ. ನ್ಯೂಟನ್ ಉಪಾಯ ಫಲಿಸಿತು. ಬೆಕ್ಕುಗಳ ತಾಪತ್ರಯ ತಪ್ಪಿತ್ತು. ಒಂದೆರಡು ದಿನಗಳಲ್ಲಿ ನ್ಯೂಟನ್ ಭೇಟಿಮಾಡಲು ಬಂದ ಅವನ ಸ್ನೇಹಿತರು ಬಾಗಿಲ ಮೇಲಿನ ರಂಧ್ರಗಳನ್ನು ಕಂಡು ಇದೇನು ಅಂತ ಕೇಳಿದರೆ ನ್ಯೂಟನ್ ಬೆಕ್ಕುಗಳ ಉಪಟಳ ವಿವರಿಸಿದ. ಆಗ ಸ್ನೇಹಿತರು ನಕ್ಕು ಅಲ್ಲ ನ್ಯೂಟನ್ ದೊಡ್ಡ ರಂಧ್ರ ಒಂದೇ ಸಾಕಾಗಿತ್ತು. ಅದರಲ್ಲೇ ಮೂರು ಬೆಕ್ಕುಗಳೂ ಓಡಾಡಿಕೊಂಡಿರುತ್ತಿದ್ದವು. ನೀನು ರಂಧ್ರ ಕೊರೆಸಿರೋ ಹಾಗೆ ಬೆಕ್ಕುಗಳಿಗೆ ನನ್ನ ರಂಧ್ರ ಇದು ಅಂತ ಏನಾದರೂ ತಿಳಿಯುತ್ತದೆಯೇ? ಅಂತ ಪ್ರಶ್ನಿಸಿದಾಗ ನ್ಯೂಟನ್ ಪೆಚ್ಚಾದ ಮತ್ತು ತನ್ನ ಪೆಚ್ಚುತನಕ್ಕೆ ತಾನೇ ನಕ್ಕ.

ವಿಜ್ಞಾನಿಯೇ ಆಗಲಿ, ಪ್ರಾಧ್ಯಾಪಕನೇ ಆಗಲಿ, ಸಂಶೋಧಕನೇ ಆಗಲಿ ಹಾಸ್ಯ ಯಾರನ್ನೂ ಬಿಡುವುದಿಲ್ಲ. ಹಾಸ್ಯ ನಮ್ಮನ್ನ ಆವರಿಸಿಕೊಂಡು ನಾವು ಮನಬಿಚ್ಚಿ ನಕ್ಕು ಮನ ಹಗುರಮಾಡಿಕೊಳ್ಳುವುದನ್ನು ಬಿಡಬಾರದು ಅಷ್ಟೇ.

❑

## ಐಟಿ ಭಾಷೆಯಲ್ಲಿ

**ಬ್ರಹ್ಮ:** ಸಿಸ್ಟಂ ಇನ್ಸ್ಟಾಲರ್ **ವಿಷ್ಣು:** ಸಿಸ್ಟಂ ಆಪರೇಟರ್

**ಶಿವ:** ಸಿಸ್ಟಂ ಪ್ರೊಗ್ರಾಮರ್ **ನಾರದ:** ಡಾಟ ಟ್ರಾನ್ಸ್ಮಿಟರ್

**ಯಮ:** ಡಿಲೀಟರ್ **ಅಪ್ಸರ ಮತ್ತು ರಂಭ:** ವೈರಸ್

**ಹನುಮಾನ್:** ಇಮೇಲ್ **ಗಣಪತಿ:** ಆ್ಯಂಟಿ ವೈರಸ್

**ಚಿತ್ರಗುಪ್ತ:** ಹಾರ್ಡ್ ಡಿಸ್ಕ್ **ಸರಸ್ವತಿ:** ಗೂಗಲ್

**ಪಾರ್ವತಿ:** ಮದರ್ ಬೋರ್ಡ್ **ಲಕ್ಷ್ಮಿ:** ಎಟಿಎಂ

**ವಿಜ್ಞಾನ ವಿಶೇಷ**

# 'ಪ್ರಾಕ್ಟಿಕಲ್' ಪರದಾಟ

**- ರೇಖಾ ಹೆಗಡೆ ಬಾಳೇಸರ**

ವಿಜ್ಞಾನ ಎಂದೊಡನೆ ಮನದಲ್ಲಿ ಮೂಡುವ ಮೊದಲ ಭಾವ ಕೌತುಕ, ಬೆರಗು. ಈ ವಿಷಯವನ್ನು ಕಲಿಯುವ, ಅರಿಯುವ, ಬಳಸುವ ಪ್ರಕ್ರಿಯೆಯಲ್ಲಿ 'ಅದ್ಭುತ' ರಸದ್ದೇ ಅಧಿಪತ್ಯ. ಇನ್ನುಳಿದಂತೆ ಸಂದರ್ಭಕ್ಕೆ ತಕ್ಕಂತೆ ಭಯ, ವೀರ, ರೌದ್ರ, ಭೀಭತ್ಸ ರಸಗಳು... ಕೆಲವೊಂದು ಪ್ರಯೋಗಗಳ ಬಗ್ಗೆ ಕೇಳುವಾಗ, ಓದುವಾಗ ಈ ಎಲ್ಲ ರಸಗಳೂ ಮನದಲ್ಲಿ ಹಾದುಹೋಗುವುದುಂಟು.

**ವಿಜ್ಞಾನದ ಹಿಂದೆ ಬಿದ್ದವರ ಒದ್ದಾಟ...**

ಇದು ಬಿಟ್ಟರೆ ಪ್ರಯೋಗಾಲಯದ ಗಾಜಿನ ಬಾಟಲಿಗಳಲ್ಲಿ ಸುಡು ಸುಡುವ ಆಮ್ಲರಸಗಳು, ಕಟುರಸಗಳು.... ವಿಜ್ಞಾನದ ಉಡುಗೊರೆಯಾದ ದ್ರಾಕ್ಷಾರಸಾದಿ ಪಾನೀಯಗಳು... ಇವೆಲ್ಲವುಗಳ ಮಧ್ಯೆ ಹಾಸ್ಯರಸ ಹುಡುಕಬೇಕೆಂದರೆ ತೀರಾ ಸೂಕ್ಷ್ಮದರ್ಶಕ, ದೂರದರ್ಶಕ ಹಿಡಿದೇನೂ ಹೋಗಬೇಕೆಂದಿಲ್ಲ, ಕೊಂಚ ವಿಜ್ಞಾನದ ಹಿಂದೆ ಬಿದ್ದವರ ಒದ್ದಾಟಗಳನ್ನು ಗಮನಿಸಿದರೂ ಆಯ್ತು. ಅವರು ವಿಜ್ಞಾನಿಗಳೇ ಇರಬಹುದು, ವಿದ್ಯಾರ್ಥಿಗಳೇ ಇರಬಹುದು.

ನನ್ನ ಶಾಲಾದಿನಗಳಲ್ಲಿ ವಿಜ್ಞಾನದ ಥಿಯರಿ ತರಗತಿಗಳು ಸಹಜ ಕುತೂಹಲ ಮೂಡಿಸಿ, ತಣಿಸುತ್ತಿದ್ದರೆ, ಅಸಲಿ ಮಜ ತರುತ್ತಿದ್ದವು ಪ್ರಾಕ್ಟಿಕಲ್ ಕ್ಲಾಸುಗಳು. ಅದರಲ್ಲೂ ನಿರ್ಜೀವ ಪರಿಕರಗಳ ಬಳಸಿ ಒಣ ಒಣ ವಿಷಯ ಬೋಧಿಸುತ್ತಿದ್ದ ಭೌತಶಾಸ್ತ್ರ ಪ್ರಾಕ್ಟಿಕಲ್ಸ್, ಲ್ಯಾಬಿಗಿಂತಲೂ, ಸದಾ ಒಂದು ನಮೂನೆ ಹುಳಿ ವಾಸನೆ ಸೂಸುವ, ನಾಸಿಕದೊಳನುಗ್ಗಿ ನೆತ್ತಿ ಮುಟ್ಟುವ ಘಾಟು ವಾಸನೆ ಬೀರುವ, ಯಾವ್ಯಾವುದೋ ರಾಸಾಯನಿಕ ಬಿದ್ದು ಕತ್ತಿಹೋಗಿದ್ದ ಕರಿಕರಿ ಮೇಜುಗಳ ರಸಾಯನಶಾಸ್ತ್ರದ ಪ್ರಯೋಗಾಲಯಕ್ಕಿಂತಲೂ ಜೀವಂತಿಕೆಯ ಕಳೆಯಿರುತ್ತಿದ್ದ ಜೀವಶಾಸ್ತ್ರದ ತರಗತಿಗಳು, ಪ್ರಾಕ್ಟಿಕಲ್ ಕ್ಲಾಸುಗಳೆಂದರೆ ಪ್ರೀತಿ ನನಗೆ. ಅಲ್ಲಿ ಅಯೋಡಿನ್ ದ್ರಾವಣ, ಗ್ಲುಕೋಸು, ಪಿಷ್ಟಗಳ ಜೊತೆಗೆ ಹಾಸ್ಯರಸವೂ ಹರಿಯುತ್ತಿತ್ತು. ಪೆಟ್ರಿಡಿಶ್‌ಗಳಲ್ಲಿ ನಗೆಕಲ್ಚರ್ ಬೆಳೆಯುತ್ತಿತ್ತು.

ನಾನು ರೆಸಿಡೆನ್ಸಿಯಲ್ ಶಾಲೆಯಲ್ಲಿ ಓದುತ್ತಿದ್ದಾಗ ಅಚಾನಕ್ ಆಗಿ ಡಿಸ್ಸೆಕ್ಷನ್ ಕ್ಲಾಸ್ ನಡೆಯಲಿದೆ ಎಂದರೆ ಆವತ್ತು/ಂದಿನ ದಿನ ಸ್ಟೋರುರೂಮಿನಲ್ಲಿ ಇಲಿ ಸಿಕ್ಕಿಬಿದ್ದಿತ್ತು ಎಂದರ್ಥ. ಒಮ್ಮೆಯಂತೂ ಇಡೀ ಸ್ಟೋರುರೂಮನ್ನು ಖಾಲಿ ಮಾಡಿ ಇಂಚಿಂಚೂ ಚೊಕ್ಕಟ ಮಾಡಿದರು. ಆವತ್ತು ಸುಮಾರು 25 ಇಲಿ ಸಿಕ್ಕಿಬಿದ್ದಿದ್ದವು. ಆದರೆ ಅವುಗಳನ್ನು ಹಿಡಿಯುವ ಅಬ್ಬರದಲ್ಲಿ ಪೆಟ್ಟುತಾಗಿ ಅವು ಸತ್ತುಹೋಗಿದ್ದರಿಂದ ಅವನ್ನೆಲ್ಲ ಒಂದು ಕವರ್‌ನಲ್ಲಿ ಇಟ್ಟು ಫ್ರೀಜರಿನಲ್ಲಿ ಇಟ್ಟಿದ್ದರು. ಮರುದಿನ ತುರ್ತು ಪ್ರಾಕ್ಟಿಕಲ್ ತರಗತಿ ನಮಗೆ. ಮಾಮೂಲಿಯಾಗಿ ಖರೀದಿಸಿ ತರುವ ಬಿಳಿ ಇಲಿಯಾದರೆ ಇಡೀ ತರಗತಿಗೆ ಒಂದು, ಅದನ್ನೇ ಶಿಕ್ಷಕರು ಕತ್ತರಿಸಿದರೆ ನಾವೆಲ್ಲ ನೋಡಬೇಕು. ಅದೊಂದೇ ಇಲಿಯನ್ನು ಬಿಡಿಬಿಡಿಯಾಗಿ ಬಿಡಿಸಿ ಜೀರ್ಣಾಂಗವ್ಯೂಹ, ರಕ್ತಪರಿಚಲನವ್ಯೂಹ, ಪುನರುತ್ಪತ್ತಿವ್ಯೂಹ ಇತ್ಯಾದಿ ಪರಿಶೀಲಿಸಬೇಕು. ಆವತ್ತು ದಂಢಿಯಾಗಿ

ಬಿಟ್ಟಿ ಇಲಿ ಸಿಕ್ಕಿದ್ದೇ ಒಬ್ಬೊಬ್ಬರಿಗೆ ಮೂರು ನಾಲ್ಕು ಇಲಿ ಕತ್ತರಿಸೋ ಭಾಗ್ಯ. ಫ್ರೀಜರಿನಲ್ಲಿಟ್ಟು ಸೆಟಗೊಂಡಿದ್ದ ಅಷ್ಟೊಂದು ಇಲಿಗಳನ್ನು ಒಟ್ಟಿಗೆ ನೋಡಿಯೇ ಹೇಸಿಗೊಂಡಿದ್ದ ನನ್ನ ಸ್ನೇಹಿತೆಯೊಬ್ಬಳು ಸ್ಕಾಲಪೆಲ್, ಫಾರ್ಸೆಪ್ಸ್‌ಗಳನ್ನು ಹಿಡಿಯುತ್ತಿದ್ದಂತೆಯೇ ತಲೆಸುತ್ತಿ ಬಿದ್ದುಬಿಟ್ಟಿದ್ದಳು. (ಈಗವಳು ಯಶಸ್ವಿ ವೈದ್ಯೆ ಅನ್ನೋದು ಬೇರೆ ವಿಷಯ.) ಸರಿ, ನಂನಮ್ಮ ಡಿಸ್ಸೆಕ್ಷನ್ ಪರಿಕರಗಳನ್ನು ಎತ್ತಿಕೊಂಡು ನಾವೆಲ್ಲ ಯುದ್ಧಸನ್ನದ್ಧರಾದೆವು. ಇಲಿ ಆಗಲೇ ಸತ್ತುಹೋಗಿತ್ತು. ನಾವು ಸೆಣಸಬೇಕಿದ್ದುದು ನಮ್ಮ ಹೆದರಿಕೆ, ಹೇಸಿಗೆ ಇತ್ಯಾದಿ ಭಾವಗಳೊಂದಿಗೆ. ಆವತ್ತು ಸಾವಧಾನವಾಗಿ ನಾಲ್ಕ್ನಾಲ್ಕು ಇಲಿ ಕತ್ತರಿಸಿ ಕಲಿಯುವ ಹೊತ್ತಿಗೆ ಒಂದಿಡೀ ವರ್ಷ ಕಲಿಯುವಷ್ಟು ಕಲಿತುಬಿಟ್ಟಿದ್ದೆವು.

ಇನ್ನೊಮ್ಮೆ ಕಾಲೇಜಿನಲ್ಲಿ ಪ್ರಾಣಿಶಾಸ್ತ್ರ ಪ್ರಯೋಗ ತರಗತಿ. ಓತಿಕ್ಯಾತದ ಡಿಸ್ಸೆಕ್ಷನ್ ಮಾಡಬೇಕಿತ್ತು. ಚುರುಕಿನ ಜೀವಿಗಳಾದ ಅವನ್ನು ಹಿಡಿಯುವುದು ಸುಲಭವಲ್ಲ. ಪ್ರಯೋಗಾಲಯದ ಅಟೆಂಡರ್ ಕಷ್ಟಪಟ್ಟು ಎಲ್ಲಿಂದಲೋ ಒಂದು ಓತಿಯನ್ನು ಹಿಡಿದು ಬಾಟಲಿಯಲ್ಲಿ ತುಂಬಿಕೊಂಡು ಬಂದಿದ್ದ. ಕ್ಲಾಸಿನಲ್ಲಿ ಎಲ್ಲ ವಿದ್ಯಾರ್ಥಿಗಳೂ ತಂತಮ್ಮ ಹತಾರುಗಳೊಂದಿಗೆ ರೆಡಿ ಇದ್ದರು. ಮೇಡಮ್ಮು ಸೊಂಟಕ್ಕೆ ಸೆರಗು ಸಿಕ್ಕಿಸಿಕೊಂಡು ಸಮರದ ಸಾರಥ್ಯ ವಹಿಸಲು ಸಿದ್ಧವಾಗಿದ್ದರು. ಅಟೆಂಡರ್ ಬಾಟಲಿ ಮುಚ್ಚಳ ನಿಧಾನಕ್ಕೆ ತೆರೆದ. ಮೊದಲೇ ಬಾಟಲಿಯೊಳಗೆ ಬಂಧಿಯಾಗಿದ್ದ ಜೀವ. ಸುತ್ತ ಗುಂಪುಗಟ್ಟಿ ನಿಂತಿದ್ದ ಹದಿನೈದಿಪ್ಪತ್ತು ಜನರನ್ನು ಕಂಡು ಬೆದರಿ ಬಾಟಲಿ ಬಾಯಿಂದ ಚಂಗನೆ ನೆಗೆಯಿತು. ವಿದ್ಯಾರ್ಥಿಗಳೆಲ್ಲ ಕಕ್ಕಾಬಿಕ್ಕಿಯಾಗಿ 'ಹೋ...' ಎಂದು ಕಿರುಚಲಾರಂಭಿಸಿದರೆ ಅಟೆಂಡರ್ ಹುಯಿಲೆಬ್ಬಿಸುತ್ತ ನಿಂತಲ್ಲೇ ನರ್ತಿಸಲಾರಂಭಿಸಿದ. ನೆಲಕ್ಕೆ ಜಿಗಿದ ಓತಿ ಸೀದಾ ಆತನ ಪ್ಯಾಂಟಿನೊಳಗೆ ತೂರಿಕೊಂಡಿತ್ತು. ಎಲ್ಲಿ, ಏನು ಗೊತ್ತಾಗುವುದರೊಳಗೆ ಅರೆ ಕ್ಷಣದಲ್ಲಿ ಇಡೀ ಕ್ಲಾಸು ಚೆಲ್ಲಾಪಿಲ್ಲಿಯಾಗಿತ್ತು. ಮುಂದೆ ಇಡೀ ವರ್ಷ ಆತ ಓತಿಕ್ಯಾತ ಹಿಡಿಯುವ ಸಾಹಸಕ್ಕೆ ಹೋಗಲಿಲ್ಲ, ಮೇಡಮ್ಮು ಬರೀ ಸ್ಲೈಡುಗಳಲ್ಲೇ ಓತಿಕ್ಯಾತದ ಅಂತರ್‌ದರ್ಶನ ಮಾಡಿ ಮುಗಿಸಿದರು. ಈ ಹಿಂದೆ ಹೇಳಿದ ವೀರರಸ, ಭಯ, ಭೀಭತ್ಸ, ಕರುಣಾರಸಗಳೆಲ್ಲ ಅಲ್ಲಿ ಒಂದೇ ಬಾರಿಗೆ ಸಮ್ಮಿಳಿತಗೊಂಡಿದ್ದವು. ಶಾಂತರಸ ಹರಿದಿದ್ದು ಬಹುಶ ರೇಷ್ಮೆಹುಳದ ಡಿಸ್ಸೆಕ್ಷನ್ ಮಾಡಿದ ದಿನ ಮಾತ್ರವಿರಬೇಕು.

ಪ್ರಯೋಗಾಲಯದ ನಗೆ ಪ್ರಸಂಗಗಳ ಪಟ್ಟಿ ಬಹಳಷ್ಟಿದೆಯಾದರೂ, ಬಹುಪಾಲು ಅವು ಸೂಕ್ಷ್ಮತರ ಹಾಸ್ಯದವು. ಹಗುರ ಮನಸ್ಸಿನ ಸೂಕ್ಷ್ಮದರ್ಶಕಕ್ಕೆ ಗೋಚರವಾಗುವಂಥವು. ಆ ನಗೆಸ್ಲೈಡುಗಳ ಪರಿಚಯ ಇನ್ನೊಮ್ಮೆ.

❑

**ಪ್ರತಿಕ್ರಿಯೆ**

**ವಿಜ್ಞಾನಿ ಐನ್ ಸ್ಟೈನ್ ಒಂದು ಮದುವೆಗೆ ಹೋಗಿದ್ದರು. ಆ ದಂಪತಿಗಳು ಸುಮಾರು ಎರಡು ವರ್ಷದ ನಂತರ ತಮ್ಮ ಮಗುವಿನೊಂದಿಗೆ ಐನ್ ಸ್ಟೈನ್ ಅವರನ್ನು ಭೇಟಿ ಮಾಡಿದರು. ಮಗು ಐನ್ ಸ್ಟೈನ್ ನೋಡಿ ಜೋರಾಗಿ ಅತ್ತಿತು. ಆಗ ಐನ್ ಸ್ಟೈನ್ ನಾನು ಬಹಳ ವರ್ಷಗಳಿಂದ ನೋಡ್ತಿದೀನಿ, ನನ್ನನ್ನು ನೋಡಿದರೆ ಏನನಿಸುತ್ತದೆ ಅಂತ ಹೇಳಿದ ಪ್ರಾಮಾಣಿಕ ವ್ಯಕ್ತಿ ಇದೊಂದೇ ಅಂದರು.**

ವಿಜ್ಞಾನ ವಿಶೇಷ

# ವಿಜ್ಞಾನದತ್ತ ಒರನೋಟ

**- ಶರತ್ ಕಲ್ಕೋಡ್**

ಅ ಆ ಇ ಈ ತಿದ್ದಿ ಉರುಹೊಡೆಯಲಾರಂಭಿಸಿದ ದಿನಗಳಿಂದ ಹಿಡಿದು ಇಂದಿನ-ಅಂದರೆ ಮುಂದಿನ ಎಪ್ಪತ್ತೆರಡು ಸಂವತ್ಸರಗಳವರೆಗೂ-ಗಣಿತ, ವಿಜ್ಞಾನ, ಇಂಗ್ಲಿಷ್‌ಗಳೆಂದರೆ ನನ್ನ ಪಾಲಿಗೆ ಸಿಂಹಸ್ವಪ್ನ!

**ವಿಜ್ಞಾನ ನನಗೆ ''ಮಹಾ ಅ(ವಿ)ಜ್ಞಾನಿ'' ಡಾಕ್ಟರೇಟ್ ಪಡೆಯುವಲ್ಲಿ ಸಹಕಾರಿಯಾಯಿತು.**

ಗಣಿತ ನನಗೆ ''ದಡ್ಡಶಿಖಾಮಣಿ ಪಟ್ಟ ಕಟ್ಟಿದರೆ ವಿಜ್ಞಾನ ನನಗೆ ''ಮಹಾ ಅ(ವಿ)ಜ್ಞಾನಿ'' ಡಾಕ್ಟರೇಟ್ ಪಡೆಯುವಲ್ಲಿ ಸಹಕಾರಿಯಾಯಿತು. ''ಮಹಾ ಅ(ವಿ)ಜ್ಞಾನಿ'' ಡಾಕ್ಟರೇಟ್ ಪದವಿ ನೀಡಿ ಹೈಸ್ಕೂಲ್ ದಿನಗಳಲ್ಲೇ ನನಗೆ ನೀಡಿ ಗೌರವಿಸಿದವರು ಸೈನ್ಸ್ ಟೀಚರ್ ಆಗಿದ್ದ ಎಲಿಜಬತ್ ಮಿಸ್. ಈ ಮಿಸ್ ಕೇವಲ ಸೈನ್ಸ್ ಮಾತ್ರವಲ್ಲ ಜಿಯೋಗ್ರಫಿ ಟೀಚರ್ ಕೂಡ (ನನ್ನ ಕರ್ಮ). ಬಾಳೇಹಣ್ಣು ಮಾವಿನ ಹಣ್ಣಿನ ರಸಾಯನ ಸವಿದ ನನಗೆ ರಸಾಯನ, ಭೌತಶಾಸ್ತ್ರಗಳೆಂದರೆ ತೊಡೆಯಲ್ಲಾ ನಡುಕ! ಅಂತೂ ಇಂತೂ ಎಸ್.ಎಸ್.ಎಲ್.ಸಿ. ಹಾಗೂ ಪಿಯುಸಿಗಳಲ್ಲಿ ಜಸ್ಟ್ ಮಾರ್ಕ್ಸ್‌ಗಳಿಸಿದ ನಾನು ಮುಂದೆ ಆರ್ಟ್ಸ್ ತೆಗೆದುಕೊಂಡು ಗಣಿತ/ ವಿಜ್ಞಾನಗಳಿಗೆ ಗುಡ್‌ಬೈ ಹೇಳುವ ಮೂಲಕ ದೇವರ ದಯೆಯಿಂದ ಬಚಾವಾದ್ದು ನನ್ನ ಬಾಳಿನ ಪುಟದ ಇತಿಹಾಸದ ಸುವರ್ಣ ಅಧ್ಯಾಯ! ಆದರೂ ಈಗಲೂ ನಿತ್ಯದ ವ್ಯವಹಾರಗಳಲ್ಲಿ ಲೆಕ್ಕಾಚಾರ ಮಾಡುವಾಗ ಇಣುಕಿ ಗಣಿತ ತರ್ಲೆ ಮಾಡಿ ಎಡವಟ್ಟು ಮಾಡುವಂತೆ, ವಿಜ್ಞಾನವೂ ಆಗಾಗ-ವರ್ಷಕ್ಕೊಮ್ಮೆ ಅಥವಾ ಎರಡು ಬಾರಿ-ಹಣಕಿ ಕಕ್ಕಾಬಿಕ್ಕಿಗೊಳಿಸುವುದುಂಟು. ಆ ಸಂದರ್ಭ ಯಾವುದೆಂದರೆ ಸೂರ್ಯ ಮತ್ತು ಚಂದ್ರಗ್ರಹಣ ಬಂದಾಗ.

ಸಗಣಿ ಬಳಿದ ಮನೆ ಜಗುಲಿಯ ಮೇಲೆ ಕುಳಿತು ಮಿಸ್ ಎಲಿಜಿಬೆತ್ ಕಲಿಸಿದ ಗ್ರಹಣದ ಪಾಠ ಓದುತ್ತಾ ಉರು ಹೊಡೆಯುತ್ತಿದ್ದೆ. ನಡುಮನೆಯಲ್ಲಿ ಹಿರಿಯಪ್ಪ ಪೂಜೆ ಮಾಡುತ್ತಿದ್ದರು. ಅಡುಗೆ ಮನೆಯಲ್ಲಿ ಪುಟ್ಟಜ್ಜಿ ಕಾಫಿಕಷಾಯ ಕಾಯಿಸುತ್ತಿದ್ದವಳ ಕಿವಿಗೆ ನಾನು ಉರು ಹೊಡೆಯುತ್ತಿದ್ದ ಸಾಲು ಬೀಳಬೇಕೇ? ಸೂರ್ಯ-ಚಂದ್ರ ಗ್ರಹಣದ ಬಗ್ಗೆ ವೈಜ್ಞಾನಿಕ ವಿಶ್ಲೇಷಣೆ ಕೇಳಿ ಕರೆಂಟ್ ಹೊಡೆದಂತಾಗಿ ಪೂಜೆ ಮಾಡುತ್ತಿದ್ದ ಹಿರಿಯಪ್ಪನನ್ನು ಏರುಸ್ವರದಲ್ಲಿ ಪ್ರಶ್ನಿಸಿದರು. ''ಏನು ಸುಬ್ಬು ಅದು? ಗ್ರಹಣ ಅಂದ್ರೆ ರಾಹು-ಕೇತು ಸೂರ್ಯ-ಚಂದ್ರರನ್ನು ಹಿಡಿಯೋದಲ್ವೇನೋ? ಮಾಣಿಗೆ ಶಾಲೇಲ್ಲೀ ಬೇರೇಯೇನೋ ಪಾಠ ಹೇಳಿಕೊಟ್ಟಿದ್ದಾರಲ್ಲೋ!?''

ಹಿರಿಯಪ್ಪ ಮನೆಯನೆಂತೋ ಅಂತೆ ಲೋಕ ಕಂಡವರು. ಕ್ರಾಪಿನೊಂದಿಗೆ ಜುಟ್ಟನ್ನು ಬಿಟ್ಟವರು. ತೀರ್ಥಹಳ್ಳಿಗೆ ಹೋಗುವಾಗ ಕಚ್ಚೆ-ಪಂಚೆ, ಟೊಪ್ಪಿ ತೊಟ್ಟರೆ, ಶಿವಮೊಗ್ಗಾಕ್ಕೆ

ಕೋರ್ಟ್ ವ್ಯವಹಾರಗಳಿಗೆ ಹೋಗುವಾಗ ಪ್ಯಾಂಟ್-ಕೋಟು ಧರಿಸುತ್ತಿದ್ದವರು. ಪುಟ್ಟಜ್ಜಿ ಪ್ರಶ್ನೆಗೆ ಗಂಟೆ ಬಾರಿಸುತ್ತಾ, ದೇವರಿಗೆ ಆರತಿ ಎತ್ತುತ್ತಾ ಸಮಾಧಾನವಾಗಿಯೇ ಉತ್ತರಿಸಿದರು. ''ನಮ್ಮ ಪುರಾಣದ ರೀತಿ ರಾಹು-ಕೇತು ಹಿಡಿಯುವುದು ಸರಿ, ವಿಜ್ಞಾನದ ದೃಷ್ಟಿಯಲ್ಲಿ ಮಾಸ್ತ್ರು ಹೇಳಿದ್ದು, ಮಾಣಿ ಉರು ಹೊಡೆಯುತ್ತಿರುವುದು ಸರಿ...''

ರೇಗಿದ ಪುಟ್ಟಜ್ಜಿ ಅಡುಗೆ ಮನೆಯಿಂದಲೇ ''ನೀ ಏನ್ ಹೇಳೋದು ಸಬ್ಬು, ಹಂಗಾರೆ ನಮ್ಮ ದೇವರು, ಪುರಾಣ ಎಲ್ಲಾ ಸುಳ್ಳು ಅಂತ್ಲಾ? ಅಪದ್ದನ್ನೆಲ್ಲಾ ಕಲಿಯೋಕ್ಕೆಂತ ಸ್ಕೂಲ್‌ಗೆ ಕಳುಹಿಸಬೇಕೇನೋ? ಆ ಮೇಸ್ತ್ರ ಮುಂಡಾಮೋಚ್ತು! ಅದನ್ನೆಲ್ಲಾ ಕಲಿಯುವುದಾದರೆ ನಮ್ಮ ಮಾಣಿ ಸ್ಕೂಲಿಗೆ ಹೋಗುವುದೇ ಬೇಡ'' ಮಿಡುಕಾಡಿತು.

ಪುಟ್ಟಜ್ಜಿ ನುಡಿ ಕೇಳಿ ನಾಳೆಯಿಂದ ಶಾಲೆಗೆ ಹೋಗುವುದು ಬೇಡ. ಮೇಸ್ತ್ರ ಕಾಟ ತಪ್ಪಿತು ಅಂತ ಬಹಳ ಖುಷಿಯಾಯಿತು. ಆದರೆ ಹಾಗಾಗಲಿಲ್ಲವೆಂಬುದು ಬೇರೇ ಮಾತು.

ವಿಜ್ಞಾನ-ಗಣಿತದ ಕಬಂಧ ಬಾಹುಗಳಿಂದ ಪಾರಾದೆ ಎಂದು ನಾನು ಅಂದುಕೊಂಡರೂ ''ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷಿಯೊಳಗೆ'' ಅಂತ ಟಿವಿ, ಕಂಪ್ಯೂಟರ್, ಮೊಬೈಲ್, ಇಂಟರ್‌ನೆಟ್, ಫೇಸ್‌ಬುಕ್, ವಾಟ್ಸಪ್ ಅಂತ ಹತ್ತು ಹಲವು ಅವತಾರಗಳಲ್ಲಿ ಪ್ರತ್ಯಕ್ಷವಾಗಿದೆ. ಅಂಬೆಗಾಲಿಡುತ್ತಾ, ತೆವಳುತ್ತಾ ನನಗೆ ಎಲ್ಲವೂ ಗೊತ್ತುಂಟೆಂದು ಧಿಮಾಕು ತೋರಿಸಲು ಹೋಗಿ ಎಡವಟ್ಟಾಗಿ ನಗೆ ಪಾಟಲಿಗೀಡಾಗುವುದು ಸಾಮಾನ್ಯ.

ಮೊನ್ನೆ ಸೂರ್ಯಗ್ರಹಣ ಬಂದಾಗ ಮೊಮ್ಮಕ್ಕಳಾದ ಆರ್ಯ-ಆರುಷ್‌ರಿಗೆ ಅವುಗಳ ಬಗ್ಗೆ ವಿವರ ನೀಡಲು ಹೋದೆ. ನಂಬಿದರೆ ನಂಬಿ, ಬಿಟ್ಟರೆ ಬಿಡಿ-ಪ್ರತಿಸಲವೂ ಆಗುವಂತೆ ನನಗೆ ಯಾರು ಯಾರಿಗೆ ಅಡ್ಡ ಬರುತ್ತಾರೆ, ಯಾರನ್ನು ಯಾರು ಹಿಡಿಯುತ್ತಾರೆ ಕನ್‌ಫ್ಯೂಸೋ, ಕನ್‌ಫ್ಯೂಸ್! ಸೂರ್ಯ-ಭೂಮಿ ನಡುವೆ ಚಂದ್ರ ಬಂದಾಗ ಆಗುವುದು ಸೂರ್ಯ ಗ್ರಹಣವೋ ಇಲ್ಲಾ ಚಂದ್ರ ಗ್ರಹಣವೋ!? ನನ್ನ ಕನ್‌ಫ್ಯೂಸ್ ಕಂಡು ಮನೆಯವರಿಗೆಲ್ಲಾ ನಗುವೋ ನಗು!! ನನ್ನ ಪರಿಸ್ಥಿತಿ ನೋಡಿ ಆರ್ಯ, ಆಪದ್ಬಾಂದವನಾಗಿ ಇಂಟರ್‌ನೆಟ್ ಆನ್ ಮಾಡಿ, ''ಸೂರ್ಯ-ಭೂಮಿ ನಡುವೆ ಚಂದ್ರ ಬಂದಾಗ ಸೂರ್ಯಗ್ರಹಣ, ಸೂರ್ಯ-ಚಂದ್ರರ ನಡುವೆ ಭೂಮಿ ಬಂದಾಗ ಚಂದ್ರಗ್ರಹಣವೆಂದು'' ಕ್ಷಣಾರ್ಧದಲ್ಲಿ ನನ್ನನ್ನು ಸಂಕಷ್ಟದಿಂದ ಪಾರುಮಾಡಿದ.

ಆದರೆ ಇದ್ದಕ್ಕಿದ್ದಂತೆ ಧುತ್ತನೆ ಯಾರಾದರೂ ಗ್ರಹಣ ವಿವರಿಸುವಂತೆ ನನ್ನನ್ನು ಕೇಳಿದರೆ ನಾನು ತಬ್ಬಿಬ್ಬಾಗಿ ಉತ್ತರಿಸುತ್ತೇನೆಂಬುದರಲ್ಲಿ ಯಾವುದೇ ಅನುಮಾನ ಬೇಡ!

❑

## ಯಾವುದು ಉತ್ತಮ?

'ನನ್ನ ಬಳಿ ಎರಡು ಗಡಿಯಾರಗಳಿವೆ. ಒಂದು 2 ನಿಮಿಷ ಫಾಸ್ಟ್ ಹೋಗುತ್ತಿದೆ. ಇನ್ನೊಂದು ಕೆಟ್ಟು ಹೋಗಿದೆ. ಇವುಗಳಲ್ಲಿ ಯಾವುದು ಉತ್ತಮ?' ಎಂದು ಕಂಪ್ಯೂಟರ್‌ನನ್ನು ಕೇಳಿದಾಗ ಅದು ಕ್ಷಣ ಮಾತ್ರದಲ್ಲಿ ಹಲವಾರು ಲೆಕ್ಕಾಚಾರಗಳನ್ನು ಹಾಕಿ ಈ ಉತ್ತರ ನೀಡಿತು: ಕೆಟ್ಟು ಹೋಗಿರುವ ಗಡಿಯಾರವೇ ಉತ್ತಮ. ಏಕೆಂದರೆ ಅದು ದಿನಕ್ಕೆ ಎರಡು ಬಾರಿಯಾದರೂ ಸರಿಯಾದ ಸಮಯ ತೋರಿಸುತ್ತದೆ.

ವಿಜ್ಞಾನ ವಿಶೇಷ

# ವಿಜ್ಞಾನಕ್ಕೆ ಒಂದು ಸವಾಲ್

- ಎಂ.ಎಸ್. ನರಸಿಂಹಮೂರ್ತಿ

**ಜೊ**ಲ್ಲು ಸುರಿಸಬೇಡ ಅಂತ ಹಿರಿಯರು ಹೇಳ್ತಾ ಇದ್ದಿದ್ದು ನಾನು ಚಿಕ್ಕವನಿದ್ದಾಗ. ಜೊಲ್ಲು ಸುರಿಸಬೇಡ ಅಂತ ಗೆಳೆಯರು ಹೇಳಿದ್ದು ನಾನು ದೊಡ್ಡವನಾದ ಮೇಲೆ.

**ಊಟದ ಸಮಯದಲ್ಲಿ ನೀರು ಕುಡಿಯಲೇಬಾರದು ಎಂದಮೇಲೆ ಊಟಕ್ಕೆ ಕೂತ ಕೂಡಲೇ ನೀರನ್ನ ಇಡೋದು ಯಾಕೆ?**

ಜೊಲ್ಲು ಅಂದೆ ಸಲೈವ. ಅದಕ್ಕಿಂತ ಚೀಪ್ ಆದ ಒಳ್ಳೇ ಔಷಧಿ ಇಲ್ಲವೇ ಇಲ್ಲ ಅಂತ ಸೈನ್ಸ್ ಹೇಳಿದೆ. ಸಲೈವದಲ್ಲಿ ನಾವು ತಿನ್ನುವ ಆಹಾರದ ಸ್ವಲ್ಪ ಭಾಗ ಜೀರ್ಣ ಆಗುತ್ತಿದೆ. ಒಬ್ಬ ಜೊಲ್ಲು ಬುರುಕ ತನ್ನ ಜೀವಮಾನದಲ್ಲಿ ಸುರಿಸುವ ಅಷ್ಟೂ ಜೊಲ್ಲನ್ನು ತಂದು ಸುರಿದರೆ ಒಂದು ಈಜುಕೊಳ ನಿರ್ಮಾಣ ಆಗುತ್ತದಂತೆ. ಬೀರು ತುಂಬಿಸಿದ ಈಜುಕೊಳದ ಬಗ್ಗೆ ನಾನು ಕೇಳಿದ್ದೀನಿ. ಜೊಲ್ಲು ತುಂಬಿರುವ ಈಜುಕೊಳ ಎಂದರೆ ಅಸಹ್ಯದ ಪರಮಾವಧಿ. ಅದರಲ್ಲಿ ಯಾರು ಈಜು ಹೊಡೀತಾರೋ ದೇವರಿಗೇ ಗೊತ್ತು.

ಮೊನ್ನೆ ಟೀವಿ ನೋಡ್ತಾ ಇದ್ದೆ. ಒಬ್ಬ ಕಳ್ಳ ಕಾರಿನ ಕಿಟಕಿ ಗ್ಲಾಸನ್ನ ತನ್ನ ಬಾಯಿಯ ಜೊಲ್ಲಿನಿಂದಾನೇ ಒಡೆದು ಓಪನ್ ಮಾಡಿದ್ದಾನೆ. ಜೊಲ್ಲಿಗೆ ಹರಳುಪ್ಪು ಬೆರೆಸಿ ಉಂಡೆ ಮಾಡಿ ಗಾಜಿನ ಕಿಟಕಿಗೆ ಜೋರಾಗಿ ಹೊಡೆದಾಗ ಗಾಜು ತನ್ನ ಶೇಪು ಕಳೆದುಕೊಂಡಿತು. ಸುಲಭವಾಗಿ ಕತ್ತರಿಸಿ ತೆಗೆಯಲು ಸಾಧ್ಯವಾಯಿತು. ಕಾರಿನ ಗಾಜನ್ನು ಅವನು ಒಳಕ್ಕೆ ತಳ್ಳಿ. ಕಾರೊಳಗೆ ಎಂಟ್ರಿ ಕೊಡುವುದನ್ನು ಡೆಮಾನ್‌ಸ್ಟ್ರೇಟ್ ಮಾಡಿ ತೋರಿಸಿದ.

ವಿಜ್ಞಾನಕ್ಕೇ ಗೊತ್ತಿಲ್ಲದೆ ಇರುವ ಎಷ್ಟೋ ಆವಿಷ್ಕಾರಗಳನ್ನು ನಮ್ಮ ಕಳ್ಳರು ಮಾಡಿದ್ದಾರೆ. ಎಲ್ಲಿ ಗಾಯ ಆದರೂ ಅಲ್ಲಿಗೆ ಜೊಲ್ಲು ಹಾಕಿ ವಾಸಿಯಾಗುತ್ತೆ ಅಂತ ಚಿಕ್ಕವಯಸ್ಸಿನಲ್ಲಿ ನನ್ನ ಗೆಳೆಯರು ಹೇಳ್ತಾ ಇದ್ರು. ನಾಯಿ, ನರಿಗಳು ಜೊಲ್ಲಿನಿಂದಾನೇ ಗಾಯ ವಾಸಿಮಾಡಿಕೊಳ್ಳುತ್ತದೆ. ಗಾಯವಾದ ಜಾಗಕ್ಕೆ ನಾಲಿಗೆಯಿಂದ ಮಸಾಜ್ ಮಾಡುತ್ತದೆ. ಜೊಲ್ಲು ಸರ್ವಶ್ರೇಷ್ಠ.

ಪ್ರೇಮಿಗಳಿಗೆ ಜ್ವರ ಬಂದಾಗ ಚುಂಬನದ ಮುಖಾಂತರ ಪರಸ್ಪರ ಜೊಲ್ಲನ್ನ ಬದಲಾಯಿಸಿಕೊಳ್ತಾರೆ. ಹೀಗಾಗಿ ಪ್ರೇಮ ಜ್ವರ ವಾಸಿಯಾಗುತ್ತಂತೆ. ವೈದ್ಯರೊಬ್ಬರು ತಮ್ಮ ಭಾಷಣದಲ್ಲಿ ಹೇಳಿದ್ದೇನು ಗೊತ್ತಾ? ಬೆಳಗಾಗಿ ಎದ್ದು ಫ್ರೆಶ್ ಜೊಲ್ಲನ್ನು ಹಾಗೇ ಉಳಿಸಿಕೊಳ್ಳಿ ನೀರಿನಿಂದ ಬಾಯಿ ಮುಕ್ಕಳಿಸಿ ನುಂಗಿಬಿಡಿ. ನಿಮ್ಮ ಜೊಲ್ಲು ನಿಮ್ಮ ಹೊಟ್ಟೆಯನ್ನೇ ಸೇರಲಿ. ಬೆಳಗಿನ ಝಾವದಲ್ಲಿ ತಯಾರಾಗುವ ಜೊಲ್ಲು ಅತ್ಯಂತ ಉತ್ತಮವಾದ ಜೊಲ್ಲು ಅಂತ ಜೊಲ್ಲಿನ ಮೇಲೆ ಒಂದು ಉಪನ್ಯಾಸ ಕೊಟ್ಟಿದ್ದರು.

ಬೆಳಗ್ಗೆ ಎದ್ದು ಎಷ್ಟು ಗ್ಲಾಸ್ ನೀರು ಕುಡೀಬೇಕು ಎನ್ನುವ ಬಗ್ಗೆಯೂ ಜಿಜ್ಞಾಸೆ ಇದೆ. ಕೆಲವರು ಶರೀರದ ತೂಕ ಅವಲಂಬಿಸಿ ನೀರಿನ ಪ್ರಮಾಣ ಹೇಳಿದರೆ ಮತ್ತೆ ಕೆಲವರು 6 ಗ್ಲಾಸ್, 8 ಗ್ಲಾಸ್, 10 ಗ್ಲಾಸು... ಹೀಗೆ ಹೇಳುತ್ತಾರೆ. ಸಾಮಾನ್ಯವಾಗಿ ನಾಲ್ಕು ಲೀಟರಿನಿಂದ ಆರು

ಲೀಟರಿನವರೆಗೂ ನೀರಿನ ಪ್ರಮಾಣ ಇರುತ್ತದೆ. ಬೆಳಗ್ಗೆ ಒಂದು ಬಕೀಟ್ ನೀರು ಕುಡಿದರೆ ತುಂಬಾ ಒಳ್ಳೇದು ಅಂತ ನನ್ನ ಗೆಳೆಯನೊಬ್ಬ ಹೇಳಿದ್ದ. ಆದರೆ ಅವನು ಬಕೀಟ್ ಸೈಜನ್ನು ಮಾತ್ರ ಹೇಳಲಿಲ್ಲ. ಬಿಸಿ ನೀರಿಗೆ ನಿಂಬೆಹಣ್ಣು ಮತ್ತು ಜೇನುತುಪ್ಪ ಹಾಕಿಕೊಂಡು ಬೆಳಗಿನ ಹೊತ್ತು ಕುಡಿದರೆ ತೂಕ ಕಡಿಮೆಯಾಗುತ್ತದಂತೆ. ಆದರೆ ಮಧ್ಯಾಹ್ನದವರೆಗೂ ಏನೂ ತಿನ್ನಬಾರದು ಎಂಬ ರೈಡರ್ ಕೂಡ ಇದೆ.

ಇನ್ನು ನೀರು ಯಾವಾಗ ಕುಡೀಬೇಕು ಅನ್ನೋದು ಕೂಡ ಚರ್ಚಾಸ್ಪದ ವಿಷಯ. ಊಟಕ್ಕೆ ಅರ್ಧ ಘಂಟೆ ಮುಂಚೆ ನೀರು ಕುಡಿಯಿರಿ ಅಂತ ಕೆಲವರು ಹೇಳಿದರೆ ಊಟವಾದ ಒಂದು ಘಂಟೆಯ ನಂತರ ನೀರು ಕುಡೀರಿ ಅಂತ ಮತ್ತೆ ಕೆಲವರು ಹೇಳಿದ್ದಾರೆ. ಊಟ ಮಾಡುವಾಗ ಮಧ್ಯೆ ಮಧ್ಯೆ ನೀರು ಕುಡಿಯಲೇಬಾರದು ಅಂತ ಹಿರಿಯರೊಬ್ಬರು ಹೇಳಿದ್ದರು. ಹಾಗಿದ್ದರೆ ಊಟಕ್ಕೆ ಕೂತ ಕೂಡಲೇ ನೀರನ್ನ ಇಡೋದು ಯಾಕೆ ಅನ್ನುವ ಅನುಮಾನ ನನಗೆ ಬಂದಿದೆ.

ಇನ್ನು ಮಧುಮೇಹ ಇದ್ದರಂತೂ ಮುಗೀತು ಕತೆ. ಡಯಾಬಿಟೀಸ್ ಇದೆ ಅಂತ ನಾನು ಹೇಳಿದ್ದಕ್ಕೆ ಇದುವರೆಗೆ ಸಾವಿರ ಸಲಹೆಗಳು ಬಂದಿವೆ. ಏನು ತಿನ್ನಬೇಕು ಏನು ತಿನ್ನಬಾರದು, ಯಾವ ಹಣ್ಣು ತಿನ್ನಬೇಕು ಯಾವ ಹಣ್ಣು ತಿನ್ನಬಾರದು ಅಂತ ಪೈಪೋಟಿಯ ಮೇಲೆ ಜನ ನನಗೆ ಬುದ್ಧಿ ಹೇಳಿದ್ದಾರೆ. ಹುಣಸೆಹಣ್ಣು ಬಿಟ್ಟು ಯಾವ ಹಣ್ಣು ಬೇಕಾದರೂ ತಿನ್ನಿ ಅಂತ ವೈದ್ಯರು ಹೇಳುತ್ತಾರೆ. ಮಾವಿನ ಹಣ್ಣು, ಸಪೋಟ, ಹಲಸಿನಹಣ್ಣು ಡಯಾಬಿಟೀಸ್ ಇರೋವರ ಹತ್ರ ಬರಲೇಬಾರದು. ಆ ಹಣ್ಣುಗ್ಗಳನ್ನು ಕಣ್ಣಿನಿಂದ ನೋಡಿದರೆ ಕಣ್ಣಿಗೆ ಪೊರೆ ಬರುತ್ತದೆ ಅಂತ ಹೆದರಿಸಿದ್ದೂ ಉಂಟು.

ಒಂದೇ ಸಲ ತಿನ್ನುವ ಬದಲು, ದಿನಕ್ಕೆ 6 ಸಲ 8 ಸಲ ತಿಂದರೆ ಒಳ್ಳೆಯದು ಎಂಬ ಸಲಹೆ ಡಾಕ್ಟರ್‌ನಿಂದ ಬಂದಿದೆ. ಆದರೆ ಪ್ರತಿದಿನ ಬೆಳಗ್ಗೆ 11 ಗಂಟೇಲಿ, ಮಧ್ಯಾಹ್ನ 3, ಸಂಜೆ 5 ಘಂಟೇಲಿ ಬಿಸಿ ಬಿಸಿಯಾಗಿ ದೋಸೆ ಬೇಕಾದರೆ ಮಾಡಿಕೊಡೋಕೆ ಡಾಕ್ಟರ್ ಬರುತ್ತಾರಾ? ಇಡೀ ದಿನ ರಜಾ ಹಾಕಿ ನಾವು ದೋಸೆ ಹುಯ್ಯುತ್ತಾ ಮನೇಲೇ ಇರಬೇಕಾಗುತ್ತೆ.

ಇನ್ನು ಎಣ್ಣೆ ವಿಷಯ ಹೇಳೋದೇ ಬೇಡ. ಅಡಿಗೆ ಎಣ್ಣೆ ಬಗ್ಗೆ ನಾನು ಹೇಳ್ತಾ ಇರೋದು. 'ನಮ್ಮ ಎಣ್ಣೇಲಿ ಫ್ಯಾಟಿಲ್ಲ, ಇದರಲ್ಲಿ ಒಳ್ಳೆ ಕೊಲೆಸ್ಟ್ರಾಲ್ ಇದೆ', ಇತ್ಯಾದಿಗಳನ್ನ ಕಂಪನಿಯವರು ಹೇಳುತ್ತಾರೆ. ಚಪಾತಿ ಮಾಡೋಕೆ ಇಂಥ ಗೋಧಿ ಹಿಟ್ಟನ್ನ ಬಳಸಿ, ಅದರಲ್ಲಿ ವಿಶೇಷವಾದ ವಿಟಮಿನ್‌ಗಳನ್ನು ಹಾಕಿದ್ದೀವಿ ಅನ್ನೋ ಜಾಹೀರಾತು ನೋಡಿದ್ದೆ. ನನಗೆ ಗೋಧಿ ಹಿಟ್ಟಲ್ಲಿ ವಿಟಮಿನ್‌ಗಳು ಸಿಗಲಿಲ್ಲ ಬದಲಿಗೆ ಜಿರಳೆ ರೆಕ್ಕೆ, ಇಲಿ ಹಿಚಿಕೆ ಸಿಕ್ಕಿವೆ.

ಹೆಚ್ಚುವರಿ ಆಕ್ಸಿಜನ್ ಇರುವ ಕುಡಿಯುವ ನೀರು ಅಂತ ಜಾಹೀರಾತುಗಳು ಬಂದಿವೆ. ಆಕ್ಸಿಜನ್ ಎಂದರೆ ಎಚ್‌ಒ2. ಅದು ಏನಾದ್ರೂ ಎಚ್‌ಟುಒ2 ಆದರೆ ಅದು ಹೈಡ್ರೋಜನ್ ಪರಾಕ್ಸೈಡ್ ಆಗುತ್ತದೆ. ಇದು ವಿಷ. ಎರಡು ಅಣು ಜಲಜನಕಕ್ಕೆ ಒಂದು ಅಣು ಆಮ್ಲ ಜನಕ ಸೇರಿಸಿದಾಗ ಮಾತ್ರ ನೀರು ಸಿಗುತ್ತದೆ. ಹೆಚ್ಚು ಆಮ್ಲಜನಕ ಕೊಡುತ್ತೇವೆ ಎಂದರೆ ಗಾಯಗಳನ್ನು ವಾಸಿ ಮಾಡುವ ಹೈಡ್ರೋಜನ್ ಪರಾಕ್ಸೈಡ್ ಕೊಡಬೇಕಾಗುತ್ತದೆ.

ಇನ್ನು ಎತ್ತರ ಆಗಲು ಎಷ್ಟೋ ಟಾನಿಕ್‌ಗಳು ಬಂದಿವೆ. ಹಾರ್ಲಿಕ್ಸ್ ಕುಡಿದ ಮಕ್ಕಳು ಮಾತ್ರ ಎತ್ತರ ಆಗ್ತಾರೆ, ಕುಡೀದೇ ಇರೋ ಮಕ್ಕಳು ಕುಳ್ಳಗೆ ಇರ್ತಾರೆ ಅಂತ ದೃಶ್ಯ ರೂಪದಲ್ಲಿ ತೋರಿಸಿದ್ದಾರೆ. ನಮ್ಮ ಕಾಲದಲ್ಲಿ ಹಾರ್ಲಿಕ್ಸ್ ಇರಲಿಲ್ಲ, ಆದರೆ ಮನುಷ್ಯ ಎಷ್ಟು ಬೆಳೀಬೇಕೋ ಅಷ್ಟು ಬೆಳೆದಿದ್ದಾನೆ.

ಇಂಥ ಸೋಪನ್ನ ಮಾತ್ರ ಬಳಸಿ. ಇದರಲ್ಲಿರುವ ವಿಟಮಿನ್ನುಗಳು ನಿಮ್ಮ ಸೌಂದರ್ಯ ಹೆಚ್ಚಿಸಲು ಸಹಾಯ ಮಾಡುತ್ತೆ ಅನ್ನೋ ಜಾಹೀರಾತುಗಳು ಕಂಡಿದ್ದೇನೆ. ಚಿತ್ರನಟಿಯರು 'ನನ್ನ ಶರೀರಕ್ಕೆ ಇದೇ ಸೋಪನ್ನ ಬಳಸ್ತೀನಿ' ಅಂತ ಜಾಹೀರಾತು ಕೊಡುತ್ತಾರೆ. ಯಾಕೆ ಹೀಗೆ ಎಂದು ನಾನು ಹಾಸ್ಯ ಸಾಹಿತಿ ನಾಡಿಗೇರ್ ಕೃಷ್ಣರಾಯರನ್ನು ಕೇಳಿದ್ದೆ. ಅವರು ಹೇಳಿದ್ದೇನು ಗೊತ್ತಾ? 'ಆ ಚಿತ್ರ ನಟಿಗೆ ಯಾವ ಚರ್ಮರೋಗ ಇದೆಯೋ ಅವಳು ಆ ಸೋಪನ್ನ ಬಳಸಲಿ. ಅವಳು ಬಳಸಿದ್ದನ್ನು ನಾವು ಯಾಕೆ ಬಳಸಬೇಕು ಕರ್ಮ' ಎಂದು ರೇಗಿದ್ದರು.

ಮಕ್ಕಳಿಗೆ ಮೆಮೊರಿ ಕಡಿಮೆ, ಪರೀಕ್ಷೆ ಟೈಮಲ್ಲಿ ಓದಿದ್ದೆಲ್ಲಾ ಮರೆತು ಹೋಗ್ತಾರೆ ಎಂದಾಗ ಬ್ರೈನಿಗೆ ಕಿಕ್ ಕೊಡುವ ಪೌಡರುಗಳು ಸಿಗುತ್ತವೆ. ಅದು ಟಾನಿಕ್ ರೂಪದಲ್ಲೂ ಇರಬಹುದು, ನೇರವಾಗಿ ತಲೆ ಚಿಪ್ಪನ್ನ ಎತ್ತಿ ಮೆದುಳಿನ ಮೇಲೇ ಪೌಡರ್ ಚಿಮುಕಿಸೋ ವಿಧಾನ ಇನ್ನು ಮುಂದೆ ಬರಬಹುದೋ ಏನೋ! ಆದರೆ ಇಂತಹ ಟಾನಿಕ್ ಕುಡಿದು ನೆನಪಿನ ಶಕ್ತಿ ಹೆಚ್ಚಿಸಿಕೊಂಡವರು ಎಷ್ಟು ಮಂದಿ ಇದ್ದಾರೋ ಗೊತ್ತಿಲ್ಲ. ಹಾರ್ಲಿಕ್ಸ್ ಕುಡಿದು ಎಕ್ಸಾಮಿನೇಷನ್ ಪಾಸಾದವರು ನನಗೆ ಇನ್ನೂ ಸಿಕ್ಕಿಲ್ಲ. ನಿರ್ಮಾ ಸೋಪಿನಲ್ಲಿ ಸ್ಕೂಲ್ ಯೂನಿಫಾರಂ ಒಗೆಸಿ ರನ್ನಿಂಗ್ ರೇಸ್‌ನಲ್ಲಿ ಮೊದಲ ಬಹುಮಾನ ಪಡೆದ ಹುಡುಗರು ಯಾರಿದ್ದಾರೆ ಎಂಬುದನ್ನು ನಾನು ಪತ್ತೇ ಹಚ್ಚುತ್ತಲೇ ಇದ್ದೇನೆ.

ಕೆಲವು ಫೇಸ್ ಕ್ರೀಮುಗಳನ್ನ ಹೆಂಗಸರು ಮಾತ್ರ ಬಳಸಬೇಕು. ಗಂಡಸರಿಗೆ ಬೇರೆ ಕ್ರೀಮುಗಳು ಇವೆ ಅಂತ ಹೇಳ್ತಾರೆ. ಹೆಂಗಸರು ಬಳಸುವ ಕ್ರೀಮನ್ನು ಆಕಸ್ಮಾತ್ ಗಂಡಸರು ಬಳಸಿದರೆ ಏನಾಗುತ್ತೆ ಅನ್ನೋದೇ ನನಗೆ ಜಿಜ್ಞಾಸೆಯಾಗಿದೆ. ಕ್ರೀಮುಗಳಲ್ಲಿ ಕೂಡ ಗಂಡು – ಹೆಣ್ಣು ಅನ್ನುವ ಲಿಂಗ ಬೇಧ ಇರುವುದು ನನಗಂತೂ ಇಷ್ಟ ಆಗಲಿಲ್ಲ. ಹಾಗಿದ್ದರೆ ಇನ್ನು ತೃತೀಯ ಲಿಂಗಿಗಳು ಎಲ್ಲಿಗೆ ಏನು ಹಚ್ಚಿಕೊಳ್ಳಬೇಕು ಅನ್ನೋ ಪ್ರಶ್ನೆ ಉದ್ಭವ ಆಗುತ್ತೆ.

ಯಾವುದೋ ಪಾನೀಯ ಕುಡಿದು ಹೆಲಿಕಾಪ್ಟರಿಂದ ಸಮುದ್ರಕ್ಕೆ ಜಿಗಿದಿರುವ ವ್ಯಕ್ತಿಗಳನ್ನ ನಾವು ಟೀವೀಲಿ ನೋಡಿದ್ದೇವೆ ಇದು ವಿಜ್ಞಾನಕ್ಕೇ ಒಂದು ಸವಾಲು. ಏನೂ ಕುಡಿಯದೆ ಹನುಮಂತ ಲಂಕೆಗೆ ಹಾರಿದ, ಆದರೆ ಇವತ್ತು ನಾವು ಹಾರಬೇಕಾದರೆ ಏನಾದರೂ ಕುಡಿದಿರಲೇಬೇಕು. ಏನು ಕುಡೀಬೇಕು ಅನ್ನೋದನ್ನ ನಮಗೆ ಜಾಹೀರಾತುಗಳು ನಿರ್ಧಾರ ಮಾಡುತ್ತವೆ. ಹಗಲಲ್ಲಿ ಕುಡಿಯುವುದು ರಾತ್ರಿಗೆ ಅನ್ವಯಿಸುವುದಿಲ್ಲ.

ಜಾಹೀರಾತುಗಳಲ್ಲಿ ಪ್ರತಿನಿತ್ಯ ಅದೇ ಸುಳ್ಳು ಹೇಳ್ತಾ ಇದ್ರೂ ನಾವು ನಂಬ್ತಾನೇ ಬಂದಿದ್ದೀವಿ. ವಿಜ್ಞಾನ ಒಪ್ಪದೇ ಇರುವ ಅನೇಕ ವಿಷಯಗಳನ್ನು ಜಾಹೀರಾತುಗಳು ಹೇಳುತ್ತವೆ. ಬಿಳಿಕೂದಲನ್ನ ಕಪ್ಪು ಮಾಡೋದು, ಬೋಳು ತಲೆಯಲ್ಲಿ ಕೂದಲು ಬೆಳೆಸೋದು, ಇವೇ ಮೊದಲಾದ ಅನೇಕ ಹೊಸ ವಿಚಾರಗಳನ್ನ ಜಾಹೀರಾತುಗಳು ಹೇಳಿವೆ. ಸ್ಮಶಾನಕ್ಕೆ ಹೋದ ಹೆಣ, ತಲೆಯಿಂದ ಹೋದ ಕೂದಲು ಮತ್ತೆ ವಾಪಸ್ ಬರುವುದಿಲ್ಲ ಎನ್ನುವುದಂತೂ ಸತ್ಯ. ನೂರು ವರ್ಷ ಬದುಕಬೇಕಾದರೆ 'ಸೆಂಚುರಿ ಮಾತ್ರೆ' ಸೇವಿಸಿ ಅಂತ ಯಾರಾದ್ರೂ ಶುರು ಹಚ್ಚಿಕೊಂಡರೆ ಪ್ರಾಯಶಃ ಆ ಮಾತ್ರೆಗಳ ತಯಾರಕ ಮಿಲಿಯನೆರ್ ಆಗಬಹುದು. ಕೋಟ್ಯಾಂತರ ಲಾಭ ಬಂದಾಗ ಅವನಿಗೇ ಹೃದಯಾಘಾತವಾಗಿ ಆಕಾಲದಲ್ಲೇ ಅವನು ಸಾಯಲೂಬಹುದು. ಹ್ಯಾಗಿದೆ ನೋಡಿ ಜಾಹೀರಾತುಗಳ ಪ್ರಭಾವ!

❑

ವಿಜ್ಞಾನ ವಿಶೇಷ

# ದೀಡ್‌ಶಾಣ್ಯರೂ ಮತ್ತು ಕುಪ್ರಶಸ್ತಿಗಳೂ

**- ನಾಗೇಶ್ ಹೆಗಡೆ**

ಬಿಗ್ ಬ್ಯಾಂಗ್ ಥಿಯರಿ ಬಗ್ಗೆ ಗೊತ್ತಲ್ಲ? 1300 ಕೋಟಿ ವರ್ಷಗಳ ಹಿಂದೆ ಸೂಜಿಮೊನೆಯಷ್ಟಿದ್ದ ವಿಶ್ವ ಇದ್ದಕ್ಕಿದ್ದಂತೆ ಢಮಾರೆಂದು ಸ್ಫೋಟಿಸಿ ಇಷ್ಟೆಲ್ಲ ಗ್ಯಾಲಕ್ಸಿ, ನೀಹಾರಿಕೆ, ಗ್ರಹ-ತಾರೆಗಳು ಹುಟ್ಟಿದವು. ಆ ಮಹಾಸ್ಫೋಟಕ್ಕೆ ಕಾರಣ ಏನು ಗೊತ್ತೆ? ದೇವರು ಬಾಯ್ತುಂಬ ಹಾಲು ಕುಡಿಯುತ್ತಿದ್ದಾಗ ಯಾರೋ ಒಂದು ಒಳ್ಳೇ ಜೋಕ್ ಹೇಳಿದರಂತೆ. ಫುರ್‌ರ್‌ರ್...!

**ರಿಸರ್ಚ್ ಮಾಡೋಕೆ ಹೊಸ ಹೊಸ ವಿಷಯಗಳನ್ನು ಹುಡುಕಾಡ್ತಾ ತಡಕಾಡ್ತಾ ಇರೋರಿಗೆ ಹೊಸ ಬಗೆಯ ಪ್ರಶಸ್ತಿ ನೀಡಬೇಡವೆ?**

ಅದಕ್ಕೇ ನಮ್ಮ ಗ್ಯಾಲಕ್ಸಿಗೆ 'ಮಿಲ್ಕಿವೇ' ಅನ್ನುತ್ತಾರೆ. ಅಲ್ಲಿ ಚದುರಿದ ಅನೇಕ ಹನಿಗಳಲ್ಲಿ 'ಸೂರ್ಯ' ಹೆಸರಿನ ಒಂದು ಹನಿಯ ಸುತ್ತ 'ಭೂಮಿ' ಎಂಬ ಈ ಗ್ರಹ ಹೀಗೆ ಸುತ್ತುತ್ತ ಓತಿಕ್ಯಾತಗಳನ್ನೂ ಕೋತಿಗಳನ್ನೂ ಮನುಷ್ಯರನ್ನೂ ವಿಜ್ಞಾನಿಗಳನ್ನೂ ಸೃಷ್ಟಿಸಿತು. ಈ ವಿಜ್ಞಾನಿಗಳು ತಂತಮ್ಮಲ್ಲಿ ಜಾಸ್ತಿ ಬುದ್ಧಿವಂತರು ಯಾರು ಅನ್ನೋದನ್ನ ಗುರುತಿಸಿ ಅವರಿಗೆ ನೊಬೆಲ್ ವಿಜ್ಞಾನಿಗಳು ಅಂತ ಪಟ್ಟ ಕಟ್ಟುತ್ತ ಬಂದರು. ಆ ಪಟ್ಟ ತಮಗೂ ಬೇಕೂ ಅಂತ ಇನ್ನೂ ಅನೇಕರು ಎದ್ದೂ ಬಿದ್ದೂ ರಿಸರ್ಚ್ ಮಾಡೋಕೆ ವಿಷಯ ಹುಡುಕಾಡ್ತಾ ತಡಕಾಡ್ತಾ ಇದ್ದಾಗ ಅವರಿಗಾಗಿಯೇ 'ಇಗ್-ನೊಬೆಲ್' ಅಂಬೋ ಹೊಸ ಬಗೆಯ ಪ್ರಶಸ್ತಿ ನೀಡುವ ಸಂಪ್ರದಾಯ 1991ರಿಂದ ಆರಂಭ ಆಯ್ತು. ಈಗ ಅಂಥ ದೀಡ್‌ಶಾಣ್ಯರ ಕೆಲವು ಉದಾಹರಣೆಗಳನ್ನು ನೋಡೋಣ:

ನಾವೆಲ್ಲ ಏನಾದರೂ ಸಮಸ್ಯೆ ಎದುರಾದಾಗ ನೇರಾ ನೇರ ಥಿಂಕ್ ಮಾಡುತ್ತೇವೆ. ಆದರೆ ವಿಜ್ಞಾನಿಗಳು ಔಟ್ ಆಫ್ ದಿ ಬಾಕ್ಸ್ - ಅಂದರೆ ಬೇರೆ ತೆರನಾಗಿಯೇ ವಿಚಾರ ಮಾಡುತ್ತಾರೆ. ಸಂಶೋಧನೆ ಮಾಡಿ, ತಮಗೆ ಹೊಳೆದ ಹೊಸ ಸಂಗತಿಯನ್ನು ಮತ್ತೆ ಮತ್ತೆ ಪರೀಕ್ಷೆ ಮಾಡಿ, ಒರೆಗಲ್ಲಿಗೆ ಹಚ್ಚಿ, ತಿದ್ದಿ ತೀಡಿ ಒಂದು ಥಿಯರಿಯನ್ನು ಮುಂದಿಡುತ್ತಾರೆ. ಉದಾಹರಣೆಗೆ, ಹಿಮ ಸುರಿದ ಜಾಗದಲ್ಲಿ ಹೆಜ್ಜೆ ಇಡುವಾಗ ಕಾಲು ಜಾರುತ್ತದೆ. ಬರಿಗಾಲಲ್ಲಿ ಹೋದರೆ ಜಾರುತ್ತದೆ. ಶೂ ಹಾಕಿಕೊಂಡು ಹೋದರೂ ಜಾರುತ್ತದೆ. ಏನು ಮಾಡುವುದು? ಅದರ ಬಗ್ಗೆ ನ್ಯೂಝಿಲೆಂಡಿನ ವಿಜ್ಞಾನಿಗಳು ಯೋಚನೆ ಮಾಡಿ 'ಔಟ್ ಆಫ್ ದಿ ಬಾಕ್ಸ್' ಥಿಂಕಿಂಗ್ ಮಾಡಿ, ಒಂದು ಸಂಶೋಧನಾ ಪ್ರಬಂಧವನ್ನು ಬರೆದರು. ಸಾಮಾನ್ಯವಾಗಿ ಎಲ್ಲರೂ ಮೊದಲು ಕಾಲುಚೀಲವನ್ನು ಹಾಕಿಕೊಂಡ ಆ ನಂತರವೇ ಶೂ ಹಾಕಿಕೊಳ್ಳುತ್ತಾರೆ ತಾನೆ? ಹಾಗಲ್ಲ, ಮೊದಲು ಶೂ ಹಾಕಿಕೊಂಡು ಆನಂತರ ಕಾಲುಚೀಲ ಹಾಕಿಕೊಂಡರೆ ಹಿಮದ ಹಾದಿಯಲ್ಲಿ ಕಾಲು ಜಾರುವುದಿಲ್ಲ ಎಂಬ ಹೊಚ್ಚ ಹೊಸ ಸಂಗತಿಯನ್ನು ಜಗತ್ತಿಗೆ ತಿಳಿಸಿದರು. ಅವರ ಈ ಪ್ರಚಂಡ ಸಂಶೋಧನೆಗೆ 2014ರಲ್ಲಿ ಇಗ್ನೊಬೆಲ್ ಪ್ರಶಸ್ತಿ ಲಭಿಸಿತು.

ವೈದ್ಯಕೀಯ ರಂಗದಲ್ಲಿ 'ಸುಳ್ಳು ಗುಳಿಗೆ' ಅಥವಾ 'ನಂಬು ಗುಳಿಗೆ' (ಪ್ಲಾಸಿಬೊ) ಪರಿಣಾಮ ಅನ್ನೋದು ಎಲ್ಲರಿಗೂ ಗೊತ್ತೇ ಇದೆ. ಡಾಕ್ಟರು ಏನೇ ಗುಳಿಗೆ ಬರೆದುಕೊಟ್ಟರೂ ಅದನ್ನು ನುಂಗಿದರೆ ಕೆಲವರಿಗೆ ಕಾಯಿಲೆ ವಾಸಿಯಾಗುತ್ತದೆ. ಡಾಕ್ಟರ್ರೇ ಕೊಡಬೇಕು. ನೀವಾಗಿ

ಅಂಗಡಿಗೆ ಹೋಗಿ ಕೇಳಿದರೆ ಪ್ಲಾಸಿಬೊ ಗುಳಿಗೆ ಸಿಗುವುದಿಲ್ಲ. ಡಾಕ್ಟರು ನಿಮ್ಮ ಮೈಕೈ ಮುಟ್ಟಿ, ಕಣ್ಣು ಅಗಲಿಸಿ, ನಾಡಿ ಹಿಡಿದು, ನಾಲಗೆ ಎಳೆದು ಇನ್ನೇನೇನೋ ಸಖತ್ತಾಗಿ ಪರೀಕ್ಷೆ ಮಾಡಿ, ಡಯಾಗ್ನೋಸ್ಟಿಕ್ ಲ್ಯಾಬಿಗೆ ನಿಮ್ಮನ್ನು ಅಟ್ಟಿ ಆ ಪರೀಕ್ಷೆ ಈ ಟೆಸ್ಟು ಮಾಡಿಸಿ ಕೊನೆಗೆ ಏನೋ ಒಂದು ಮಾತ್ರೆಯನ್ನು ಬರೆದು ಕೊಡುತ್ತಾರೆ. ಅಷ್ಟೆಲ್ಲ ಪರೀಕ್ಷೆ ಮಾಡಿ ಕೊನೆಗೆ ಅವರು ಬರೀ ಗ್ಲುಕೋಸ್ ಮಾತ್ರೆ ಕೊಟ್ಟರೂ ನಿಮಗೆ ಹೊಟ್ಟೆನೋವು ವಾಸಿಯಾಗುತ್ತದೆ. ಇದು ಯಾಕೆ ಹೀಗೆ ಎಂಬುದರ ಬಗ್ಗೆ ಅನೇಕ ಮನೋವೈದ್ಯರು ತಲೆ ಕೆಡಿಸಿಕೊಂಡು ಕೊನೆಗೆ ಹೊಟ್ಟೆನೋವು ಕೂಡ ಅನೇಕ ಸಂದರ್ಭಗಳಲ್ಲಿ ಮಾನಸಿಕ ಕಾಯಿಲೆಯೇ ಹೌದು ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಇದು ಹಳೇ ಸುದ್ದಿ ಅನ್ನಿ. ಆದರೆ ಈ ಸಂಶೋಧನೆಯನ್ನೇ ಇನ್ನಷ್ಟು ವಿಸ್ತರಿಸಿದಾಗ ಸ್ಟಾನ್‌ಫೋರ್ಡ್ ವಿವಿಯ ಬಾಬಾ ಶಿವ್ ಎಂಬ ವೈದ್ಯವಿಜ್ಞಾನಿಗೆ ಒಂದು ಹೊಸ ಸಂಗತಿ ಹೊಳೆಯಿತು. ಅದಕ್ಕೆ ಅವರು ಸಾಕಷ್ಟು ಸಾಕ್ಷ್ಯಗಳನ್ನು ಸಂಗ್ರಹಿಸಿದರು. ಸಖತ್ ಪರೀಕ್ಷೆ ಮಾಡಿ, ಸುದೀರ್ಘ ಸಂಶೋಧನೆಯ ನಂತರ ಪ್ರಬಂಧವನ್ನು ಬರೆದರು. ಈ ಸುಳ್ಳುಗುಳಿಗೆಯ ಬೆಲೆ ಜಾಸ್ತಿ ಇದ್ದಷ್ಟೂ ಕಾಯಿಲೆ ಬೇಗ ವಾಸಿಯಾಗುತ್ತದೆ ಎಂದು ಘೋಷಿಸಿದರು.

ಕೇಳಬೇಕೆ, ಅವರಿಗೆ ವೈದ್ಯಕೀಯ ಕ್ಷೇತ್ರದ ಇಗ್ನೊಬೆಲ್ ಪ್ರಶಸ್ತಿ ಸಿಕ್ಕೇಬಿಟ್ಟಿತು.

ಅಂತರಜಾಲದಲ್ಲಿ ಇಗ್ನೊಬೆಲ್ ಪ್ರಶಸ್ತಿಯ ವಿವರಗಳನ್ನು ಹುಡುಕಿದರೆ, ಪ್ರಶಸ್ತಿ ನೀಡುವವರು ಮತ್ತು ಪಡೆಯುವವರು ವಿಚಿತ್ರ ಮುಖವಾಡ ಹಾಕಿಕೊಂಡಿರುವ ಚಿತ್ರ ಕಾಣುತ್ತದೆ. ಅಲ್ಲೇನೂ ದಿಲ್ಲಿಯಲ್ಲಿದ್ದಂಥ ದಟ್ಟಹೊಗೆ, ಹೊಂಜು ಇರಲಿಲ್ಲ. ಆದರೂ ಹಾಕಿಕೊಂಡಿದ್ದೇಕೆ ಎಂದರೆ ಅಂಥ ಆಪತ್ಕಾಲದಲ್ಲಿ ಅಂಗಡಿಗಳಲ್ಲಿ ಮುಖವಾಡಗಳೆಲ್ಲ ಖರ್ಚಾಗಿದ್ದರೆ ಕೊನೆಯ ಉಪಾಯವಾಗಿ ಮಹಿಳೆಯರ ಬ್ರಾ(ಕಂಚುಕ)ಗಳನ್ನು ಬೈಟೂ ಮಾಡಿ ಇಬ್ಬಿಬ್ಬರು ಬಳಸಬಹುದು ಎಂದು ಷಿಕ್ಯಾಗೊದ ಎಲೆನಾ ಬೊಡ್ನಾರ್ ಎಂಬಾಕೆ ಸಂಶೋಧನೆ ಮಾಡಿದ್ದಳು. ಆ ವಸ್ತ್ರದಲ್ಲಿರುವ ಪದರಗಳು ಮತ್ತು ಸ್ಪಾಂಜ್‌ನಂಥ ಮೃದು ಪ್ಯಾಡಿಂಗು ಎಲ್ಲ ಬಗೆಯ ಮಲಿನ ಕಣಗಳನ್ನು ಹೀರಿಕೊಳ್ಳುತ್ತವೆ ಎಂದು ಆಕೆ ಪ್ರತಿಪಾದಿಸಿದ್ದಳು. ದಿಲ್ಲಿಯಂಥ ನಗರದಲ್ಲಿ ಎಲ್ಲ ಬ್ರಾಗಳೂ ಹೀಗೇ ಬಳಕೆಯಾಗಿ ಕ್ರಮೇಣ ಮಲಿನ ಗಾಳಿಯೆಲ್ಲ ಸೋತ ಸಂಸದರ ಹಾಗೆ ಗಮ್ಯಸ್ಥಾನ ಸೇರಿದ ಮೇಲೆ ಗಾಳಿ ಶುದ್ಧಿಯಾದರೆ ಮುಖವಾಡಗಳನ್ನೆಲ್ಲ ಕಂಚುಕಗಳನ್ನಾಗಿ ಮರುಬಳಕೆ ಮಾಡಬಹುದೆ ಎಂಬ ಬಗ್ಗೆ ಈಕೆ ಏನೂ ಹೇಳಿಲ್ಲ. ಅಲ್ಲಿಗೆ ಇನ್ನೊಂದು ಇಗ್ನೊಬೆಲ್ ಗೆಲ್ಲಲು ಅವಕಾಶ ಇದೆಯೆಂದಾಯ್ತು.

ಪ್ರತಿವರ್ಷ ಜಗತ್ತಿನ ಹತ್ತು ಕುಪ್ರಶಸ್ತಿಗಳನ್ನು ನೀಡಲಾಗುತ್ತದೆ. ಎಲ್ಲ ವಿಜೇತರ ಸಾಧನೆಗಳನ್ನು ಹೇಳುತ್ತಾ ಹೋಗುವ ಬದಲು ಕೆಲವು ಭಾರತೀಯ ಸಾಧಕರ ಮತ್ತು ಭಾರತೀಯರಿಗೆ ಪ್ರಿಯವಾದ ಪ್ರಾಣಿಪಕ್ಷಿಗಳಿಗೆ ಸಂಬಂಧಿಸಿದ ಸಂಶೋಧನೆಗಳನ್ನು ನೋಡೋಣ.

ಕಪ್ಪು ಅಥವಾ ಕಂದು ಕುದುರೆಗಳಿಗೆ ಹೋಲಿಸಿದರೆ ಅಚ್ಚ ಬಿಳಿ ಕುದುರೆಗಳಿಗೆ ನೊಣಗಳ ಕಾಟ ಕಡಿಮೆ ಇರುತ್ತದೆ ಎಂದು ವೈಜ್ಞಾನಿಕ ಪುರಾವೆಗಳ ಸಮೇತ ವಾದಿಸಿ ಪ್ರಬಂಧ ಮಂಡಿಸಿದ ಸ್ವಿಡ್ಸರ್ಲೆಂಡಿನ ಪ್ರಾಣಿಪಕ್ಷಿಗಳ ಮೇಲೆ ನಡೆದ ಸಂಶೋಧನೆಗಳ ಪಟ್ಟಿ ಸಾಕಷ್ಟು ಉದ್ದವಿದೆ. ನಾಯಿಗಳು ಹೆಚ್ಚಾಗಿ ಭೂಮಿಯ ದಕ್ಷಿಣೋತ್ತರ ಅಕ್ಷಕ್ಕೆ ಸಮಾನಾಂತರವಾಗಿಯೇ ನಿಂತು ಏಕೆ ಉಚ್ಚೆ ಹೊಯ್ಯುತ್ತವೆ, ಮರಕುಟಿಕಗಳಿಗೆ ತಲೆನೋವು ಏಕೆ ಬರುವುದಿಲ್ಲ, ಪಾಂಡಾಗಳ ಸೆಗಣಿಯಿಂದ ಪಡೆದ ಕಿಣ್ವಗಳನ್ನು ಬಳಸಿ ಮನೆಯೊಳಗಿನ ಹಸಿಕಸವನ್ನು

ತ್ವರಿತವಾಗಿ ಕಾಂಪೋಸ್ಟ್ ಮಾಡುವ ವಿಧಾನ ಹೇಗೆ ಇತ್ಯಾದಿ ವಿಷಯಗಳ ಸಂಶೋಧನೆ ಮಾಡಿದವರಿಗೆ ಪ್ರಶಸ್ತಿಗಳನ್ನು ಘೋಷಿಸಲಾಗಿದೆ.

ವ್ಯಕ್ತಿಗಳಿಗಷ್ಟೇ ಅಲ್ಲ, ಸಂಸ್ಥೆಗಳಿಗೂ ಇಗ್ನೊಬೆಲ್ ನೀಡಲಾಗುತ್ತದೆ. ಲಂಚ ತೆಗೆದುಕೊಳ್ಳದ ಪೊಲೀಸರಿಗೆ ವಿಶೇಷ ಭತ್ಯೆಯನ್ನು ಘೋಷಿಸಿದ ಬ್ಯಾಂಕಾಕ್ ನಗರದ ಪೊಲೀಸ್ ವಿಚಕ್ಷಣಾ ದಳಕ್ಕೆ ಮೂರು ವರ್ಷಗಳ ಹಿಂದೆ ಅರ್ಥಶಾಸ್ತ್ರ ವಿಭಾಗದ ಪ್ರಶಸ್ತಿಯನ್ನು ಘೋಷಿಸಲಾಗಿತ್ತು. ಭತ್ಯೆ ಪಡೆಯಲೆಂದೇ ಲೆಕ್ಕಪತ್ರ ವಿಭಾಗದ ಅಧಿಕಾರಿಗೆ ಲಂಚದ ಆಮಿಷ ಒಡ್ಡುವ ಪೊಲೀಸರಿಗೆ ಮುಂದಿನ ವರ್ಷ ಪ್ರಶಸ್ತಿ ಘೋಷಿಸಬಹುದೇನೊ.

ಪೊಲೀಸರೆಂದರೆ ರಸ್ತೆ, ರಸ್ತೆ ಎಂದರೆ ಉಬ್ಬು(ಹಂಪ್)ಗಳ ನೆನಪು ಬಂತೆ? ರಸ್ತೆ ಉಬ್ಬಿನ ಮೇಲೆ ವಾಹನ ನೆಗೆಯುವಾಗ ಕಿಬ್ಬೊಟ್ಟೆಯಲ್ಲಿ ಉಂಟಾಗುವ ನೋವನ್ನು ಅಳೆಯುತ್ತಿದ್ದರೆ ಅಪೆಂಡಿಸೈಟಿಸ್ ರೋಗ ಯಾರಲ್ಲಿ ಉಲ್ಬಣ ಸ್ಥಿತಿಯಲ್ಲಿದೆ ಎಂಬುದನ್ನು ಕರಾರುವಾಕ್ಕಾಗಿ ನಿರ್ಧರಿಸಬಹುದು ಎಂದು ಐದು ವೈದ್ಯರ ತಂಡವೊಂದು ಸಂಶೋಧನಾ ಪ್ರಬಂಧವನ್ನು ಬರೆದಿತ್ತು. ಆ ಇಡೀ ತಂಡಕ್ಕೆ 2015ರಲ್ಲಿ ಪ್ರಶಸ್ತಿ ಬಂತು. ಅಟ್ಲಾಂಟಾ ಮೃಗಾಲಯದಲ್ಲಿ ವಿವಿಧ ಪ್ರಾಣಿಗಳು ಮೂತ್ರ ವಿಸರ್ಜನೆ ಮಾಡುವ ವೈಖರಿಯನ್ನು ನಾನಾ ಕೋನಗಳಲ್ಲಿ ವಿಡಿಯೊಗ್ರಫಿ ಮಾಡಿ, ಮೂತ್ರದ ಮೊತ್ತವನ್ನು ನಿಖರವಾಗಿ ಅಳೆದು ನೋಡಿ, ಮೂರು ಕಿಲೋಕ್ಕಿಂತ ಹೆಚ್ಚಿನ ತೂಕವಿರುವ ಎಲ್ಲ ದೊಡ್ಡ ಪ್ರಾಣಿಗಳೂ 21 ಸೆಕೆಂಡ್‌ಗಳಲ್ಲಿ ಮೂತ್ರ ವಿಸರ್ಜನೆ ಮಾಡಿ ಮುಗಿಸುತ್ತವೆ ಎಂದು ಪತ್ತೆ ಹಚ್ಚಿದ ಭೂಪನಿಗೆ 2014ರ ಪ್ರಶಸ್ತಿ ಲಭಿಸಿದೆ. 21 ಸೆಕೆಂಡ್ ಎಂದರೆ ತೀರ ಖಚಿತವೇನಲ್ಲ. ಅದಕ್ಕಿಂತ 13 ಸೆಕೆಂಡ್ ಹೆಚ್ಚು ಅಥವಾ ಕಮ್ಮಿ ಇರಬಹುದು ಎಂದು ಆತ ನಿಖರವಾಗಿ ಹೇಳಿದ್ದ. ಹಾಗೆಯೇ ಆನೆಗಳ ಕಾಲು, ಬಾಲ, ಕಿವಿಗಳನ್ನು ಅಳೆದು ನೋಡಿಯೇ ಇಡೀ ಆನೆಯ ಗಾತ್ರ ಮತ್ತು ವಿಸ್ತೀರ್ಣವನ್ನು ಅಳೆಯಬಲ್ಲ ಗಣಿತ ಸೂತ್ರವನ್ನು ಮಂಡಿಸಿದ ಕೇರಳದ ಶ್ರೀಕುಮಾರ್ ಎಂಬ ವೆಟರ್ನರಿ ತಜ್ಞನೊಬ್ಬ ಇಗ್ನೊಬೆಲ್ ಪಡೆದಿದ್ದಾನೆ. ಯಾವ ಆನೆಗೆ ಎಷ್ಟು ಡೋಸ್ ಗ್ಲುಕೋಸ್ ಅಥವಾ ಎನಿಮಾ ಕೊಡಬೇಕು ಎಂಬುದನ್ನು ಕಿವಿ-ಬಾಲ ಅಳೆಯುವ ಮೂಲಕವೇ ನಿರ್ಧರಿಸಬಹುದೆಂದು ಹೇಳಿ ಅದಕ್ಕೆ ತಕ್ಕ ಕೋಷ್ಟಕವನ್ನು ರೂಪಿಸಿದ ಖ್ಯಾತಿ ಈತನದು.


ನಾವು ಭಾರತೀಯರು ಮನೆಯಲ್ಲಿ ಸಾಕಿದ ಗೋವುಗಳಿಗೆ ಹೆಸರಿಟ್ಟು ಕರೆಯುತ್ತೇವೆ. ಗಂಗೆ ಬಾರೆ, ಗೌರಿ ಬಾರೆ ಎಂದು ''ಗೋವಿನ ಹಾಡು'' ಬರೆದ ಅನಾಮಿಕನೇ ಅಷ್ಟೊಂದು ಹೆಸರುಗಳನ್ನು ದಾಖಲಿಸಿದ್ದನಲ್ಲ? ಆದರೆ ಪಾಶ್ಚಾತ್ಯ ದೇಶಗಳ ದೊಡ್ಡ ದೊಡ್ಡ ಡೇರಿಗಳಲ್ಲಿ ಹೆಸರುಗಳ ಬದಲು ಬರೀ ಆಧಾರ್ ಸಂಖ್ಯೆಯ ಮಾದರಿಯಲ್ಲಿ ನಂಬರಿಂಗ್ ಮಾಡುತ್ತಾರೆ. ಹಾಗೆ ಮಾಡುವ ಬದಲು ಹೆಸರು ಇಟ್ಟು ಗೋವುಗಳನ್ನು(ಹಾಲು) ಕರೆದರೆ ವರ್ಷಕ್ಕೆ ಸರಾಸರಿ 285 ಲೀಟರ್ ಹೆಚ್ಚು ಹಾಲು ಲಭಿಸುತ್ತದೆ ಎಂದು ಬ್ರಿಟನ್ನಿನ ಕ್ಯಾದರೀನ್ ಡಗ್ಲಾಸ್ ಎಂಬಾಕೆ ಸಂಶೋಧನೆ ಮಾಡಿ ಇಗ್ನೊಬೆಲ್ ಪಡೆದಿದ್ದಾಳೆ. ಗಂಗೆ, ತುಂಗೆ, ಗೌರಿ ಎಂಬೆಲ್ಲ ಹೆಸರು ಬಂದಾಗ ಗೌರಿ ನಂದಾ ಹೆಸರೂ ಕೆಲವರಿಗೆ ನೆನಪಾಗಬಹುದು. ಹೌದು, ಅಮೆರಿಕದ ಎಮ್ಐಟಿಯಲ್ಲಿ ಕೆಲಸ ಮಾಡುತ್ತಿರುವ ಗೌರಿ ನಂದಾ ಎಂಬಾಕೆಗೂ 2005ರಲ್ಲಿ ಇಗ್ನೊಬೆಲ್ ಪ್ರಶಸ್ತಿ ಸಿಕ್ಕಿದೆ. ಅವರು ಒಂದು ವಿಲಕ್ಷಣ ಅಲಾರ್ಮ್ ರೂಪಿಸಿದ್ದಾರೆ. ಬೆಳಗ್ಗೆ ಅದು ಅಲಾರ್ಮ್ ಹೊಡೆದು ತಕ್ಷಣವೇ ಉರುಳುತ್ತ ನಿಮ್ಮ ಕೈಗೆ ಸಿಗದಂತೆ ದೂರ ಉರುಳಿ ಹೋಗುತ್ತದೆ. ಇಗ್ನೊಬೆಲ್ ಪ್ರಶಸ್ತಿಯಿಂದ ಖ್ಯಾತಿ ಮತ್ತು ಹಣ ಗಳಿಸಿದ ಖ್ಯಾತಿ ಇವರಿಗೆ ಲಭಿಸಿದೆ. ಲಕ್ಷಾಂತರ ಜನರು ಗೌರಿಯವರ ಅಲಾರ್ಮನ್ನು ಖರೀದಿಸಿದ್ದಾರೆ.

ಹಣದ ಬಗ್ಗೆ ಸಂಶೋಧನೆ ಮಾಡಿ ಹಣವನ್ನು ಗಳಿಸಿದ ರವಿ ಬಾತ್ರಾ ಎಂಬವರ ಕತೆಗೆ ಈಗ ಬರೋಣ. ಆತ ನೆನಪಿದ್ದಾರೆ ತಾನೆ? ವಿಶ್ವದಾದ್ಯಂತ ಭಾರೀ ಹಣದುಬ್ಬರ ಆಗಲಿದೆಯೆಂದು ಹೇಳಿ 1990ರಲ್ಲಿ 'ದಿ ಗ್ರೇಟ್ ಡಿಪ್ರೆಶನ್' ಎಂಬ ಗ್ರಂಥವನ್ನು ಬರೆದ ಈ ಅರ್ಥತಜ್ಞನಿಗೆ ಮೂರು ವರ್ಷಗಳ ನಂತರ ಇಗ್ನೊಬೆಲ್ ಪ್ರಶಸ್ತಿ ಸಿಕ್ಕಿದೆ. ಡಿಪ್ರೆಶನ್ ಆಗಲಿಲ್ಲ ಆದರೆ ಬಿಸಿ ದೋಸೆಯಂತೆ ಗ್ರಂಥದ ಪ್ರತಿಗಳು ಮಾರಾಟವಾದವು. ಜಗತ್ತನ್ನೇ ಹೆದರಿಸಿ ತನ್ನೊಬ್ಬನ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಂಡಿದ್ದಕ್ಕೆ ಬಾತ್ರಾಗೆ ಪ್ರಶಸ್ತಿಯನ್ನು ಘೋಷಿಸಲಾಯಿತು. ಆದರಿಂದಾಗಿ ತನ್ನಂಥ ಅರ್ಥಶಾಸ್ತ್ರಜ್ಞನನ್ನು ಲೇವಡಿ ಮಾಡಿದರಲ್ಲ ಎಂದು ಸ್ವತಃ ಲೇಖಕನೇ ಡಿಪ್ರೆಶನ್‌ಗೆ ಹೋಗಿರಲಿಕ್ಕೂ ಸಾಕು.

ಅವರು ಹೋಗಿರಲಿ. ನಾವು ಹತ್ತಿರಕ್ಕೆ ಬರೋಣ. ಬೆಂಗಳೂರಿನವರಿಗೂ ಇಗ್ನೊಬೆಲ್ ಲಭಿಸಿದ್ದು ಗೊತ್ತೆ? ರವಿ ಬಾತ್ರಾ ಥರಾ ಹಾಗೆಲ್ಲ ಚಿಕ್ಕಪುಟ್ಟ ವಿಷಯಗಳ ಬಗ್ಗೆ ಖಿನ್ನತೆ ಅಥವಾ ಮಾನಸಿಕ ಕ್ಲೇಶ ಅನುಭವಿಸುವವರು ಇತರರಿಗಿಂತ ಹೆಚ್ಚಾಗಿ ಮೂಗಿನ ಕಿಟ್ಟವನ್ನು ತೆಗೆಯುತ್ತಿರುತ್ತಾರೆ ಎಂದು ನಮ್ಮ ನಿಮ್ಹಾನ್ಸ್‌ನ ಚಿತ್ತರಂಜನ ಅಂಡ್ರಾಡೆ ಮತ್ತು ಜೊತೆಗಾರ ಶ್ರೀಹರಿ ಎಂಬಿಬ್ಬರು ಸಂಶೋಧನೆ ಮಾಡಿ ಪ್ರಬಂಧ ಬರೆದರು. ಬಾತ್ರಾ ಹೆಸರನ್ನು ಅವರು ಪ್ರಸ್ತಾಪ ಮಾಡಿರಲಿಲ್ಲ ಎನ್ನಿ. ಆದರೆ ಹೆಚ್ಚಾಗಿ ಮಾನಸಿಕ ತೊಳಲಾಟದಲ್ಲಿ ಬಿದ್ದ ಹದಿವಯಸ್ಸಿನವರೇ ಹೆಚ್ಚಾಗಿ ಮೂಗಿನ ಕಿಟ್ಟವನ್ನು ಕೀಳುತ್ತಿರುತ್ತಾರೆ ಎಂಬುದು ಅವರಿಬ್ಬರ ಪ್ರತಿಪಾದನೆಯಾಗಿತ್ತು.

ಇಂಥ ಸಂಶೋಧನೆಗೂ ವಿಶ್ವಮಟ್ಟದ ಖ್ಯಾತಿ ಸಿಗುತ್ತದೆಯೇ ಎಂದು ಈಗ ಬೇಕಿದ್ದರೆ ನೀವೂ ಮೂಗಿಗೆ ಬೆರಳಿಡಬಹುದು. ಬೇಕಿದ್ದರೆ ಇಂಪ್ರಾಬಬಲ್ ಡಾಟ್ ಕಾಮ್ ಎಂಬ ವೆಬ್‌ಸೈಟಿಗೆ ಹೋಗಿ ಇನ್ನೂ ತಮಾಷೆಯ ಸಂಶೋಧನೆಗಳನ್ನು ಬಾಯಿಪಾಠ ಮಾಡಿಕೊಂಡು ಯಾರನ್ನಾದರೂ – ಏಕೆ, ದೇವರನ್ನೂ ಗೊಳ್ಳೆಂದು ನಗಿಸಬಹುದು. ಯಾರಿಗೆ ಗೊತ್ತು, ನೀವೂ ಒಂದು ಬಿಗ್‌ಬ್ಯಾಂಗ್ ಸಿಡಿತಕ್ಕೆ ಕಾರಣವಾಗಿ ಹೊಸ ವಿಶ್ವವನ್ನೇ ಸೃಷ್ಟಿಸಬಹುದು.

❑



# ಪಂಚ್ ಪದ್ಯಗಳು

**ಅಮೇರಿಕ ಅಮೇರಿಕ** **- ಎಚ್. ಡುಂಡಿರಾಜ್**

*-1-*

*ರಾತ್ರಿ ಹೊತ್ತು ನಾವೆಲ್ಲ*
*ನಿದ್ರಿಸುತ್ತಿರುವಾಗ*
*ಹೋಗುತ್ತದೆ ಕಳ್ಳರ ಹಾಗೆ*
*ನೂರಾರು ಪ್ರತಿಭಾವಂತ*
*ಯುವಜನರನ್ನು ಹೊತ್ತ*
*ವಿಮಾನ*
*ಅಮೇರಿಕಾದ ಕಡೆಗೆ !*

*-2-*

*ಅಮೇರಿಕಾದಲ್ಲಿ ಕೂಡಾ*
*ಇದ್ದಾರೆ ಬಡ ಬಗ್ಗರು*
*ಹೆಲ್ಪ್ ಮಿ ಫಲಕ ಹಿಡಿದು*
*ಭಿಕ್ಷೆ ಬೇಡುವ ಬೆಗ್ಗರು*
*ಮತ್ತು ಅವರಿಗೆ*
*ಏನೂ ಕೊಡದೆ*
*ಮುಂದೆ ಹೋಗುವ ಜುಗ್ಗರು !*

*-3-*

*ಭಾರೀ ಬಂಗಲೆ ಇದ್ದರೂ*
*ಏನು ಪ್ರಯೋಜನ ?*
*ಮನೆಯೊಳಗೆ ಜಾಗವೇ*
*ಇಲ್ಲದವರ ಹಾಗೆ ಜನ*
*ರಸ್ತೆಯಲ್ಲೇ ಮಾಡುವರು*
*ಆಲಿಂಗನ, ಚುಂಬನ !*

*-4-*

*ದುಬಾರಿ ಕಾರುಗಳಿದ್ದರೂ*
*ಅಮೇರಿಕಾದ ಜನರು*
*ಮಾಡುವುದಿಲ್ಲ ಹಾರನ್ನು*
*ನಮ್ಮಲ್ಲಿ ಕೆಲವರು*
*ಭಾರೀ ಸದ್ದು ಮಾಡುವರು*
*ತೋರಿಸಲು ತಮ್ಮ ಕಾರನ್ನು !*

*-5-*

*ಅಮೇರಿಕಾದಲ್ಲಿ*
*ಕೊರೆಯುವ ಚಳಿ*
*ಮಾಡಿಕೊಳ್ಳುವರು ಜನರು*
*ಮೈಬಿಸಿ*
*ಬಹಿರಂಗವಾಗಿ*
*ಚುಂ-ಬಿಸಿ !*

❑

# ವ್ಯಂಗ್ಯ ಮೆಲುಕು

- ಪ್ರಕಾಶ್ ಶೆಟ್ಟಿ



